

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 11 ಗುರುವಾರ 2025

46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 145 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಅನರ್ಹ ಬಿಪಿಎಲ್ ಕಾರ್ಡ್ ತಕ್ಷಣ ರದ್ದುಗೊಳಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಖಡಕ್ ಸೂಚನೆ

■ ಈಗಾಗಲೇ 3.65 ಲಕ್ಷ ಕಾರ್ಡ್ ರದ್ದಾಗಿವೆ ■ ಅರ್ಹರಿದ್ದರೆ ಅವರಿಗೆ ಕೂಡಲೇ ಬಿಪಿಎಲ್ ಕಾರ್ಡ್ ನೀಡಿ ■ ಹಾಗೆಯೇ ಅರ್ಹರಿಗೆ ಶೀಘ್ರ ಮನೆಗಳ ಹಸ್ತಾಂತರಿಸಿ





“ಈಗಾಗಲೇ ಗುರುತಿಸಲಾಗಿರುವ ಅನರ್ಹ ಬಿಪಿಎಲ್ ಪಡಿತರ ಚೀಟಿದಾರರ ಪೈಕಿ 3,65,614 ಪಡಿತರ ಚೀಟಿಗಳನ್ನು ರದ್ದು ಮಾಡಲಾಗಿದೆ. ಅನ್ನಭಾಗ್ಯ ಯೋಜನೆಯಡಿ ಅಕ್ಕಿಯ ಜೊತೆಗೆ ಪೌಷ್ಟಿಕ ಧಾನ್ಯ, ಅಗತ್ಯ ಆಹಾರ ಸಾಮಗ್ರಿಗಳನ್ನೊಳಗೊಂಡ ಕಿಟ್ ಒದಗಿಸುವ ಕುರಿತು ಪರಿಶೀಲಿಸಲಾಗುವುದು. ಈ ಕುರಿತು ಅಧಿಕಾರಿಗಳು ಪ್ರಸ್ತಾವನೆ ಸಲ್ಲಿಸಲಿ. –ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ರಾಜ್ಯದ ಜನತೆಗೆ ಬಿಗ್ ಶಾಕ್ ನೀಡಿದ್ದು, 3.65 ಲಕ್ಷ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗಿದ್ದು, ಇನ್ನೂ ಸಾಕಷ್ಟು ಜನ ಅನರ್ಹರು ಬಿಪಿಎಲ್ ಕಾರ್ಡ್ ಹೊಂದಿದ್ದು, ಅವುಗಳನ್ನು ರದ್ದುಪಡಿಸುವಂತೆ ಖಡಕ್ ಸೂಚನೆ ನೀಡಿದ್ದಾರೆ.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಈ ಸೂಚನೆ ನೀಡಿದ್ದಾರೆ. ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಪಡಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆದರೆ ಅರ್ಹ ಬಿಪಿಎಲ್ ಕಾರ್ಡುದಾರರಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಅರ್ಹರು ಯಾರಾದರೂ ಬಿಟ್ಟು ಹೋಗಿದ್ದರೆ ಅವರಿಗೆ ಬಿಪಿಎಲ್ ಕಾರ್ಡ್ ನೀಡಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದವರಿಗೆ ಹೊಸ ನ್ಯಾಯಬೆಲೆ ಅಂಗಡಿಗಳನ್ನು ಆದ್ಯತೆ ಮೇಲೆ ನೀಡಲು ಕ್ರಮ ಕೈಗೊಳ್ಳಬೇಕು. ▸ 6ನೇ ಪುಟಕ್ಕೆ

ಒಳಪುಟಗಳಲ್ಲಿ...



ಮೈಸೂರು ಅರಮನೆಯಲ್ಲಿರುವ ನಾಡ ಅಧಿದೇವತೆ ಚಾಮುಂಡೇಶ್ವರಿ ಮೂರ್ತಿಯನ್ನು ಬುಧವಾರ ಅರಮನೆ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಶ್ರೀ ಚಾಮುಂಡೇಶ್ವರಿ ಪ್ರಾಧಿಕಾರದ ಕಾರ್ಯದರ್ಶಿ ಶ್ರೀಮತಿ ರೂಪಾ ಅವರಿಗೆ ಹಸ್ತಾಂತರಿಸಿದರು. ದಸರಾ ಉದ್ಘಾಟನೆ ಬಳಿಕ ವಿಜಯದಶಮಿಯಂದು ಮತ್ತೆ ಮೂರ್ತಿಯನ್ನು ಅರಮನೆಗೆ ತಂದು ಚಿನ್ನದ ಅಂಬಾರಿಯಲ್ಲಿರಿಸಿ ಮೆರವಣಿಗೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ವ್ಯವಸ್ಥೆ ಮಾಡಲಾಗುತ್ತದೆ.

ಯುವ ತಂಡಗಳಿಂದ ನಾಡು, ನುಡಿ ವೈಭವ ಅನಾವರಣ
ತಾರಾ ಮೆರುಗಿನೊಂದಿಗೆ ಯುವ ಸಂಭ್ರಮಕ್ಕೆ ವರ್ಣರಂಜಿತ ಚಾಲನೆ

● ಯುವ ರಾಜ್‌ಕುಮಾರ್–ಅಮೃತಾ ಅಯ್ಯಂಗಾರ್ ಡ್ಯಾನ್ಸ್ ಮೋಡಿ ● ಮೇಳೈಸಿದ ಸಂಗೀತ–ನೃತ್ಯದ ರಂಗು

ಮೈಸೂರು,ಸೆ.10(ಪಿಎಂ)–ಸೋನೆ ಮಳೆ ಸಿಂಚನದ ಜೊತೆಗೆ ಕನ್ನಡ ಸಿನಿಮಾದ ತಾರಾ ಮೆರುಗು ಹಾಗೂ ನೆರೆದಿದ್ದ ಯುವ ಜನರ ಮುಗಿಲು ಮುಟ್ಟುವ ಹರ್ಷೋದ್ಗಾರದೊಂದಿಗೆ ದಸರಾ ಮಹೋತ್ಸವದ ಮುನ್ನುಡಿಯಾದ 'ಯುವ ಸಂಭ್ರಮ'ಕ್ಕೆ ಬುಧವಾರ ವರ್ಣರಂಜಿತ ಚಾಲನೆ ದೊರೆಯಿತು.

ಎದೆಗಪ್ಪಳಿಸುವಂತಹ ಅಬ್ಬರದ ಸಂಗೀತ... ರಂಗು ರಂಗಿನ ನೃತ್ಯ ಪ್ರಕಾರದ ವೈಭವ ಮೇಳೈಸಿ ಯುವ ಜನತೆಯಲ್ಲಿ ಉಲ್ಲಾಸ ಉತ್ಸಾಹ ಮೂಡಿಸುವ ಮೂಲಕ ಮೊದಲ ದಿನದ ಯುವ ಸಂಭ್ರಮ ಕಳೆಗಟ್ಟಿತು. ಬ್ಯಾಂಗಲ್ ಬಂಗಾರಿ ಗೋಲ್ಡನ್ ಅಂಬಾರಿ... ಜನಪ್ರಿಯ ಗೀತೆಗೆ ಸಿನಿಮಾ ತಾರೆಯರಾದ ಯುವ ರಾಜ್‌ಕುಮಾರ್ ಹಾಗೂ ಅಮೃತ ಅಯ್ಯಂಗಾರ್ ಸಾಂಕೇತಿಕವಾಗಿ ಹೆಜ್ಜೆ ಹಾಕುವ ಮೂಲಕ ಯುವಪಡೆ ಹುಚ್ಚೆದ್ದು ಕುಣಿಯುವಂತೆ ಮಾಡಿದರು. ಜೊತೆಗೆ ವಿವಿಧ ಕಾಲೇಜು ವಿದ್ಯಾರ್ಥಿಗಳ ತಂಡಗಳ ವೈವಿಧ್ಯಮಯ ಹಾಗೂ ವಿಭಿನ್ನ ನೃತ್ಯ ಪ್ರದರ್ಶನಕ್ಕೆ ನೆರೆದಿದ್ದ ಯುವಪಡೆ ಕುಣಿದು ಕುಪ್ಪಳಿಸಿ, ಸಂಭ್ರಮಿಸಿತು.

ಪ್ರತಿವರ್ಷದಂತೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿರುವ ಯುವ ಸಂಭ್ರಮ ಆರಂಭಗೊಳ್ಳುವ ಮೂಲಕ ದಸರಾ ಸಡಗರ ಕಳೆಗಟ್ಟಿತು. ಚಿತ್ತಾರ ಮೂಡಿಸುತ್ತಿದ್ದ ಎಲ್‌ಇಡಿ ಪರದೆಗಳು, ವಿದ್ಯುತ್ ದೀಪಗಳಿಂದ ಶೃಂಗಾರಗೊಂಡಿದ್ದ ವೇದಿಕೆಯಲ್ಲಿ ತಾರಾ ಮೆರುಗು ಮೇಳೈಸಿ ರಂಗು ಮೂಡಿಸಿತು.

ಮೈಸೂರು ಬೆಡಗಿಯ ಬೆಡಗು ಬಿನ್ನಾಣ: ಲವ್ ಮಾಕ್ಟೇಲ್ ಸಿನಿಮಾದ ಮೂಲಕ ಜನಪ್ರಿಯತೆ ಗಳಿಸಿರುವ ನಟಿ ಅಮೃತಾ ಅಯ್ಯಂಗಾರ್ ಬೆಡಗು ಬಿನ್ನಾಣದೊಂದಿಗೆ ಯುವಪಡೆ ಮನಕ್ಕೆ ಲಗ್ಗೆ ಇಟ್ಟರು. ಎದ್ದು ನಿಂತು ಮುಗುಳ್ನಕ್ಕು ಮಾತಿಗಿಳಿಯುತ್ತಿದ್ದಂತೆ ಶಿಳ್ಳೆ, ಕೇಕೆ, ಚಪ್ಪಾಳೆಯೊಂದಿಗೆ ಯುವಪಡೆ ಸಂಭ್ರಮಿಸಿತು.

'ನಮಸ್ಕಾರ ಮೈಸೂರು... ಹೇಗಿದ್ದೀರಾ ಎಲ್ಲರೂ...' ಎಂದು ಅಮೃತಾ ಮಾತು ಆರಂಭಿಸುತ್ತಿದ್ದಂತೆ ಮತ್ತೆ ಯುವಜನರ ಹರ್ಷೋದ್ಗಾರದ ಅಲೆ ಎದ್ದಿತು. ನನ್ನೂರಿನಲ್ಲಿ ನಿಂತು ಮಾತನಾಡುತ್ತಿರುವುದು ತುಂಬ ಖುಷಿ ತಂದಿದೆ. ಇದೇ ವೇದಿಕೆಯಲ್ಲಿ ನನ್ನ ಶಾಲಾ–ಕಾಲೇಜು ದಿನಗಳಲ್ಲಿ ಡ್ಯಾನ್ಸ್ ಮಾಡಿದ್ದೇನೆ. ಇವತ್ತು ಇಷ್ಟೊಂದು ಜನ ನೋಡಿ ನನಗೆ ಖುಷಿಯಾಗುತ್ತಿದೆ ▸ 6ನೇ ಪುಟಕ್ಕೆ



ಬುಧವಾರ ಚಾಲನೆಗೊಂಡ ಯುವ ಸಂಭ್ರಮದಲ್ಲಿ ಬ್ಯಾಂಗಲ್ ಬಂಗಾರಿ ಗೀತೆಗೆ ಯುವ ರಾಜ್‌ಕುಮಾರ್ ಹಾಗೂ ಅಮೃತಾ ಅಯ್ಯಂಗಾರ್ ಜೋಡಿಯ ಡ್ಯಾನ್ಸ್ ಮೋಡಿ.


ದೇಶ–ವಿದೇಶಗಳಲ್ಲೂ ಜನಪ್ರಿಯ

“ಮೈಸೂರು ದಸರಾ ಕೇವಲ ಜಿಲ್ಲೆ, ರಾಜ್ಯಕ್ಕೆ ಸೀಮಿತವಲ್ಲ. ನಮ್ಮ ಈ ನಾಡಹಬ್ಬವು ದೇಶ–ವಿದೇಶಗಳಲ್ಲೂ ಜನಪ್ರಿಯ. ಯುವ ಸಂಭ್ರಮದಲ್ಲಿ ವಿವಿಧ ಕಾಲೇಜು ತಂಡಗಳು ತಮ್ಮ ಪ್ರತಿಭೆ ಅನಾವರಣಗೊಳಿಸಲಿವೆ. ಈ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಲೆಂದು ಶುಭ ಹಾರೈಸುತ್ತೇನೆ. –ಕೆ.ವೆಂಕಟೇಶ್, ಸಚಿವರು.

ಅಂದು ಯುವ ಸಂಭ್ರಮ ಪ್ರಾರಂಭಿಸಿದೆ

“ನಾನು ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗ 2018ರಲ್ಲಿ ಕಾಲೇಜು ವಿದ್ಯಾರ್ಥಿಗಳ ಪ್ರತಿಭಾನ್ವೇಷಣೆಗೆ ಅವಕಾಶ ಕಲ್ಪಿಸಲೆಂದು ಯುವ ಸಂಭ್ರಮ ಪ್ರಾರಂಭಿಸಲಾಯಿತು. 500 ಕಾಲೇಜು ತಂಡಗಳು ರಸಸಂಜೆಯಲ್ಲಿ ಮನರಂಜನೆ ರಸದೌತಣ ನೀಡಲಿವೆ. ಯುವ ಜನರು ಸೇರಿದಂತೆ ಎಲ್ಲರೂ ಉತ್ಸವದಲ್ಲಿ ಜವಾಬ್ದಾರಿಯಿಂದ ವರ್ತಿಸೋಣ. ಹುಚ್ಚಾಟ, ರಂಪಾಟ ಹಾಗೂ ಅಹಿತಕರ ಘಟನೆಗಳಿಗೆ ಆಸ್ಪದ ನೀಡದೇ ಸಂಭ್ರಮಿಸೋಣ. –ಜಿ.ಟಿ.ದೇವೇಗೌಡ, ಶಾಸಕರು.

ಐದನೇ ವರ್ಷದ ಪುಣ್ಯಸ್ಮರಣೆ



ಶ್ರೀ ಜವರಪ್ಪ ನವರು

(ಮಾದಯ್ಯ ಉ|| ಕತ್ತೆನಾಗಯ್ಯನವರ ದ್ವಿತೀಯ ಪುತ್ರ)

ನಿಧನ: 10-09-2020

ಮತ್ತೆ ಹುಟ್ಟಿ ಬನ್ನಿ

ನೀವು ನಮ್ಮನ್ನಗಲಿ ಐದು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಾಳದಲ್ಲಿ ಹಸಿರಾಗಿದೆ.
ನೀವು ತೋರಿದ ದಾರಿಯಲ್ಲೇ ಸಾಗುತ್ತಿದ್ದೇವೆ. ನಿಮ್ಮ ಆತ್ಮಕ್ಕೆ ಸದಾ ಚಿರಶಾಂತಿ

ಕೋರುವ: ಪತ್ನಿ–ಜಯಮ್ಮ, ಮಕ್ಕಳು ಹಾಗೂ ಮೊಮ್ಮಕ್ಕಳು

ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ರದ್ದುಪಡಿಸಲು ಆಗ್ರಹಿಸಿ ಎಐಡಿಎಸ್‌ಒ ಪ್ರತಿಭಟನೆ



ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ರದ್ದುಪಡಿಸಲು ಆಗ್ರಹಿಸಿ ಬುಧವಾರ ಎಐಡಿಎಸ್‌ಒ ಸಂಘಟನೆಯ ನೇತೃತ್ವದಲ್ಲಿ ವಿದ್ಯಾರ್ಥಿಗಳು ಮೈಸೂರು ಹಳೇ ಡಿಸಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು,ಸೆ.10(ಜಿಎ)–ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಎನ್‌ಆರ್‌ಐ ಕೋಟಾ ರದ್ದುಪಡಿಲು ಆಗ್ರಹಿಸಿ ಎಐಡಿಎಸ್‌ಒ ಸಂಘಟನೆ ನೇತೃತ್ವದಲ್ಲಿ ವಿದ್ಯಾರ್ಥಿಗಳು ನಗರದ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿ ಪ್ರತಿಭಟನೆ ನಡೆಸಿದರು.

2025–26ನೇ ಸಾಲಿನಿಂದ ರಾಜ್ಯದ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಶೇ.15 ಎನ್‌ಆರ್‌ಐ ಕೋಟಾ ಆರಂಭಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ. ಈ ನಿರ್ಧಾರ ವೈದ್ಯಕೀಯ ಶಿಕ್ಷಣದ ಕನಸು ಹೊತ್ತ ರಾಜ್ಯದ ಬಡ ವಿದ್ಯಾರ್ಥಿಗಳನ್ನು ಆತಂಕಕ್ಕೆ ತಳ್ಳಿದೆ. ಈಗಾಗಲೇ ಅಖಿಲ ಭಾರತ ಕೋಟಾದಡಿ ಶೇ.15 ಸೀಟುಗಳನ್ನು ನೀಡ ಲಾಗುತ್ತಿದೆ. ಇನ್ನೂ ಶೇ.15 ಸೀಟುಗಳು ಎನ್‌ಆರ್‌ಐ ಕೋಟಾಗೆ ನೀಡಿದರೆ 200 ವಿದ್ಯಾರ್ಥಿಗಳ ಒಂದು ಬ್ಯಾಚಿನಲ್ಲಿ 140 ಸೀಟುಗಳು ಮಾತ್ರ ರಾಜ್ಯದ ವಿದ್ಯಾರ್ಥಿಗಳಿಗೆ ಉಳಿದಂತಾಗುತ್ತದೆ ಎಂದು ಪ್ರತಿಭಟನಾಕಾರರು ಕಿಡಿಕಾರಿದರು.

ಸರಕಾರಿ ವೈದ್ಯಕೀಯ ಕಾಲೇಜುಗಳು ಆರ್ಥಿಕ ಹಿನ್ನೆಲೆ ಲೆಕ್ಕಿಸದೆ ಅರ್ಹ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಉನ್ನತ ಶಿಕ್ಷಣ ಒದಗಿಸಲು ಸ್ಥಾಪಿಸಲಾಗಿದೆ. ಶ್ರೀಮಂತ ಎನ್‌ಆರ್‌ಐ ವಿದ್ಯಾರ್ಥಿಗಳಿಗೆ ಸೀಟುಗಳನ್ನು ಮೀಸಲಿಡುವ ಮೂಲಕ, ವೈದ್ಯರಾಗಿ ಸಮಾಜಕ್ಕೆ ಸೇವೆ ಸಲ್ಲಿಸಲು ಬಯಸುವ ನೂರಾರು ಶ್ರಮಜೀವಿ, ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳ ಅವಕಾಶ ಕಡಿತಗೊಳಿಸಿದಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯ ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ 12,447 ಬೋಧಕ ಹುದ್ದೆಗಳು ಖಾಲಿ ಇರುವ ಸಮಯದಲ್ಲಿ, ಈ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಮೂಲ ಸೌಕರ್ಯ ಸುಧಾರಿಸಲು ಆದ್ಯತೆ ನೀಡಬೇಕು. ಬೋಧಕ ವರ್ಗ ಮತ್ತು ಸೌಲಭ್ಯ ಬಲಪಡಿಸುವುದು ನಿಜವಾದ ಅಗತ್ಯವಾಗಿದೆ. ಈ ಅಗತ್ಯಗಳನ್ನು ಪೂರೈಸಲು ಸರ್ಕಾರ ಮುಂದಾಗಬೇಕು ಮತ್ತು ಶೇ.15 ಎನ್‌ಆರ್‌ಐ ಕೋಟಾ ರದ್ದುಗೊಳಿಸುವ ಮೂಲಕ ಅರ್ಹ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಬೇಕೆಂದು ಒತ್ತಾಯಿಸಿದ ಅವರು, ಈ ನಿರ್ಧಾರ ಸರ್ಕಾರಿ ಕಾಲೇಜುಗಳನ್ನು ಖಾಸಗಿ ಸಂಸ್ಥೆಗಳಂತೆ ಲಾಭಗಳಿಸುವ ಕೇಂದ್ರಗಳಾಗಿ ಪರಿವರ್ತಿಸುವ ಅಪಾಯಕಾರಿ ಹೆಜ್ಜೆಯಾಗಿದೆ ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷೆ ಚಂದ್ರಕಲಾ, ಜಿಲ್ಲಾ ಕಾರ್ಯದರ್ಶಿ ನಿತಿನ್, ಜಿಲ್ಲಾ ಉಪಾಧ್ಯಕ್ಷೆ ಸ್ವಾತಿ, ಪದಾಧಿಕಾರಿಗಳಾದ ಚಂದ್ರಿಕಾ, ದಿಶ, ಅಂಜಲಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ರಾಜ್ಯದಲ್ಲಿ ಕೋಮುಗಲಭೆ ಮೂಲಕ ಕಾಂಗ್ರೆಸ್ ಸರ್ಕಾರ ತೆಗೆಯಲು ಅಮಿತ್ ಶಾ ಷಡ್ಯಂತ್ರ

- ಕರಾವಳಿ ಜಿಲ್ಲೆಗಳಿಂದ ಸಂಘ ಪರಿವಾರದವರ ಲಗ್ಗೆ
- ಕೋಮು ಪ್ರಚೋದನೆಗೆ ವ್ಯವಸ್ಥಿತ ಪಿತೂರಿ
- ಅವರೆಲ್ಲಾ ಸಂಘ ಪರಿವಾರದವರಲ್ಲ, ಗೂಂಡಾಗಳು
- ಸೆನ್ಸಾರ್ ಇಲ್ಲದೆ ಪ್ರತಾಪ್ ಸಿಂಹರಿಂದ ಟೀಕೆ

ಕೆಪಿಸಿಸಿ ವಕ್ತಾರ ಲಕ್ಷ್ಮಣ್ ಆರೋಪ



ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಸೆ.10(ಬಿಎಲ್‌ಯು)– ರಾಜ್ಯದಲ್ಲಿ ಕೋಮು ಗಲಭೆ ಸೃಷ್ಟಿಸಿ, ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ಎಂಬ ಕಾರಣ ನೀಡಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಮಾನತ್ತಿನಲ್ಲಿಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಷಡ್ಯಂತ್ರ ರೂಪಿಸಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆರೋಪಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು, ಮದ್ದೂರು, ದಾವಣಗೆರೆ ಸೇರಿದಂತೆ ಹಲವೆಡೆ ಬಿಜೆಪಿ ನಾಯಕರು ಕೋಮುಗಲಭೆ ಸೃಷ್ಟಿ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಬಾನು ಮುಷ್ತಾಕ್ ಅವರಿಂದ ಮೈಸೂರು ದಸರಾ ಉದ್ಘಾಟನೆಯನ್ನು ವಿರೋಧಿಸಿ ಚಾಮುಂಡಿಬೆಟ್ಟ ಚಲೋ ನಡೆಸಲು ಕರಾವಳಿ ಜಿಲ್ಲೆಗಳು ಸೇರಿದಂತೆ ಇತರೆಡೆಯಿಂದ ಸಾವಿರಾರು ಜನರು ನಿನ್ನೆ ಮೈಸೂರಿಗೆ ಬಂದಿದ್ದರು. ಇವರಲ್ಲಿ ಪ್ರತಿಭಟನೆಗೆ ಬಂದಿದ್ದ ನೂರಾರು ಜನರನ್ನು ಪೊಲೀಸರು ಬಂಧಿಸಿದ್ದಾರೆ. ಮೈಸೂರು ಪೊಲೀಸರು ಅಗತ್ಯ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದ ಕಾರಣ ಯಾವುದೇ ಅಹಿತಕರ ಘಟನೆಗಳು ಸಂಭವಿಸಲಿಲ್ಲ ಎಂದು ಲಕ್ಷ್ಮಣ ಸ್ಪಷ್ಟಪಡಿಸಿದರು.

ಅಮಿತ್ ಶಾ ಪಿತೂರಿ: ಮೈಸೂರು ದಸರಾಗೂ ಮಂಗಳೂರು, ಉಡುಪಿ, ಕೊಡಗು ಜಿಲ್ಲೆಗಳಿಗೆ ಏನು ಸಂಬಂಧ. ಅಲ್ಲಿನ ಜನರು ಪ್ರತಿಭಟನೆ ಮಾಡಲು ಇಲ್ಲಿಗೇಕೆ ಬರಬೇಕು ಎಂದು ಪ್ರಶ್ನಿಸಿದ ಲಕ್ಷ್ಮಣ್, ಸಣ್ಣ ವಿಚಾರವನ್ನು ದೊಡ್ಡದಾಗಿ ಬಿಂಬಿಸಿ ಕೋಮು ಗಲಭೆ ಸೃಷ್ಟಿ ಮಾಡುವುದು ಬಿಜೆಪಿಯವರ ಅಜೆಂಡಾ. ಈ ಮೂಲಕ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ ಎಂದು ಕಾರಣ ನೀಡಿ ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಅಮಾನತ್ತಿನಲ್ಲಿಡಲು ಅಮಿತಾ ಶಾ ಪಿತೂರಿ ನಡೆಸಿದ್ದಾರೆ ಎಂದು ಆಪಾದಿಸಿದರು.

ನಿನ್ನೆ ಪ್ರತಿಭಟನೆಗೆ ಆಗಮಿಸಿದ್ದವರು ಹಿಂದೂ ಸಭಾದ ಕಾರ್ಯಕರ್ತರಲ್ಲ, ಬದಲಿಗೆ ಅವರೆಲ್ಲಾ ಅಕ್ಷರಶಃ ಗೂಂಡಾಗಳು. ಇವರನ್ನು ಪೊಲೀಸರು ವಶಕ್ಕೆ ಪಡೆಯಲಿಲ್ಲವೆಂದರೆ ನಗರದಲ್ಲಿ ಅಹಿತಕರ ಘಟನೆ ನಡೆಯುತ್ತಿತ್ತು ಎಂದು ಹೇಳಿದರು.

ಮೈಸೂರು ಜನರಿಗೂ ಸಹನೆ ಇದೆ. ಬಿಜೆಪಿ ಸೇರಿದಂತೆ ಸಂಘ ಪರಿವಾರದವರ ಕೋಮು ಪ್ರಚೋದನೆ ಹೆಚ್ಚಾದರೆ ಮೈಸೂರು ಜನರು ಅವರನ್ನು ಅಟ್ಟಿಸಿಕೊಂಡು ಹೋಗಿ ಪಾಠ ಕಲಿಸುವ ದಿನ ದೂರವಿಲ್ಲ ಎಂದು ತಿಳಿಸಿದರು.

ಪ್ರತಾಪ್ ಸಿಂಹ ಹೇಳಿಕೆ ಅಸಂಬದ್ಧ: ತನ್ನನ್ನು ಟೀಕಿಸುವುದನ್ನು ತಡೆಯಲು ಮಾಜಿ ಸಂಸದ ಪ್ರತಾಪ್ ಸಿಂಹ ಅವರು ನ್ಯಾಯಾಲಯದಿಂದ ತಡೆಯಾಜ್ಞೆ ತರುತ್ತಾರೆ. ಆದರೆ ತಾನು ಮಾತ್ರ ಬೇರೆಯವರನ್ನು ಸೆನ್ಸಾರ್ ಇಲ್ಲದೆ ಬೈಯ್ಯುತ್ತಾರೆ. ಅವರು ನೀಡಿರುವ ಹೇಳಿಕೆಗಳು ಅಸಂಬದ್ಧವಾಗಿದೆ. ಯಾವುದೇ ಆಧಾರವಿಲ್ಲದೆ ಮನಸ್ಸಿಗೆ ತೋಚಿದಂತೆ ಹೇಳಿಕೆ ನೀಡುತ್ತಾರೆ ಎಂದು ಕಿಡಿಕಾರಿದರು.

ಮದ್ದೂರಲ್ಲಿ ಯಾರೂ ಕಲ್ಲು ತೂರಿಲ್ಲ; ಅವರೇ ತಲೆಗೆ ಜಜ್ಜಿಕೊಂಡು ಆಸ್ಪತ್ರೆ ಸೇರಿದ್ದಾರೆ

ಮದ್ದೂರಲ್ಲಿ ನಡೆದ ಗಣಪತಿ ವಿಸರ್ಜನೆ ಮೆರವಣಿಗೆ ವೇಳೆ ಮಸೀದಿ ಒಳಗಿಂದ ಯಾರೂ ಕಲ್ಲು ಬೀಸಿಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಸ್ಪಷ್ಟನೆ ನೀಡಿದರು.

ಈಗಾಗಲೇ ಪೊಲೀಸರು ಬಂಧಿಸಿರುವ 24 ಮಂದಿ ಕಲ್ಲು ತೂರಾಟ ಮಾಡಿದ್ದಾರೆ ಎಂಬುದಕ್ಕೆ ಯಾವುದೇ ಸಾಕ್ಷಿ ಇಲ್ಲ. ಯಾರು ಕಲ್ಲು ಹೊಡೆದಿಲ್ಲ ಎನ್ನುವುದಾದರೆ, ಈಗ ಆಸ್ಪತ್ರೆಯಲ್ಲಿರುವ ಗಾಯಾಳುಗಳಿಗೆ ಕಲ್ಲು ಹೊಡೆದವರು ಯಾರು ಎಂದು ಪ್ರಶ್ನಿಸಿದಾಗ, ಈ ವಿಚಾರವಾಗಿ ಬಿಜೆಪಿಯವರು ಕುತಂತ್ರ ರೂಪಿಸಿದ್ದು, ಅವರೆ ತಲೆಗೆ ಕಲ್ಲಿನಿಂದ ಜಜ್ಜಿಕೊಂಡು ನಾಟಕವಾಡುತ್ತಿದ್ದಾರೆ ಎಂದು ಆರೋಪಿಸಿದರು.

ಪ್ರತಿಯೊಂದು ಪ್ರಕರಣವನ್ನು ಬಿಜೆಪಿ ಮತ್ತು ಜೆಡಿಎಸ್‌ನವರು ಎನ್‌ಐಎ ತನಿಖೆಗೆ ವಹಿಸಿ ಎಂದು ಆಗ್ರಹ ಮಾಡುತ್ತಾರೆ. ಹಾಗಾದರೆ ಮದ್ದೂರಿನ ಪ್ರಕರಣವನ್ನು ಎನ್‌ಐಎ ತನಿಖೆಗೆ ವಹಿಸಲಿ. ಇದಕ್ಕೆ ಏಕೆ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ಲಕ್ಷ್ಮಣ್ ಪ್ರಶ್ನಿಸಿದರು. ಇದು ಪೂರ್ವನಿಯೋಜಿತ ಗಲಾಟೆಯಾಗಿದ್ದು, ಯಾರೂ ಕೂಡ ಮಸೀದಿಯಿಂದ ಕಲ್ಲು ತೂರಿಲ್ಲ. ಕೋಮು ಗಲಭೆ ಸೃಷ್ಟಿಸಲು ಅವಕಾಶಕ್ಕಾಗಿ ಕಾಯುವ ಬಿಜೆಪಿ ನಾಯಕರು ಒಂದು ಹೆಣ ಬಿತ್ತೆಂದರೆ ಸಾಕು ಓಡೋಡಿ ಬರುತ್ತಾರೆ ಎಂದು ಗೇಲಿ ಮಾಡಿದರು. ಅದೇನೆ ಇರಲಿ, ಮದ್ದೂರು ಪ್ರಕರಣದಲ್ಲಿ ಪೊಲೀಸರು ಮತ್ತಷ್ಟು ಚುರುಕಾಗಿ ಕೆಲಸ ಮಾಡಬೇಕಿತ್ತು. ಆಗ ಇಂತಹ ಘಟನೆ ಸಂಭವಿಸುತ್ತಿರಲಿಲ್ಲ ಎಂದು ಅಭಿಪ್ರಾಯಪಟ್ಟರು.

ಕುವೆಂಪುರವರ ನಾಡಗೀತೆಯಲ್ಲಿ 'ಬೌದ್ಧರುದ್ಯಾನ' ಕೈಬಿಟ್ಟ ಆರೋಪ

ನಾಡಗೀತೆ ಹಾಡುವಾಗ ಎದ್ದು ನಿಲ್ಲದಿರಲು ಧಮ್ಮದೀಪ ಪ್ರತಿಷ್ಠಾನ, ವಿಶ್ವಮೈತ್ರಿ ಬುದ್ಧವಿಹಾರ ನಿರ್ಧಾರ

ಮೈಸೂರು, ಸೆ.10(ಜಿಎ)–ರಾಷ್ಟ್ರಕವಿ ಕುವೆಂಪು ಅವರ ನಾಡಗೀತೆಯಲ್ಲಿ 'ಬೌದ್ಧರುದ್ಯಾನ' ಎಂದಿದ್ದರೂ ಪೂರ್ವಗ್ರಹ ಪೀಡಿತರಾಗಿ ಅದನ್ನು ಕೈಬಿಡಲಾಗಿದೆ. ಹೀಗಾಗಿ ಈ ಪದ ಸೇರಿಸುವವರೆಗೂ ಯಾವುದೇ ಸಮಾರಂಭಗಳಲ್ಲಿ ನಾಡಗೀತೆ ಹಾಡುವಾಗ ಎದ್ದು ನಿಲ್ಲುವುದಿಲ್ಲ ಎಂದು ಧಮ್ಮದೀಪ ಪ್ರತಿಷ್ಠಾನ ಮತ್ತು ವಿಶ್ವಮೈತ್ರಿ ಬುದ್ಧ ವಿಹಾರದ ಪ್ರಮುಖರು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಕುವೆಂಪು ಅವರ ಮೂಲ ಗೀತೆಯಲಿದ್ದ ಬೌದ್ಧರುದ್ಯಾನ ಪದವನ್ನು ಮರೆಮಾಚಿ ಜೈನರುದ್ಯಾನ ಎಂದು ನಾಡಗೀತೆಯಲ್ಲಿ ಸೇರಿಸಲಾಗಿದೆ. ಹೀಗಾಗಿ ನವೆಂಬರ್ 1ರ ಮುನ್ನ ಈ ಪದ ಮತ್ತೆ ಸೇರಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಮಾನವೀಯತೆ ಬಿತ್ತಿದ ಬುದ್ಧನ ಬೌದ್ಧ ಧರ್ಮವನ್ನು ಏಕೆ ಬಿಟ್ಟರೆಂದು ಅರ್ಥವಾಗದು. ಬುದ್ಧ ಪ್ರಪಂಚದಾದ್ಯಂತ ವಿಸ್ತರಿಸಿದವನಾಗಿದ್ದಾನೆ. ಕೆಲವರು ಮೂಲ ಗೀತೆಯಲ್ಲಿದ್ದ ಪದವನ್ನು ಕೈಬಿಟ್ಟು ಅಗೌರವ ತೋರಿದ್ದಾರೆ. ಕುವೆಂಪು ಅವರಿಗೂ ಬುದ್ಧನ ಬಗ್ಗೆ ಅಪಾರ ಪ್ರೀತಿಯಿತ್ತು ಹೀಗಾಗಿ ಕುವೆಂಪು ಅವರಿಗೂ ಈ ಮೂಲಕ ಅಗೌರವ ತೋರಲಾಗಿದೆ ಎಂದರು.

ಸಾಹಿತಿ ಡಾ.ಚಿಂ.ಬ.ಬಸವರಾಜ್ ಮಾತನಾಡಿ, ಈ ರೀತಿ ನಾಡಗೀತೆಯಿಂದ ಬೌದ್ಧರುದ್ಯಾನ ಪದ ತೆಗೆದಿರುವ ಬಗ್ಗೆ ಈ ಹಿಂದೆಯೇ ತಾವು ಗಮನ ಸೆಳೆದಿದ್ದು, ಹಿರಿಯ ಸಾಹಿತಿ ಡಾ.ಸಿಪಿಕೆ ಅವರು ಸಹ ತಮ್ಮ ಮಾತಿಗೆ ಸಹಮತ ವ್ಯಕ್ತಪಡಿಸಿದ್ದರು. ನಾಡಗೀತೆಯೆಂದು ಅಧಿಕೃತಗೊಳಿಸುವ ವೇಳೆ ಯಾರು ತಿರುಚಿದ ಗೀತೆ ಸರ್ಕಾರಕ್ಕೆ ಸಲ್ಲಿಸಿದರು, ಈ ಕುರಿತ ಸಮಿತಿಯಲ್ಲಿ ಯಾರು ಈ ಕೆಲಸ ಮಾಡಿದರು ಎಂಬುದು ತಿಳಿದು ಬಂದಿಲ್ಲ. ಆದರೆ ಕುವೆಂಪು ಅವರ ಗೀತೆಯನ್ನು ಅಪಮೌಲ್ಯ ಮಾಡಿರುವುದಂತೂ ನಿಜ. ಹೀಗಾಗಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಹಾಗೂ ಸರ್ಕಾರದ ಪ್ರಮುಖರು ಈ ಬಗ್ಗೆ ಗಮನಹರಿಸಿ ಲೋಪ ಸರಿಪಡಿಸಬೇಕು. ಅಲ್ಲಿವರೆಗೂ ನಾಡಗೀತೆ ಹಾಡುವಾಗ ತಾವು ಯಾರು ಎದ್ದು ನಿಲ್ಲುವುದಿಲ್ಲ ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿದ್ದಸ್ವಾಮಿ ಉಪಸ್ಥಿತರಿದ್ದರು.

ಭಾರೀ ಮಳೆಗೆ ಕೆಆರ್‌ಎಸ್‌ನಲ್ಲಿ ಧರೆಗುರುಳಿದ ಮರ: ಕೂದಲೆಳೆ ಅಂತರದಲ್ಲಿ ಪಾರಾದ ಪ್ರವಾಸಿಗರು

ಮೈಸೂರು, ಸೆ.10(ಎಂಟಿವೈ)– ಕೆಆರ್‌ಎಸ್ ಉದ್ಯಾನವನದಲ್ಲಿ ಸಂಗೀತ, ನೃತ್ಯ ಕಾರಂಜಿ ವೀಕ್ಷಿಸಲು ಹೋಗುತ್ತಿದ್ದ ಹಲವು ಪ್ರವಾಸಿಗರು ಕೂದಲೆಳೆ ಅಂತರದಲ್ಲಿ ಅಪಾಯದಿಂದ ಪಾರಾದ ಘಟನೆ ಬುಧವಾರ ಸಂಜೆ ನಡೆದಿದೆ.

ಭಾರೀ ಮಳೆಯಿಂದಾಗಿ ಹಲವು ಪ್ರವಾಸಿಗರು ಕೆಆರ್‌ಎಸ್ ಉದ್ಯಾನವನದ ವಿವಿಧೆಡೆ ಆಶ್ರಯ ಪಡೆದಿದ್ದರು. ಮಳೆ ನಿಂತ ಬಳಿಕ ಸಂಗೀತ, ನೃತ್ಯ ಕಾರಂಜಿ ವೀಕ್ಷಣೆಗಾಗಿ ತೆರಳುತ್ತಿದ್ದಾಗ ಏಕಾಏಕಿ ಬೃಹತ್ ಮರವೊಂದು ಬುಡಸಹಿತ ಧರೆಗುರುಳಿದೆ. ಮರ ಬೀಳುವ ವೇಳೆ ಉಂಟಾದ ಶಬ್ದದಿಂದ ಎಚ್ಚೆತ್ತ ಕೆಲವರು ಕೂಗಿಕೊಂಡ ಹಿನ್ನೆಲೆಯಲ್ಲಿ ಪ್ರವಾಸಿಗರು ದೂರ ಸರಿದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕೆಲವರ ಸಮಯ ಪ್ರಜ್ಞೆಯಿಂದ ಅನಾಹುತ ತಪ್ಪಿದಂತಾಗಿದೆ. ಪರಿಸ್ಥಿತಿ ತಿಳಿಗೊಂಡ ನಂತರ ಸಂಗೀತ ಕಾರಂಜಿ ಪ್ರದರ್ಶನ ನಡೆಯಿತು.

ಸೆ.14ರಂದು ವಾರ್ಷಿಕ ಮಹಾಸಭೆ

ಮೈಸೂರು: ಸರ್ ಎಂ.ವಿಶ್ವೇಶ್ವರಯ್ಯ ನಲ್ಲಿ ಮತ್ತು ಒಳಚರಂಡಿ ಕಾರ್ಮಿಕರ ಕ್ಷೇಮಾಭಿವೃದ್ಧಿ ಸಂಘದ 2024–25ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾ ಸಭೆಯನ್ನು ಸೆ.14ರಂದು ಬೆಳಿಗ್ಗೆ 10 ಗಂಟೆಗೆ ರೋಟರಿ ಪಶ್ಚಿಮ ಶಾಲೆ ಸಭಾಂಗಣ, ವಿಜಯ ವಿಠ್ಠಲ ಶಾಲೆ ಪಕ್ಕ, ಸರಸ್ವತಿಪುರಂನಲ್ಲಿ ಏರ್ಪಡಿಸಲಾಗಿದೆ.

ನಿಧನ



ಚಿಕ್ಕಂಡ ನಾಯಕ

ಮೈಸೂರು,ಸೆ.10–ನಂಜನಗೂಡು ತಾಲೂಕಿನ ಸೂರಳ್ಳಿ ಗ್ರಾಮದ ಚಿಕ್ಕಂಡ ನಾಯಕ (75) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಬುಧವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಗುಲಾಬಿ

ಹುಣಸೂರು: ನಗರದ ಬ್ರಾಹ್ಮಣರ ಬೀದಿಯ ನಿವಾಸಿ ಗುಲಾಬಿ (83) ಅವರು ಇಂದು ಸಂಜೆ ನಿಧನರಾದರು. ಮೃತರು ಉದಯವಾಣಿ ಪತ್ರಿಕೆ ವರದಿಗಾರ ಸಂಪತ್‌ಕುಮಾರ್, ಶ್ರೀಕಾಂತ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಸೆ.11) 10 ಗಂಟೆಗೆ ನಗರದ ರುದ್ರಭೂಮಿಯಲ್ಲಿ ನೆರವೇರಲಿದೆ.



ಸುಂದರರಾಜ್

ಮೈಸೂರಿನ ಐಪಿಎಸ್ ನಗರ ನಿವಾಸಿ, ನಗರ ಸಶಸ್ತ್ರ ಮೀಸಲು ಪಡೆ ಎಎಸ್‌ಐ ರಾಜಶೇಖರ್ ಅವರ ತಂದೆ ಸುಂದರರಾಜ್ (78) ಬುಧವಾರ ನಿಧನರಾದರು. ಮೃತರು ಡಿಎಆರ್‌ನಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10 ಗಂಟೆಗೆ ಚಾಮುಂಡಿಬೆಟ್ಟ ತಪ್ಪಲಿನ ಹಿಂದೂ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಸಹೋದರರಾದ ನಿವೃತ್ತ ಪೊಲೀಸ್ ಇನ್ಸ್‌ಪೆಕ್ಟರ್ ಕೇಶವಮೂರ್ತಿ, ಎಎಸ್‌ಐ ಕೃಷ್ಣಶಾಸ್ತ್ರಿ, ಸ್ನೇಹಿತರಾದ ನಿವೃತ್ತ ಎಸ್‌ಐ ನಾಗೇಶ್ ಸಂತಾಪ ಸೂಚಿಸಿದ್ದಾರೆ.

ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಲ್ಲಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಜಯಂತಿ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರ 110ನೇ ಜಯಂತಿ ಕಾರ್ಯಕ್ರಮವನ್ನು ರಾಜೇಂದ್ರ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಉದ್ಘಾಟಿಸಿದರು.

ಮೈಸೂರು,ಸೆ.10(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು ಸಭಾಂಗಣದಲ್ಲಿ ಜೆಎಸ್‌ಎಸ್ ಮಹಿಳಾ ಶಿಕ್ಷಣ ಸಂಸ್ಥೆಗಳ ವಸತಿನಿಲಯಗಳ ವತಿಯಿಂದ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮೀಜಿ ಅವರ 110ನೇ ಜಯಂತಿ ಆಚರಿಸಲಾಯಿತು.

ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮಾತನಾಡಿ, ತ್ರಿವಿಧ ದಾಸೋಹಿಗಳಾದ ರಾಜೇಂದ್ರ ಶ್ರೀಗಳನ್ನು ಹತ್ತಿರದಿಂದ ನೋಡಿ, ಮಾತನಾಡಿಸುವ ಸೌಭಾಗ್ಯ ನನ್ನದಾಗಿತ್ತು. 12ನೇ ವಯಸ್ಸಿಗೆ ಸುತ್ತೂರು ಮಠದ ಜವಾಬ್ದಾರಿ ಹೊತ್ತ ಶ್ರೀಗಳು 1941ರಲ್ಲಿ 12 ವಿದ್ಯಾರ್ಥಿಗಳನ್ನೊಳಗೊಂಡ ವಿದ್ಯಾರ್ಥಿನಿಲಯ ಸ್ಥಾಪಿಸಿ, ಇವತ್ತಿನ ಹತ್ತಾರು ನಿಲಯಗಳಿಗೆ ಮುನ್ನುಡಿ ಬರೆದರು ಎಂದು ಸ್ಮರಿಸಿದರು.

ವಿದ್ಯಾಭ್ಯಾಸದ ಜೊತೆಗೆ ಸಂಸ್ಕೃತ ಮತ್ತು ಹೆಚ್ಚಿನ ಜ್ಞಾನಾರ್ಜನೆಗಾಗಿ ಕಾಶಿಯ ಗೌರಿಶಂಕರ ಸ್ವಾಮೀಜಿ ಅವರ ಬಳಿಗೆ ತೆರಳಿ, ಅವರಿಂದ ಮುನ್ನಡೆಯುವ ಸಲಹೆಯೊಂದಿಗೆ ವಾಪಸ್ಸಾದ ಶ್ರೀಗಳು, ಹಂತ ಹಂತವಾಗಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಲಕ್ಷಾಂತರ ಜನರ ಬಾಳಿಗೆ ಬೆಳಕಾದರು ಎಂದು ಬಣ್ಣಿಸಿದರು.

ಶಿವರಾತ್ರೀಶ್ವರ ಸ್ವಾಮೀಜಿಯವರ ತಪಸ್ಸಿನಿಂದ ಮಠಕ್ಕೆ ದೊರೆತ ಚೈತನ್ಯ ಶಕ್ತಿ, ರಾಜೇಂದ್ರ ಶ್ರೀಗಳ ಮೂಲಕ ಅಭಿವ್ಯಕ್ತವಾಯಿತು. ರಾಜೇಂದ್ರ ಶ್ರೀಗಳ ಕಾರ್ಯವನ್ನು ಅಂದಿನ ಮೈಸೂರು ಒಡೆಯರು ಗಮನಿಸಿ, ಬೆಂಬಲವಾಗಿ ನಿಂತು ಅತ್ಯಲ್ಪ ಕಾಣಿಕೆ ಪಡೆದು ದೊಡ್ಡ ದೊಡ್ಡ ಜಾಗಗಳನ್ನು ನೀಡಿದರು. ಗ್ರಾಮೀಣ ಭಾಗದ ಮಕ್ಕಳಿಗೆ ವಿದ್ಯಾಭ್ಯಾಸ, ವಸತಿ ಸಿಗಬೇಕು ಎಂಬ ಉದ್ದೇಶವನ್ನು ಈಡೇರಿಸಿದ ಕೀರ್ತಿ ರಾಜೇಂದ್ರ ಶ್ರೀಗಳಿಗೆ ಸಲ್ಲುತ್ತದೆ ಎಂದು ನೆನೆದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಪ್ರಸಾದ ನಿಲಯಗಳ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಮುಖ್ಯನಿಲಯ ಪಾಲಕರಾದ ಮಮತ ಸುರೇಶ್, ಪ್ರಶಿಕ್ಷಣ ಸಂಸ್ಥೆ ಮುಖ್ಯಸ್ಥ ಶಿವಸ್ವಾಮಿ, ಗುರುಸ್ವಾಮಿ, ಸರ್ವಮಂಗಳ, ಪ್ರೌಢ ಶಾಲಾ ಮುಖ್ಯ ಶಿಕ್ಷಕಿ ಡಿ.ಆರ್.ಕವಿತಾ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ಉದ್ಯಮಶೀಲತಾ ಹಬ್ಬ

ಉದ್ಯಮ ಸ್ಥಾಪನೆ ಬಗ್ಗೆ ಪ್ರಮುಖರಿಂದ ಮಾಹಿತಿ

ಮೈಸೂರು, ಸೆ.10 (ಜಿಎ)– ಭಾರತೀಯ ಕೈಗಾರಿಕಾ ಸಂಸ್ಥೆಯ ಅಂಗ ಸಂಸ್ಥೆ ಯಂಗ್ ಇಂಡಿಯನ್ಸ್ ಮೈಸೂರು ಶಾಖೆ ವತಿಯಿಂದ ಸೆ. 12ರಂದು ಬೆಳಗ್ಗೆ 9.30ರಿಂದ ಸಂಜೆ 4ರವರೆಗೆ ಎಸ್‌ಡಿಎಂ–ಐಎಂಡಿ ಕಾಲೇಜಿನಲ್ಲಿ ಮೈಸೂರು ಉದ್ಯಮಶೀಲತಾ ಹಬ್ಬ ಆಯೋಜಿಸಲಾಗಿದೆ ಎಂದು ಉಪಾಧ್ಯಕ್ಷೆ ಪ್ರಿಯಾಂಕಾ ಶ್ರೀಧರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯಮ ಸ್ಥಾಪನೆಗೆ ಅಗತ್ಯವಾದ ವಿನೂತನ ಆಲೋಚನೆ ಹೊಂದಿದ್ದು, ಬಂಡವಾಳ ಹೂಡುವವರ ನಿರೀಕ್ಷೆಯಲ್ಲಿರುವ, ಸರ್ಕಾರದ ವಿವಿಧ ಯೋಜನೆಗಳಿಂದ ದೊರಕುವ ಸಾಲ ಸೌಲಭ್ಯ, ಸಹಾಯ ಧನಗಳ ಮಾಹಿತಿ ಇಲ್ಲದವರು ಪ್ರಯೋಜನ ಪಡೆಯಬಹುದಾಗಿದೆ. ನೋಂದಣಿ ಕಡ್ಡಾಯವಾಗಿದ್ದು, 499 ರೂ. ಶುಲ್ಕ ನೀಡಬೇಕು. ನೋಂದಣಿಗೆ ಚೇತು, ದೂ. 99869 29988 ಅನ್ನು ಸಂಪರ್ಕಿಸಬಹುದಾಗಿದೆ ಎಂದರು.


ಈ ವೇಳೆ ಪಿಚ್ ಥಾನ್ ಎಂಬ ವೇದಿಕೆ ಇರಲಿದ್ದು, ಆಯ್ಕೆಯಾದ ಆಲೋಚನೆಗಳನ್ನು ಮಂಡಿಸಲು, ದೇಶಾದ್ಯಂತ 40 ಕ್ಕೂ ಹೆಚ್ಚು ಪ್ರಮುಖ ಬಂಡವಾಳ ಹೂಡಿಕೆ ಸಂಸ್ಥೆಗಳು ಒಂದೆಡೆ ಸಮಾಲೋಚನೆ ನಡೆಸಲು ಅವಕಾಶ ಕಲ್ಪಿಸಲಾಗಿದೆ. ಪ್ರಮುಖವಾಗಿ ಶ್ರೇಯಾ ಭಟ್ನಾಗರ್, ಇನ್ನಿತರ ಉದ್ಯಮ ಕ್ಷೇತ್ರ ಮುಖ್ಯಸ್ಥರಾದ ಭರತ್ ಕೌಶಿಕ್, ಮೈತ್ರಿ ಭಾರದ್ವಾಜ್, ಸಂದೀಪ್ ಬಾಲಾಜಿ ಹಾಗೂ ಇನ್ನಿತರರು ಯಶಸ್ವಿಯಾಗಿ ಉದ್ಯಮ ನಡೆಸುವ ಬಗ್ಗೆ ಮಾರ್ಗದರ್ಶನ ನೀಡಲಿದ್ದಾರೆ. ಇದೊಂದು ಅಪರೂಪದ ಕಾರ್ಯಕ್ರಮ. ಆಸಕ್ತರು, ಸಾರ್ವಜನಿಕರು ಪ್ರಯೋಜನ ಪಡೆಯಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ರಕ್ಷಾ, ಶ್ರದ್ಧಾ ಉಪಸ್ಥಿತರಿದ್ದರು.

ಅಭಿನಂದನೆ...



ಮೈಸೂರು–ಚಾಮರಾಜನಗರ ಸಹಕಾರ ಕ್ಷೇತ್ರದ ಚುನಾವಣೆಯಲ್ಲಿ ಜಯ ಗಳಿಸಿದ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಮಾಜಿ ಕಾರ್ಪೋರೇಟರ್ ಲೋಕೇಶ್ ಪಿಯಾ, ಸ್ಮರಣ್, ಮಹದೇವ, ಸೋಮಣ್ಣ, ಶೇಖರ್, ರಂಗಸ್ವಾಮಿ, ಸಚಿನ್,ಮಂಜು, ರಾಜಶೇಖರ್, ಮಣಿ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.09.2025 ಗುರುವಾರ, ಮಳೆ ನಕ್ಷತ್ರ: ಪುಬ್ಬ 31.08.2025 ರಿಂದ 13.09.2025
ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಅಶ್ವಿನಿ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಗುದಗತ ರೋಗಗಳಾದ ಪೈಲ್ಸ್, ಮೂಲವ್ಯಾಧಿ, ಫಿಸ್ತೂಲಾ/ಭಗಂದರ, ನಾಡಿವ್ರಣ, ಫಿಸರ್ ಮತ್ತು ಯಕೃತ್ತಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಶರದ್ ವಿರೇಚನ ಪಂಚಕರ್ಮ ಚಿಕಿತ್ಸಾ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಯುವಕರ ಮಾನಸಿಕ ಆರೋಗ್ಯ ಜಾಗೃತಿ, ಗರ್ಭ ಸಂಸ್ಕಾರ, ನರುಳಿ ಮತ್ತು ಸೊಂಟ ನೋವಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ರಿಂದ.
- **ರಾಮಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಮೈಸೂರು ವಿವಿ ಸಸ್ಯಶಾಸ್ತ್ರ ಅಧ್ಯಯನ ವಿಭಾಗ :** ಸಸ್ಯಶಾಸ್ತ್ರದಲ್ಲಿ ಹೊಸ ಪ್ರವೃತ್ತಿಗಳು ಕುರಿತು ವಿಚಾರ ಸಂಕಿರಣ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು : ಕರ್ನಾಟಕ ಉನ್ನತ ಶಿಕ್ಷಣ ಮಂಡಳಿ ಉಪಾಧ್ಯಕ್ಷ ಪ್ರೊ. ಎಸ್.ಆರ್. ನಿರಂಜನ, ಪ್ರಾಸ್ತಾವಿಕ ಭಾಷಣ : ಡಾ. ಎಸ್. ನಟೇಶ್, ಸ್ಥಳ: ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.
- **ಸೇಂಟ್ ಫಿಲೋಮಿನಾಸ್ ಕಾಲೇಜು :** ಸಾಂಸ್ಕೃತಿಕ, ಕ್ರೀಡಾ, ರೋವರ್ಸ್ ಅಂಡ್ ರೇಂಜರ್ಸ್, ಎನ್‌ಸಿಸಿ, ಎನ್‌ಎಸ್‌ಎಸ್ ಹಾಗೂ ಯುವ ರೆಡ್ ಕ್ರಾಸ್ ಘಟಕಗಳ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ರಂಗ ಭೂಮಿ ನಟ ಮಂಡ್ಯ ರಮೇಶ್, ಅಧ್ಯಕ್ಷತೆ : ಡಾ. ಲೋರ್ದ್ ಪ್ರಸಾದ್ ಜೋಸೆಫ್, ಉಪಸ್ಥಿತರು : ಕಾಲೇಜು ಪ್ರಿನ್ಸಿಪಾಲ್ ಡಾ. ರವಿ ಜೆ.ಡಿ. ಸಲ್ಡಾನಾ, ಸ್ಥಳ: ಕಾಲೇಜು ಒಳಾಂಗಣ ಕ್ರೀಡಾಂಗಣ, ಮಧ್ಯಾಹ್ನ 1.15ಕ್ಕೆ.
- **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ಮೈಸೂರು ವಲಯ ಅಂತರ ಕಾಲೇಜು ವಾಲಿಬಾಲ್ ಪಂದ್ಯಾವಳಿ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಟಿ.ಎಸ್. ಶ್ರೀವತ್ಸ, ಬೆಂಗಳೂರು ಸಿಂಡಿಕೇಟ್ ಸದಸ್ಯ ಡಾ. ಎಂ. ಪಶುಪತಿ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಆರ್. ನರಸಿಂಹ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಶಾರದಾ ವಿಲಾಸ ಮೈದಾನ, ಕೃಷ್ಣಮೂರ್ತಿಪುರಂ, ಸಂಜೆ 4.30ಕ್ಕೆ.
- **ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್ :** ಹಾಡು ಹಳೆಯದಾದರೇನು ಕನ್ನಡ ಹಿಂದಿ ಹಳೆಯ ಹಾಡುಗಳ ಗೀತ ಸಂಭ್ರಮ ಕಾರ್ಯಕ್ರಮ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ್ ಬೈರಿ, ಮುಖ್ಯ ಅತಿಥಿಗಳು : ನಗರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಆರ್. ಮೂರ್ತಿ, ಸಮಾಜ ಸೇವಕ ರಘುರಾಮ್ ವಾಜಪೇಯಿ, ಚೇತನ್‌ರಾಜ್, ಎ.ಜೆ. ಸುಧೀರ್, ವಿ. ವೆಂಕಟೇಶ್, ಶಿವಕುಮಾರ್, ಮಧ್ವರಾಜ್ ಎಸ್.ಜೆ., ಜೆ.ಜೆ. ಆನಂದ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಮುಕ್ತಿದಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ : 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಹೆಣ್ಣು ಮನಸು ಮಾಡಿದರೆ ಸಾಧಕ ಮಹಿಳೆಯರ ಪರಿಚಯ ಮಾಲಿಕೆ, ಪ್ರಸ್ತುತಿ: ಪ್ರೊ. ಸಿ. ನಾಗಣ್ಣ, ನಿರ್ಮಾಣ–ಜಿ. ಶಾಂತಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಸಿ. ವಿಶ್ವನಾಥ್ ಮತ್ತು ಅಂಬಯ್ಯನುಲಿ, ವ್ಯಾಖ್ಯಾನ : ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಶಾಂತಕುಮಾರ್

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಕನ್ನಡ ಚಿತ್ರಗೀತೆಗಳು, 3.00 ಹಿಂದಿ ಚಿತ್ರಗೀತೆಗಳು, 4.00 ಹಳ್ಳಿಹಾಡು– ಭಾಗವಹಿಸುತ್ತಾರೆ– ಡಾ. ಮಳವಳ್ಳಿ ಎಂ. ಮಹದೇವಸ್ವಾಮಿ ಮತ್ತು ಸಂಗಡಿಗರು, ಪ್ರಸ್ತುತಿ–ಡಾ. ಮೈಸೂರು ಉಮೇಶ್, 4.30 ರಸಮಂಜರಿ, 6.50 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ ಭಾಗವಹಿಸುತ್ತಾರೆ–ಕೆ. ಆರ್. ನಗರ ತಾಲೂಕು ಬೀಚನಹಳ್ಳಿ ಗ್ರಾಮದ ಸಹೋದರರಾದ ಕೆ.ಬಿ. ಪ್ರಬೋದ್ ಹಾಗೂ ಕೆ.ಬಿ. ಪ್ರದ್ಯುಮ್ನ. ಪ್ರಸ್ತುತಿ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ–ಹಲೋ ಯುವವಾಣಿ–ನೇರ ಫೋನ್–ಇನ್ ಕಾರ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ಕುರಿತ ರಸಪ್ರಶ್ನೆ ಕಾರ್ಯಕ್ರಮ. ಪ್ರಸ್ತುತಿ–ನಿವೇದಿತಾ .ಹೆಚ್., 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, 10.00 ನಾಟಕ –ಅಮರ ವ್ಯಾಪ್ರ


ಮೈಸೂರು ಜಿಲ್ಲೆಯ ಬಿ.ಜೆ.ಪಿ ನಗರ ಅಧ್ಯಕ್ಷರು.
ಚಾಮರಾಜ ಕ್ಷೇತ್ರದ ಅಭಿವೃದ್ಧಿಯ ಹರಿಕಾರ-ಜನಸಾಮಾನ್ಯರ ಶಾಸಕರಾಗಿದ್ದ
ಎಲ್ ನಾಗೇಂದ್ರ
ರವರಿಗೆ
ಜನ್ಮದಿನದ ಶುಭಾಶಯಗಳು
ಮಾನ್ಯರೆ, ವಿದೇಶದಲ್ಲಿ ಶ್ರೀ ಎಲ್ ನಾಗೇಂದ್ರಣ್ಣ ರವರ ಸಹೋದರಿಯವರ ಪುತ್ರನ ಅಕಾಲಿಕ ಮರಣವಾದ ಕಾರಣ ಇಂದು ನಡೆಯಬೇಕಿದ್ದ ಅರವತ್ತನೇ ಜನ್ಮ ದಿನೋತ್ಸವದ ಕಾರ್ಯಕ್ರಮ ರದ್ದು ಗೊಳಿಸಲಾಗಿದ್ದು ಸ್ನೇಹಿತರು ಕಾರ್ಯಕರ್ತರು ಹಾಗು ಹಿತ್ಯಷಿಗಳು ಸಹಕರಿಸಬೇಕೆಂದು ಈ ಮೂಲಕ ತಿಳಿಯಪಡಿಸುತ್ತೇವೆ


ಚಾಮರಾಜ ವಿಧಾನಸಭಾ ಕ್ಷೇತ್ರದ ನಿಕಟ ಪೂರ್ವ ಶಾಸಕರು ಹಾಗು
ಬಿ.ಜೆ.ಪಿ ಮೈಸೂರು ನಗರಾಧ್ಯಕ್ಷರಾದ
ಎಲ್.ನಾಗೇಂದ್ರ
ರವರಿಗೆ
೬೦ನೇ ವರ್ಷದ ಜನ್ಮದಿನದ ಶುಭಾಶಯಗಳು
ಶುಭಕೋರುವವರು:
ಎಂ.ಎಂ ಎಂಟರ್ ಪ್ರೈಸಸ್
ಹಾಗು ಸ್ನೇಹಿತರು, ಒಂಟಿಕೊಪ್ಪಲು.

ನಕ್ಕರೆ ಅದೇ ಸ್ವರ್ಗ

ಗುಂಡ : ನನ್ನ ಕಾಲಿಗೆ ಏಟಾಗಿತ್ತು. ಒಂದು ತಿಂಗಳಲ್ಲಿ ನೀನು ಓಡಾಡುವಂತೆ ಮಾಡುತ್ತೇನೆ ಎಂದು ಡಾಕ್ಟರ್ ಹೇಳಿದ್ದರು.
ತಿಮ್ಮ : ಗುಡ್... ಡಾಕ್ಟರ್ ಕೈ ಗುಣ ಚೆನ್ನಾಗಿರಬೇಕು! ಏನ್ ಮಾಡಿದ್ರು?
ಗುಂಡ : ಹೌದು... ಅವರ ಬಿಲ್ ಕಟ್ಟೋಕೆ ನನ್ನ ಕಾರು ಮಾರಬೇಕಾಯ್ತು!

ಮೈಸೂರು ಮಿತ್ರ
ಗುರುವಾರ, 11 ಸೆಪ್ಟೆಂಬರ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ......

ಬದುಕೆಂದರೆ ಸುಂದರ ಮುಖವಾಡದ ಕೃತಕ ನಗುವಿನ ಜವಾಬ್ದಾರಿಗಳ ಕುಲುಮೆಯಲ್ಲಿ ಪ್ರತಿದಿನ ಬೇಯುವ ನನಸಾಗದ ಕನಸುಗಳ ಬೆನ್ನೇರಿ ಹೋಗುವ ಹುಂಬತನವಷ್ಟೇ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಯ್ಯೋ ಪಾಪ ಅಂದ್ರೆ ಆರು ತಿಂಗಳು ಆಯಸ್ಸು ಕಮ್ಮಿ

ನಿಮ್ಮ ಪತ್ರಗಳು

ಬಾನು ಮುಷ್ತಾಕ್ ಅವರಿಗೆ ಬಹಿರಂಗ ಪತ್ರ

ಮಾನ್ಯರೆ,



ಬಾನು ಮುಷ್ತಾಕ್ ಅವರ 'ಹಾರ್ಟ್ ಲ್ಯಾಂಪ್' ಕೃತಿಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪ್ರಕಟವಾದಾಗ ಇಡೀ ದೇಶ, ಕರ್ನಾಟಕದ ಜನತೆ ಸಂತಸಪಟ್ಟಿತ್ತು. ಜನಪರ ಸಾಹಿತ್ಯ ಸಮ್ಮೇಳನದ ಕನ್ನಡದ ಅಸ್ಮಿತೆಯಾದ ಕನ್ನಡ ಬಾವುಟದ ಬಗ್ಗೆ, ಕನ್ನಡಿಗರ ಔದಾರ್ಯದ ಬಗ್ಗೆ, ಹಿಂದೂಗಳ ಭಾವನೆಗೆ ಧಕ್ಕೆ ತರುವ ಹೇಳಿಕೆ, ಎಲ್ಲರ ಗಮನಕ್ಕೆ ಬರುವವರೆಗೆ ಸಂಭ್ರಮಿಸಿದ್ದು ಸತ್ಯ. ಬಹಳಷ್ಟು ಕಾರಣಗಳಿಗಾಗಿ ತಾವೇ, ಸ್ವಯಂ, ದಸರಾ ಉದ್ಘಾಟನೆಯಿಂದ ಹಿಂದೆ ಸರಿಯುವ ನಿರ್ಧಾರ ಕೈಗೊಳ್ಳುವುದು ಸಮಂಜಸವೆನಿಸಿದೆ. ಧರ್ಮ ನಿರಪೇಕ್ಷತೆ, ಪರಧರ್ಮ ಸಹಿಷ್ಣುತೆ ಕನ್ನಡಿಗರ, ಹಿಂದೂಗಳ ರಕ್ತದಲ್ಲೇ ಇದೆ. ಈ ಪಾಠವನ್ನು ಯಾರಿಂದಲೂ ಕಲಿಯುವ ಅವಶ್ಯಕತೆಯಿಲ್ಲ.

ನಾಡೋಜ ನಿತ್ಯೋತ್ಸವದ ಕವಿ ನಿಸಾರ್ ಅಹಮದ್ ಅವರ ಹೆಸರನ್ನು ದಸರಾ ಉದ್ಘಾಟನೆಗೆ ಆಯ್ಕೆ ಮಾಡಿದಾಗ ಇಲ್ಲದ ವಿರೋಧ ನಿಮ್ಮನ್ನು ಆಯ್ಕೆ ಮಾಡಿದಾಗ ಏಕೆ ಎದ್ದಿತು ಎಂಬುದಕ್ಕೆ ಸಾಕಷ್ಟು ಕಾರಣಗಳಿವೆ.

1. ಅವರು ಯಾವುದೇ ಕನ್ನಡ ವಿರೋಧಿ, ಹಿಂದೂ ವಿರೋಧಿ ಧೋರಣೆ ಹೊಂದಿರಲಿಲ್ಲ. ಅವರ ಆಯ್ಕೆ ಸಮಷ್ಟಿ ಪ್ರಜ್ಞೆಯ ದ್ಯೋತಕವಾಗಿತ್ತು. ನಿಮ್ಮ ಆಯ್ಕೆ ಕೇವಲ ತುಷ್ಟೀಕರಣ ರಾಜಕಾರಣದ ಭಾಗವಾಗಿದೆ ಎಂಬುದನ್ನು ಅರ್ಥೈಸಿಕೊಳ್ಳಿ.

2.ಪ್ರಶಸ್ತಿ ಪಡೆಯುವಲ್ಲಿ ಅನುವಾದಕಿ ಶ್ರೀಮತಿ ದೀಪಾ ಬಸ್ತಿಯವರ ಪಾಲು ಏನೂ ಇಲ್ಲವೇ? ಅವರನ್ನು ನಿಮ್ಮ ಜೊತೆಗೆ ಸರ್ಕಾರ ದಸರಾ ಉದ್ಘಾಟನೆಗೆ ಏಕೆ ಆಹ್ವಾನಿಸಿಲ್ಲ?

3. ನೀವು ಸಹ ಎಲ್ಲಿಯೂ ತಮ್ಮ ಹೇಳಿಕೆಗಳಿಗೆ ವಿಷಾದ ವ್ಯಕ್ತಪಡಿಸುವ, ಸ್ಪಷ್ಟನೆ ನೀಡುವ, ಶ್ರೀಮತಿ ದೀಪಾ ಬಸ್ತಿಯವರನ್ನೂ ಸರ್ಕಾರ ಆಹ್ವಾನಿಸಲಿ ಎಂಬ ಔದಾರ್ಯ ತೋರಿಲ್ಲ ಎಂಬುದು ದುರಂತದ ಸಂಗತಿ. ಇದನ್ನು ನೀವು ಪಾಲಿಸಿದ್ದರೆ, ನಿರ್ವಿವಾದವಾಗಿ, ನಿಮ್ಮ ಘನತೆ ಮತ್ತಷ್ಟು ಹೆಚ್ಚುತ್ತಿತ್ತು. ಈ ಸರ್ಕಾರಕ್ಕೆ ಅದರದೇ ಆದ ಅಜೆಂಡಾಗಳಿವೆ. ಅವು ನಿಮಗೆ ಅರ್ಥವಾಗಿದೆಯೋ ಇಲ್ಲವೋ ತಿಳಿದಿಲ್ಲ. ಕನ್ನಡ ಸಾಹಿತ್ಯದಲ್ಲಿ ಉನ್ನತ ಸಾಧನೆ ಮಾಡಿರುವ ನಿಮಗೆ ಕನ್ನಡಿಗರ ಭಾವನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಲ್ಲ. ಈ ವಿರೋಧದ ಉದ್ಘಾಟನೆ ನೀವು ಮಾಡಿದರೂ ನಿಮ್ಮ ಘನತೆ ಹೆಚ್ಚುವುದಿಲ್ಲ. ನಾಡಹಬ್ಬ ಕನ್ನಡಿಗರ ಪಾಲಿಗೆ ಬಲವಂತದ ಮಾಘ ಸ್ನಾನವಾಗದಿರಲಿ. ಉದ್ಘಾಟನೆಯಿಂದ ಹಿಂದೆ ಸರಿಯುವುದರಿಂದ ಖಂಡಿತ ವಾಗಿಯೂ ನಿಮ್ಮ ಗೌರವ ಹೆಚ್ಚಾಗುತ್ತದೆ. ಇದು ಬಹುಸಂಖ್ಯಾತ ಕನ್ನಡಿಗರ ಒತ್ತಾಸೆ.

–ಮೈ.ನಾ.ಲೋಕೇಶ್, ಕನ್ನಡ ಪರಿಚಾರಕ, ಮೈಸೂರು.

ಶಿಕ್ಷಕ ಪ್ರಶಸ್ತಿ ತಪ್ಪಿ ಹೋಯಿತೆ?

ಮಾನ್ಯರೆ,

ತೆರೆಯ ಮರೆಯಲ್ಲಿ ಹಲವರ ಸಾಧನೆ ಇರುತ್ತದೆ. ಹಲವಾರು ಸಂದರ್ಭಗಳಲ್ಲಿ ಅದನ್ನು ಗುರುತಿಸಲು ಸಾಧ್ಯವೇ ಆಗುವುದಿಲ್ಲ. ಆದರೆ ತೆರೆಯ ಮುಂದೆ ಬಂದಂತಹ ಸಾಧನೆಯ ಪ್ರತಿಭೆಯೊಂದು ಪ್ರಶಸ್ತಿಯ ಅವಕಾಶದಿಂದ ತಪ್ಪಿ ಹೋಗಿದೆಯೇನೋ ಎಂಬ ಭಾವನೆ ಹಲವರಲ್ಲಿದೆ. ಮುಖ್ಯಮಂತ್ರಿಗಳು ಕೂಡಾ ತಮ್ಮ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಪ್ರಸ್ತಾಪಿತವಾಗಿದ್ದ, ವಿಧಾನಸಭಾಧ್ಯಕ್ಷರು ಇದನ್ನು ಗುರುತಿಸಿ ಗೌರವಿಸಿದ್ದು, ಪತ್ರಿಕೆಗಳಲ್ಲಿ, ಆಕಾಶವಾಣಿಯಲ್ಲಿ, ದೃಶ್ಯ ಮಾಧ್ಯಮದಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಪ್ರಸಾರವಾಗಿ ಮೆಚ್ಚುಗೆ ಗಳಿಸಿತ್ತು. ಅಲ್ಲದೇ ಉನ್ನತ ಶಿಕ್ಷಣ ಇಲಾಖೆಯಲ್ಲಿ, ವಿಶ್ವವಿದ್ಯಾನಿಲಯಗಳಲ್ಲಿ ಸುತ್ತೋಲೆಯಾಗಿ ಈ ಬಗ್ಗೆ ಸೂಚನೆಗಳನ್ನು ನೀಡಲಾಗಿರುವ ಮೊಬೈಲ್ ಬಿಡಿ ಪುಸ್ತಕ ಹಿಡಿ ಅರಿವಿನ ಅಭಿಯಾನದ ರೂವಾರಿ ಶಾಲಾ ಶಿಕ್ಷಣ ಇಲಾಖೆಯ ರಾಮನಗರ ತಾಲೂಕಿನಲ್ಲಿ ಸಮೂಹ ಸಂಪನ್ಮೂಲ ಶಿಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿರುವ ಟಿ.ಎನ್.ಚಿಕ್ಕವೀರಯ್ಯ ಅವರಿಗೆ ಈ ಬಾರಿಯ ಶಿಕ್ಷಕ ಪ್ರಶಸ್ತಿ ಸಿಗಬಹುದೇನೋ ಎಂಬ ಹಲವರ ನಿರೀಕ್ಷೆ ಹಾಗೂ ಸ್ಥಳೀಯ ಶಾಸಕ ಬಾಲಕೃಷ್ಣ ಅವರ ಭರವಸೆ ಹುಸಿಯಾಗಿದೆ. ಇವರ ವ್ಯಾಪ್ತಿಯಲ್ಲಿ ಬರುವ 14 ಗ್ರಾಮೀಣ ಸರ್ಕಾರಿ ಶಾಲೆಗಳನ್ನು ಗಮನಿಸಿದಲ್ಲಿ ಮಕ್ಕಳಿಗೆ ಸಾಮಾನ್ಯ ಜ್ಞಾನದ ಅರಿವು ಮೂಡಿಸುತ್ತಿರುವಲ್ಲಿನ ಹಾಗೂ ಶಿಕ್ಷಣದ ಗುಣಮಟ್ಟ ಹೆಚ್ಚಿಸುವಲ್ಲಿನ ಇವರ ಪರಿಶ್ರಮ ತಿಳಿಯುತ್ತದೆ. ಅಷ್ಟೇ ಅಲ್ಲದೇ ಶಿಕ್ಷಕರ ದಿನದ ಅಂಗವಾಗಿ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರಶಸ್ತಿ ಕಾರ್ಯಕ್ರಮದಲ್ಲಿಯೂ ಮುಖ್ಯಮಂತ್ರಿಗಳು ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರುವ ಕೆಲಸವನ್ನು ಶಿಕ್ಷಕರು ಪರಿಣಾಮಕಾರಿಯಾಗಿ ಮಾಡಬೇಕು. ಮೊಬೈಲ್ ಬಿಡಿ–ಪುಸ್ತಕ ಹಿಡಿ ಪ್ರತೀ ಶಾಲೆ ಮತ್ತು ಮನೆಗಳಲ್ಲೂ ಜಾರಿ ಆಗಲಿ ಎಂಬುದಾಗಿ ತಿಳಿಸಿರುತ್ತಾರೆ. ವಿಪರ್ಯಾಸವೆಂದರೆ ಅದರ ರೂವಾರಿಯೇ ಆ ಕಾರ್ಯಕ್ರಮಕ್ಕೆ ಆಯ್ಕೆಯಾಗುವಲ್ಲಿ ವಿಫಲರಾಗಿರುತ್ತಾರೆ. ಬಹುಶಃ ಇವರಿಗೆ ಪ್ರಶಸ್ತಿ ಲಭಿಸಿದ್ದಲ್ಲಿ ಮುಖ್ಯಮಂತ್ರಿಗಳ ಆಶಯಕ್ಕೆ ಅನುಗುಣವಾಗಿ ಈ ಅಭಿಯಾನಕ್ಕೆ ಇನ್ನೂ ಹೆಚ್ಚಿನ ಜೀವಕಳೆ ಬರುತಿತ್ತೇನೋ. ಆದುದರಿಂದ ಈ ಸಮಾಜಮುಖಿ ಕಾರ್ಯಕ್ಕೆ ಬೆಂಬಲವಾಗಿ ಮುಂಬರುವ ಕನ್ನಡ ರಾಜ್ಯೋತ್ಸವ ಅಥವಾ ಇನ್ನಿತರ ಸಂದರ್ಭದಲ್ಲಿ ಅವರನ್ನು ಗೌರವಿಸುವುದು ಔಚಿತ್ಯಪೂರ್ಣವೆನಿಸುತ್ತದೆ.

–ಕೆ.ಎಂ. ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು

ಬ್ಯಾಲೆಟ್ ಮತಪತ್ರ ವಿಶ್ವಾಸಾರ್ಹವೆ?


ಮಾನ್ಯರೆ,

ರಾಜ್ಯದಲ್ಲಿ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಇವಿಎಂಗಳ ಬದಲಿಗೆ ಹಿಂದಿನಂತೆ ಮುದ್ರೆ ಒತ್ತುವ ಬ್ಯಾಲೆಟ್ ಮತಪತ್ರ ಬಳಸಲು ಕಾಂಗ್ರೆಸ್ ನೇತೃತ್ವದ ಕರ್ನಾಟಕ ಸರ್ಕಾರದ ಸಚಿವ ಸಂಪುಟ ತೀರ್ಮಾನಿಸಿದೆ. ಬಿಜೆಪಿ ಇದನ್ನು ವಿರೋಧಿಸಿದೆ. ಹಾಗಾದರೆ ಈಗಿರುವ 136 ಶಾಸಕರು ಹೇಗೆ ಆಯ್ಕೆಯಾಗಿದ್ದೀರಿ ಎಂದು ಪ್ರಶ್ನಿಸಿದೆ.

ದೇಶದಲ್ಲಿ ಕೇವಲ 15–16 ವರ್ಷಗಳಿಂದ ಬಳಸುತ್ತಿರುವ ಇವಿಎಂಗಳನ್ನೇ ನಂಬುವುದಾದರೆ, 50 ವರ್ಷಗಳ ಕಾಲ ಬಳಸಿದ್ದ ಮತಪತ್ರಗಳನ್ನು ಯಾಕೆ ನಂಬಬಾರದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. ಈಗ ಕಳೆದ 3 ಲೋಕಸಭಾ ಚುನಾವಣೆಗಳಲ್ಲೂ ಬಿಜೆಪಿ ಮತಗಳ್ಳತನದಿಂದ ಅಧಿಕಾರಕ್ಕೆ ಬಂದಿರುವುದನ್ನು ನಂಬುವುದಾದರೆ, ಹಿಂದಿನ 50 ವರ್ಷ ಕಾಂಗ್ರೆಸ್ ಕೂಡ ನಕಲಿ ಮತದಾನ, ಚುನಾವಣಾ ಅಧಿಕಾರಿಗಳ ಮೇಲೆ ಪ್ರಭಾವ ಬೀರಿ ಅಕ್ರಮ ಮುದ್ರೆ ಒತ್ತುವ ಮೂಲಕ ಗೆಲುವು ಪಡೆಯುತ್ತಿದ್ದರು ಎನ್ನುವುದನ್ನು ಕೂಡ ನಂಬಬೇಕಲ್ಲವೇ? 30 ವರ್ಷ ಸತತವಾಗಿ ಕಾಂಗ್ರೆಸ್ ಗೆಲ್ಲಲು ಇದೇ ಕಾರಣವೆ? ಸರ್ಕಾರಿ ವ್ಯವಸ್ಥೆಯಲ್ಲಿ ಯಾವುದೂ ಅಸಾಧ್ಯವಲ್ಲ. ಯಾರನ್ನು ನಂಬುವುದು?

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಇಲ್ನೋಡಿ! ಆತ್ಮಹತ್ಯೆ ಎಲ್ಲದಕ್ಕೂ ಪರಿಹಾರವಲ್ಲ



ಆತ್ಮಹತ್ಯೆಯು ಜಗತ್ತನ್ನು ಕಾಡುತ್ತಿರುವ ಗಂಭೀರವಾದ ಸಾರ್ವಜನಿಕ ಆರೋಗ್ಯ ಸಮಸ್ಯೆ. ಪ್ರತಿ ವರ್ಷ ಸುಮಾರು 1 ಮಿಲಿಯನ್ ಜನರು ಜಗತ್ತಿನಾದ್ಯಂತ ಆತ್ಮಹತ್ಯೆಗೆ ಬಲಿಯಾಗುತ್ತಿದ್ದಾರೆ. ಆತ್ಮಹತ್ಯೆ ತಡೆಗಟ್ಟುವಿಕೆ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ವಿಶ್ವ ಆರೋಗ್ಯ ಸಂಸ್ಥೆಯ ಸಹಯೋಗದೊಂದಿಗೆ ಅಂತರ ರಾಷ್ಟ್ರೀಯ ಆತ್ಮಹತ್ಯೆ ತಡೆಗಟ್ಟುವಿಕೆ ಸಂಸ್ಥೆಯು ಪ್ರತಿ ವರ್ಷ ಸೆ.10ರಂದು 'ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ದಿನ' ಆಚರಿಸಲಾಗುತ್ತಿದೆ.

ಆತ್ಮಹತ್ಯೆಗೆ ಹಲವಾರು ಮನೋಸಾಮಾಜಿಕ ಕಾರಣಗಳಿವೆ. ಮುಖ್ಯವಾಗಿ ಮಾನಸಿಕ ಖಿನ್ನತೆ, ಪರೀಕ್ಷೆಯ ಸೋಲು, ಹಣಕಾಸಿನ ತೊಂದರೆ, ವೈವಾಹಿಕ ಸಮಸ್ಯೆಗಳು, ಕೌಟುಂಬಿಕ ದೌರ್ಜನ್ಯ, ತೀವ್ರ ಬಡತನ, ಕೆಲಸದ ಒತ್ತಡ, ದೀರ್ಘಕಾಲಿಕ ಆರೋಗ್ಯ ಸಮಸ್ಯೆಗಳು ಮತ್ತು ನೋವು, ಭಾವನಾತ್ಮಕ ಸಂಬಂಧಗಳಲ್ಲಿ ಬಿರುಕು, ಹತಾಶೆ, ಜೀವನದ ಬಗೆಗಿನ ಜಿಗುಪ್ಸೆ ಒಂಟಿತನ, ಪ್ರೀತಿ ಪಾತ್ರರುನ್ನು ಕಳೆದುಕೊಳ್ಳುವಿಕೆ, ಭವಿಷ್ಯದ ಬಗೆಗೆ ಅನಿಶ್ಚಿತತೆ, ಭಯ ಮತ್ತು ಆತಂಕ, ಜೀವನದಲ್ಲಿ ಹಠಾತ್ ಸಂಭವಿಸುವ ಕಷ್ಟನಷ್ಟಗಳು ಇತ್ಯಾದಿ... ಇತ್ಯಾದಿ...

ವರ್ತನಾ ಮುನ್ಸೂಚನೆಗಳು

- ಸದಾ ಖಿನ್ನತೆಯ ಭಾವದಿಂದ ಬಳಲುವುದು; ದುಃಖಿತರಂತೆ ಇರುವುದು.
- ವಿಪರೀತ ಹತಾಶೆ ಭಾವನೆಗಳನ್ನು ವ್ಯಕ್ತಪಡಿಸುವುದು.
- ಊಟ, ನಿದ್ರೆ, ಔಷಧಿಗಳನ್ನು ತ್ಯಜಿಸುವಂತಹ ವಿನಾಶಕಾರಿ ವರ್ತನೆ.
- ಸ್ವ–ನಿಂದನೆ ಮತ್ತು ಸ್ವ–ದ್ವೇಷಿಸುವಿಕೆಯನ್ನು ನಿರಂತರವಾಗಿ ಅಭಿವ್ಯಕ್ತಪಡಿಸುವುದು.
- ಕುಟುಂಬ ಮತ್ತು ಸ್ನೇಹಿತರಿಂದ ದೂರವಿರಲು ಬಯಸುವುದು.
- ಜೀವನವೇ ಸಾಕಾಗಿದೆ, ಬದುಕಲು ಇಷ್ಟವಿಲ್ಲ ಎಂಬ ಬಹಿರಂಗ ಹೇಳಿಕೆ.
- ಜೀವನದಲ್ಲಿನ ಕಷ್ಟಗಳನ್ನು ನಿಯಂತ್ರಿಸಲಾಗದೆ ಅಸಹಾಯಕತೆಯನ್ನು ತೋರ್ಪಡಿಸುವುದು.
- 'ನಾನು ನಿಮಗೆ ಹೆಚ್ಚುಕಾಲ ಸಮಸ್ಯೆಯಾಗಿ ಉಳಿಯುವುದಿಲ್ಲ' ಎಂದು ಕುಟುಂಬದ ಸದಸ್ಯರೊಂದಿಗೆ ಹೇಳಿಕೊಳ್ಳುವುದು.
- ಬದುಕು ಶೂನ್ಯವಾಗಿದೆ, ಬದುಕುವ ಆಸಕ್ತಿ ಇನ್ನು ಉಳಿದಿಲ್ಲ ಎಂದು ಪದೇ ಪದೆ ಹೇಳುವುದು.
- ಜೀವನವೇ ಸಾಕಾಗಿದೆ, ಯಾರಾದರೂ ಸಹಾಯ ಮಾಡಲಿ ಎಂದು ನಿರೀಕ್ಷಿಸುವುದು.

ಆತ್ಮಹತ್ಯೆ ಪರಿಹಾರಗಳು

ಆತ್ಮಹತ್ಯೆಗೆ ಪ್ರಯತ್ನಿಸುವ ವ್ಯಕ್ತಿಗಳಲ್ಲಿ ಕಂಡುಬರುವಂತಹ ವರ್ತನಾ ಮುನ್ಸೂಚನೆಗಳನ್ನು ಪ್ರಾರಂಭದಲ್ಲೇ ಗುರುತಿಸಿ, ಗಂಭೀರವಾಗಿ ಪರಿಗಣಿಸಿ ಮನೋವೈಜ್ಞಾನಿಕ ಪರಿಹಾರಗಳನ್ನು ಅನುಸರಿಸುವ ಮೂಲಕ ಆತ್ಮಹತ್ಯೆಯನ್ನ ತಡೆಗಟ್ಟಬಹುದು.

ಮಾನಸಿಕ ಆರೋಗ್ಯ ನೆರವು

ಮಾನಸಿಕ ಸಮಸ್ಯೆಗಳಾದ ಖಿನ್ನತೆ, ಒತ್ತಡ, ಕೌಟುಂಬಿಕ ಸಮಸ್ಯೆಗಳು, ಆತ್ಮಹತ್ಯೆ ಆಲೋಚನೆಗಳು, ಮಾದಕವಸ್ತು ವ್ಯಸನ ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವವರಿಗೆ 'ಮುಕ್ತ ಮಾನಸಿಕ ಆರೋಗ್ಯ ಸಹಾಯವಾಣಿ', 'ಓನ್‌ಲೈಫ್ ಸಹಾಯವಾಣಿ', 'ಟೆಲಿ–ಮನಸ್' ಸಹಾಯವಾಣಿಗಳು ಉಚಿತ ಆಪ್ತಸಮಾಲೋಚನೆಯ ಸೇವೆಯನ್ನು ಒದಗಿಸುತ್ತವೆ. ಆತ್ಮಹತ್ಯೆ ಆಲೋಚನೆಗಳಿಂದ ಬಳಲುತ್ತಿರುವವರು ಈ ಸಹಾಯವಾಣಿಗಳಿಗೆ ಕರೆಮಾಡಿ ಉಚಿತ ಆಪ್ತಸಮಾಲೋಚನೆಯನ್ನು ಪಡೆದುಕೊಂಡು ಮಾನಸಿಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

ಪರಿಣತರಿಂದ ಮನೋಚಿಕಿತ್ಸೆ

ಮನೋಚಿಕಿತ್ಸೆಗಳು ಮಾತಿನ ಚಿಕಿತ್ಸೆಗಳಾಗಿರುತ್ತವೆ. ಆತ್ಮಹತ್ಯೆಗೆ ಪ್ರಯತ್ನಿಸುವ ವ್ಯಕ್ತಿಗಳಲ್ಲಿ ನಕಾರಾತ್ಮಕ ಆಲೋಚನೆಗಳು, ಭಾವನೆಗಳು ಮತ್ತು ವರ್ತನೆಗಳ ವಿನ್ಯಾಸಗಳು ಕಂಡುಬರುತ್ತವೆ. ಸಂಜ್ಞಾನಾತ್ಮಕ ವರ್ತನಾ ಚಿಕಿತ್ಸೆಯ ಮುಖಾಂತರ ನಕಾರಾತ್ಮಕ ಆಲೋಚನೆ, ಭಾವನೆ ಮತ್ತು ವರ್ತನೆಗಳನ್ನು ತೊಡೆದುಹಾಕಬಹುದು. ಇದರಿಂದ ಆತ್ಮಹತ್ಯೆಯಂತಹ ಆಲೋಚನೆಗಳು ಕಡಿಮೆಯಾಗಿ ವ್ಯಕ್ತಿಯಲ್ಲಿ ಬದುಕಿನ ಬಗೆಗೆ ಸಕಾರಾತ್ಮಕ ಆಲೋಚನೆ ಮತ್ತು ಭಾವನೆಗಳು ಉಂಟಾಗುತ್ತವೆ. ಹಾಗೆಯೇ ಆತ್ಮಹತ್ಯೆ ಆಲೋಚನೆಗಳು ಮತ್ತು ಭಾವನೆಗಳನ್ನು ನಿಯಂತ್ರಿಸುವಲ್ಲಿ ಮನೋಚಾಲಿತ ಚಿಕಿತ್ಸೆಯು ಪರಿಣಾಮಕಾರಿಯಾಗಿದೆ. ಈ ಚಿಕಿತ್ಸೆಯಲ್ಲಿ ಭಾವವಿರೇಚನೆ ತಂತ್ರವನ್ನು ಬಳಸುವ ಮುಖಾಂತರ ವ್ಯಕ್ತಿಯ ಮನಸ್ಸಿನಲ್ಲಿರುವ ನಕಾರಾತ್ಮಕ ಆಲೋಚನೆಗಳು, ದುಃಖ, ನಿರಾಶೆ, ಆತಂಕ, ದ್ವಂದ್ವ, ಘರ್ಷಣೆಗಳನ್ನು ವ್ಯಕ್ತಿಯು ಮಾತಿನ ಮುಖಾಂತರ ವ್ಯಕ್ತಪಡಿಸುವುದರಿಂದ ಮನಸ್ಸು ಹಗುರವಾಗುತ್ತದೆ ಹಾಗೂ ಚಿಕಿತ್ಸಕರು ಅದಕ್ಕೆ ಸೂಕ್ತ ಸಾಂತ್ವನ ನೀಡಿ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳಲು ಮಾರ್ಗಗಳನ್ನು ಸೂಚಿಸುತ್ತಾರೆ. ಮನೋಚಿಕಿತ್ಸೆಯಲ್ಲಿ ತಾರ್ಕಿಕ ಸಂವೇಗಾತ್ಮಕ ವರ್ತನಾತ್ಮಕ ಚಿಕಿತ್ಸೆಯು ಅತಾರ್ಕಿಕ ಆಲೋಚನೆಗಳು ಮತ್ತು ಭಾವನೆಗಳನ್ನು ಹೋಗಲಾಡಿಸಲು ಪರಿಣಾಮಕಾರಿಯಾಗಿವೆ. ಆತ್ಮಹತ್ಯೆ ಆಲೋಚನೆವುಳ್ಳ ವ್ಯಕ್ತಿಗಳು ಪರಿಣತರಿಂದ ಮನೋಚಿಕಿತ್ಸೆಗಳನ್ನು ಪಡೆದುಕೊಂಡು ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

> ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವವು ಅತ್ಯಮೂಲ್ಯವಾದುದ್ದು. ಪ್ರತಿಯೊಂದು ಜೀವವನ್ನು ಸಂರಕ್ಷಿಸುವುದು ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆ ಪ್ರಸ್ತುತ ವರ್ಷದ ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ದಿನಾಚರಣೆ ಧ್ಯೇಯವಾಕ್ಯ 'ಆತ್ಮಹತ್ಯೆ ಬಗೆಗಿನ ಕಥನಗಳನ್ನು ಬದಲಿಸೋಣ' ಎಂಬುದಾಗಿದೆ.

■ ಡಾ. ಸುರ್ಮ. ಎಸ್.
ಮನೋಶಾಸ್ತ್ರಜ್ಞರು, ಕರ್ನಾಟಕ ರಾಜ್ಯ ಮುಕ್ತ ವಿವಿ, ಮೈಸೂರು. ಮೊ. 7975336088

ಮನೋಸಾಮಾಜಿಕ ಬೆಂಬಲ ಪಡೆಯುವುದು

ಪ್ರತಿಯೊಬ್ಬರ ಬದುಕಿನಲ್ಲಿ ಅತ್ಯಂತ ಸಂಕಷ್ಟದ ದಿನಗಳು ಮತ್ತು ಸಮಸ್ಯೆಗಳು ಎದುರಾಗುತ್ತವೆ. ಪ್ರತಿಯೊಂದು ಸಮಸ್ಯೆಗೂ ಪರಿಹಾರ ವಿರುತ್ತದೆ. ಸಮಸ್ಯೆಗಳು ಎದುರಾದಾಗ ಜೀವನವನ್ನು ಕೊನೆಗಾಣಿಸಿಕೊಳ್ಳುವ ನಕಾರಾತ್ಮಕ ಆಲೋಚನೆಗೆ ಬರಬಾರದು. ಇಂತಹ ಸಂಕಷ್ಟದ ಸನ್ನಿವೇಶದಲ್ಲಿ ವ್ಯಕ್ತಿಯು ಕುಟುಂಬ, ಗೆಳೆಯರು, ಆರೋಗ್ಯಸೇವೆ ವೃತ್ತಿಪರರಿಂದ ಮನೋಸಾಮಾಜಿಕ ಬೆಂಬಲವನ್ನು ಪಡೆದುಕೊಂಡು ಆತ್ಮಹತ್ಯೆಯ ಆಲೋಚನೆಯ ಅಪಾಯಗಳಿಂದ ಪಾರಾಗಬಹುದು.

ಆಪ್ತಸಮಾಲೋಚನೆ

ಆತ್ಮಹತ್ಯೆಯ ಆಲೋಚನೆಯಿಂದ ಬಳಲುವ ವ್ಯಕ್ತಿಗಳಲ್ಲಿ ಕಂಡುಬರುವ ಮೂಲಭೂತ ಸಮಸ್ಯೆಯೆಂದರೆ ತಾವು ಬಯಸುವ ಜೀವನವನ್ನು ನಡೆಸಲು ತಮ್ಮಲ್ಲಿ ಸಾಮರ್ಥ್ಯವಿಲ್ಲ ಎಂಬ ನಕಾರಾತ್ಮಕ ಭಾವನೆ ಹೊಂದಿರುತ್ತಾರೆ. ಇವರಲ್ಲಿ ಹತಾಶೆ, ದುಃಖದ ದೀರ್ಘಕಾಲದ ಭಾವನೆಗಳು ಕಂಡುಬರುತ್ತವೆ. ದುಃಖವು ಜೀವನದಲ್ಲಿ ಶಾಶ್ವತವಾಗಿರುತ್ತದೆ ಎಂದು ಭಾವಿಸುತ್ತಾರೆ. ಇವರಿಗೆ ಆಪ್ತ ಸಮಾಲೋಚನೆಯು ತುಂಬಾ ಅಗತ್ಯವಾಗಿರುತ್ತದೆ. ಆದಕಾರಣ ಹತ್ತಿರವಿರುವ ಆಪ್ತಸಮಾಲೋಚನಾ ಕೇಂದ್ರಕ್ಕೆ ಭೇಟಿಕೊಟ್ಟು ವಿಷಯ ಪರಿಣತರಿಂದ ಸೂಕ್ತವಾದ ಸಲಹೆ ಮತ್ತು ಆಪ್ತಸಮಾಲೋಚನೆ ಪಡೆಯುವುದರಿಂದ ಆತ್ಮಹತ್ಯೆ ಆಲೋಚನೆಗಳು ಮತ್ತು ದುಃಖದ ಭಾವನೆಗಳು ದೂರವಾಗುತ್ತವೆ.

ಸಹಾನುಭೂತಿಯ ಆಲಿಸುವಿಕೆ

ಆತ್ಮಹತ್ಯೆಗೆ ಪ್ರಯತ್ನಿಸುವ ವ್ಯಕ್ತಿಯೊಂದಿಗೆ ಮುಖಾಮುಖಿಯಾಗಿ ಆತನ ಸಮಸ್ಯೆಯನ್ನು ಸಹಾನುಭೂತಿಯಿಂದ ಆಲಿಸಿ ಮತ್ತು ಭಾವನೆಗಳಿಗೆ ಸ್ಪಂದಿಸಿ, ಅರ್ಥಮಾಡಿಕೊಂಡು ಸಮಸ್ಯೆಗೆ ಪರಿಹಾರದ ಮಾರ್ಗಗಳನ್ನು ಸೂಚಿಸುವ ಮೂಲಕ ಆತನಲ್ಲಿ ಬದುಕಿನ ಬಗೆಗೆ ಭರವಸೆಯನ್ನುಂಟು ಮಾಡಿ ಆತ್ಮಹತ್ಯೆಯ ಪ್ರಯತ್ನವನ್ನು ತಡೆಗಟ್ಟಬಹುದು.

ಮಾನಸಿಕ ಆರೋಗ್ಯ ಅರಿವು

ಮಾನಸಿಕ ಖಿನ್ನತೆ, ಹತಾಶೆ, ಜೀವನದ ಬಗೆಗಿನ ಜಿಗುಪ್ಸೆ ಒಂಟಿತನ, ಭಾವನಾತ್ಮಕ ಅಸಮತೋಲನ, ಜೀವನದ ಬಗೆಗಿನ ನಕಾರಾತ್ಮಕ ಆಲೋಚನೆಗಳು, ಆತ್ಮಹತ್ಯೆಗೆ ಪ್ರಮುಖ ಮಾನಸಿಕ ಕಾರಣಗಳಾಗಿರುವುದರಿಂದ ಸಮುದಾಯಕ್ಕೆ ಮಾನಸಿಕ ಆರೋಗ್ಯದ ಬಗೆಗೆ ಅರಿವಿನ ಕಾರ್ಯಕ್ರಮಗಳನ್ನು ಶಾಲಾ ಕಾಲೇಜುಗಳಲ್ಲಿ, ಆರೋಗ್ಯ ಕ್ಷೇತ್ರಗಳಲ್ಲಿ, ಕೆಲಸದ ಸ್ಥಳಗಳಲ್ಲಿ, ಸಮುದಾಯ ಶಿಬಿರಗಳಲ್ಲಿ ಆಯೋಜಿಸುವುದರಿಂದ ಆತ್ಮಹತ್ಯೆ ಪ್ರಯತ್ನಗಳನ್ನು ನಿಯಂತ್ರಿಸಬಹುದು.

ವಿಷಯ ಪರಿಣತರುಗಳ ಸೇವೆ ಪಡೆಯುವುದು

ಮನೋವೈದ್ಯರು, ಮನೋಶಾಸ್ತ್ರಜ್ಞರು, ಆಪ್ತಸಮಾಲೋಚಕರು, ಸಮುದಾಯ ಆರೋಗ್ಯ ಪರಿಣತರು, ಆತ್ಮಹತ್ಯೆಯನ್ನು ತಡೆಗಟ್ಟಲು ಮಧ್ಯಪ್ರವೇಶಿಸುವಿಕೆ ಕಾರ್ಯಕ್ರಮಗಳನ್ನು ಆಯೋಜಿಸಿ ವ್ಯಕ್ತಿಗಳಲ್ಲಿ ಮನೋಸ್ಥೈರ್ಯ ಹೆಚ್ಚಿಸುವುದರ ಮುಖಾಂತರ ಆತ್ಮಹತ್ಯೆ ತಡೆಯಬಹುದು.

ಜೀವನ ಕೌಶಲಗಳ ತರಬೇತಿ

ವಿದ್ಯಾರ್ಥಿ ಮತ್ತು ಯುವ ಸಮುದಾಯಕ್ಕೆ ಸ್ವ–ಪ್ರಜ್ಞೆ, ಒತ್ತಡ ನಿರ್ವಹಣೆ, ಭಾವನಾತ್ಮಕ ನಿರ್ವಹಣೆ, ದೃಢವರ್ತನೆ, ಸಮಸ್ಯೆ ಬಗೆಹರಿಸುವಿಕೆ, ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ, ಸಕಾರಾತ್ಮಕ ಆಲೋಚನೆ ಮತ್ತು ವಿಮರ್ಶಾತ್ಮಕ ಚಿಂತನೆ ಮುಂತಾದ ಜೀವನ ಕೌಶಲಗಳನ್ನು ಕಲಿಸುವುದರಿಂದ ಸದೃಢ ಮಾನಸಿಕ ಸಾಮರ್ಥ್ಯಗಳು ಅಭಿವೃದ್ಧಿಯಾಗುತ್ತವೆ. ಪರಿಣಾಮವಾಗಿ, ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಆತ್ಮವಿಶ್ವಾಸದಿಂದ ನಿಭಾಯಿಸುವ ಸಾಮರ್ಥ್ಯಗಳನ್ನು ಸ್ವತಃ ರೂಢಿಸಿಕೊಳ್ಳುವುದರಿಂದ ಆತ್ಮಹತ್ಯೆಯ ಪ್ರಯತ್ನಗಳು ನಿಯಂತ್ರಿಸಲ್ಪಡುತ್ತವೆ. ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಜೀವವು ಅತ್ಯಮೂಲ್ಯವಾದುದ್ದು. ಪ್ರತಿಯೊಂದು ಜೀವವನ್ನು ಸಂರಕ್ಷಿಸುವುದು ಸಾಮಾಜಿಕ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ವರ್ಷದ ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ದಿನಾಚರಣೆ ಧ್ಯೇಯವಾಕ್ಯ 'ಆತ್ಮಹತ್ಯೆ ಬಗೆಗಿನ ಕಥನಗಳನ್ನು ಬದಲಿಸೋಣ' ಎಂಬುದಾಗಿದೆ.

ಆದ್ದರಿಂದ ಸಮಾಜ, ಆರೋಗ್ಯ ಕ್ಷೇತ್ರದ ವೃತ್ತಿಪರರು, ಸಂಸ್ಥೆಗಳು, ಆತ್ಮಹತ್ಯೆಗೆ ಪ್ರಯತ್ನಿಸುವಂತಹ ವ್ಯಕ್ತಿಗಳನ್ನು ಗುರುತಿಸಿ, ಅವರ ಸಮಸ್ಯೆಗಳಿಗೆ ಸ್ಪಂದಿಸಿ, ಅನುಕಂಪ ಮತ್ತು ಸಹಾನುಭೂತಿಯನ್ನು ನೀಡುವ ಮೂಲಕ ಅವರುಗಳಲ್ಲಿ ಬದುಕಿನ ಭರವಸೆಯನ್ನು ಮೂಡಿಸಿ ಜೀವಗಳನ್ನು ಉಳಿಸುವುದು ವಿಶ್ವ ಆತ್ಮಹತ್ಯೆ ತಡೆಗಟ್ಟುವಿಕೆ ದಿನಾಚರಣೆಯ ಉದ್ದೇಶವಾಗಿರುತ್ತದೆ.

ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರಾಗಿ ಡಾ.ದಿನೇಶ್



ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕರಾಗಿ ಡಾ.ದಿನೇಶ್ ಬುಧವಾರ ಅಧಿಕಾರ ವಹಿಸಿಕೊಂಡರು.

ಬೆಂಗಳೂರು,ಸೆ.10(ಕೆಎಂಶಿ)–ಪ್ರತಿಷ್ಠಿತ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕರಾಗಿ ಮೈಸೂರು ಜಯದೇವ ಹೃದ್ರೋಗ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ. ದಿನೇಶ್ ಬಿ. ನೇಮಕವಾಗಿದ್ದಾರೆ.

ಡಾ.ಮಂಜುನಾಥ್ ನಿವೃತ್ತಿ ನಂತರ ಖಾಯಂ ನಿರ್ದೇಶಕರನ್ನು ಸರ್ಕಾರ ನೇಮಿಸಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷರಾಗಿರುವ ಹಾಗೂ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣ ಪ್ರಕಾಶ್ ಆರ್.ಪಾಟೀಲ್ ಸಹ ಅಧ್ಯಕ್ಷರಾಗಿರುವ ಆಯ್ಕೆ ಸಮಿತಿ ನಡೆಸಿದ ನೇಮಕಾತಿ ಪ್ರಕ್ರಿಯೆ ನಂತರ ಡಾ.ದಿನೇಶ್ ಅವರನ್ನು ಜಯದೇವ ಸಂಸ್ಥೆ ನಿರ್ದೇಶಕರನ್ನಾಗಿ ನೇಮಿಸಿ, ಇಂದು ಸರ್ಕಾರ ಆದೇಶ ಹೊರಡಿಸಿದೆ. ಆದೇಶ ಹೊರಬೀಳುತ್ತಿದ್ದಂತೆ ಡಾ.ದಿನೇಶ್ ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ವೈದ್ಯಕೀಯ ಶಿಕ್ಷಣ ನಿರ್ದೇಶಕಿ ಡಾ.ಸುಜಾತಾ ರಾಥೋಡ್, ರಾಜೀವ್ ಗಾಂಧಿ ವೈದ್ಯಕೀಯ ವಿಶ್ವವಿದ್ಯಾಲಯ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಹಾಗೂ ನವದೆಹಲಿ ಏಮ್ಸ್‌ನ ಡಾ.ನಿತೀಶ್ ನಾಯಕ್, ತಿರುವನಂತಪುರಂ ಚೈತನ್ಯ ಉನ್ನತ ಶಿಕ್ಷಣ ಸಂಸ್ಥೆಯ ಡಾ. ಹರಿಕೃಷ್ಣನ್ ಸೇರಿದಂತೆ ಇತರೆ ಸದಸ್ಯರ ಆಯ್ಕೆ ಸಮಿತಿ ಡಾ.ದಿನೇಶ್ ಅವರನ್ನು ಆಯ್ಕೆ ಮಾಡಿತು.

ಮೈಸೂರಿನ ತಿರುಮಕೂಡಲು ನರಸೀಪುರದ ಸೋಸಲೆ ಹೋಬಳಿ ದೊಡ್ಡಬಾಗಿಲು ಗ್ರಾಮದ ಡಾ.ದಿನೇಶ್ ಮೈಸೂರಿನಲ್ಲಿ ಶಿಕ್ಷಣ, ವೈದ್ಯಕೀಯ ಶಿಕ್ಷಣ ಪೂರೈಸಿದರು. ವೈದ್ಯಾಧಿಕಾರಿಯಾಗಿ, ಮೈಸೂರು ವೈದ್ಯಕೀಯ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಅಸಿಸ್ಟೆಂಟ್ ಪ್ರೊಫೆಸರ್, ಕೆ.ಆರ್.ಆಸ್ಪತ್ರೆಯ ಕಾರ್ಡಿಯಾಲಜಿ ವಿಭಾಗದ ಮುಖ್ಯಸ್ಥರಾಗಿ, ಹಾಲಿ ಜಯದೇವ ಸಂಸ್ಥೆಯ ಕಾರ್ಡಿಯಾಲಜಿ ವಿಭಾಗದ ಪ್ರೊಫೆಸರ್ ಆಗಿದ್ದರು. ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ (ಐಎಂಎ), ಅಸೋಸಿಯೇಟ್ಸ್ ಆಫ್ ಫಿಸಿಷಿಯನ್, ಕಾರ್ಡಿಯಾಲಜಿ ಸೊಸೈಟಿ ಆಫ್ ಇಂಡಿಯಾದ ಖಾಯಂ ಸದಸ್ಯರಾಗಿರುವ ಡಾ.ದಿನೇಶ್, ಡಾಕ್ಟರ್ಸ್ ಕೋ ಆಪರೇಟಿವ್ ಸೊಸೈಟಿ, ರಿಸರ್ಚ್ ಸೊಸೈಟಿ ಫಾರ್ ದಿ ಸ್ಟಡಿ ಆಫ್ ಡಯಾಬಿಟಿಸ್ ಇನ್ ಇಂಡಿಯಾ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ವಿನಯ ಕುಲಕರ್ಣಿ, ಸತೀಶ್ ಸೈಲ್, ವೀರೇಂದ್ರ ಪಪ್ಪಿ ಬಳಿಕ ಮತ್ತಷ್ಟು ಶಾಸಕರಿಗೆ ಬಂಧನ ಭೀತಿ

ಸಿಬಿಐ ಬೇಡ ಎಂದ ರಾಜ್ಯ ಸರ್ಕಾರಕ್ಕೆ ಈಗ ಸಿಂಹಸ್ವಪ್ನವಾಗಿರುವ ಇಡಿ!

ಬೆಂಗಳೂರು, ಸೆ. 10(ಕೆಎಂಶಿ)– ಆಡಳಿತಾರೂಢ ಕಾಂಗ್ರೆಸ್‌ನ ಮೂವರು ಶಾಸಕರು ಜೈಲುಪಾಲಾಗಿದ್ದರೆ, ಇನ್ನು ಕೆಲವರು ಅದೇ ಹಾದಿಯಲ್ಲಿದ್ದಾರೆ.

ಕೊಲೆ, ಅಕ್ರಮ ಗಣಿಗಾರಿಕೆ ಹಾಗೂ ಆನ್‌ಲೈನ್ ಗೇಮ್ಸ್ ದಂಧೆ ಆರೋಪದ ಮೇಲೆ ವಿನಯ್ ಕುಲಕರ್ಣಿ, ಸತೀಶ್ ಸೈಲ್ ಹಾಗೂ ವೀರೇಂದ್ರ ಪಪ್ಪಿ ಜೈಲು ಸೇರಿದ್ದಾರೆ.

ಅಕ್ಟೋಬರ್–ನವೆಂಬರ್ ವೇಳೆಗೆ ರಾಜ್ಯದಲ್ಲಿ ರಾಜಕೀಯ ಕ್ರಾಂತಿ ಆಗುವುದಕ್ಕೂ ಮುನ್ನ ಕೆಲವು ಆರೋಪಗಳ ಮೇಲೆ ಕಾಂಗ್ರೆಸ್ ಶಾಸಕರು ಜಾರಿ ನಿರ್ದೇಶನಾಲಯದ (ಇ.ಡಿ.) ಇಕ್ಕಳದಲ್ಲಿ ಸಿಲುಕುವ ಲಕ್ಷಣಗಳು ಕಂಡುಬರುತ್ತಿವೆ.

ಮಹರ್ಷಿ ವಾಲ್ಮೀಕಿ ನಿಗಮದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸಂಪುಟದಲ್ಲಿದ್ದ ಬಿ.ನಾಗೇಂದ್ರ ಜೈಲು ಸೇರಿ ಈಗ ಬೇಲ್ ಮೇಲೆ ಹೊರಗಿದ್ದಾರೆ. ಯಡಿಯೂರಪ್ಪ ಸಿಎಂ ಆಗಿದ್ದಾಗ ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಹಾಲಿ ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧದ ಪ್ರಕರಣವನ್ನು ಅಂದಿನ ಬಿಜೆಪಿ ಸರ್ಕಾರ ಸಿಬಿಐಗೆ ವಹಿಸಿತ್ತು.

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಶಿವಕುಮಾರ್ ವಿರುದ್ಧದ ಸಿಬಿಐ ತನಿಖೆ ಹಿಂದೆ ಪಡೆದಿದ್ದಲ್ಲದೆ, ರಾಜ್ಯ ಸರ್ಕಾರದ ಅನುಮತಿ ಇಲ್ಲದೆ ಸ್ವಯಂ ಪ್ರೇರಿತವಾಗಿ ಸಿಬಿಐ ಕರ್ನಾಟಕದಲ್ಲಿ ಯಾವುದೇ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳುವಂತಿಲ್ಲ ಎಂದು ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ಕೈಗೊಂಡಿತ್ತು.

ಸರ್ಕಾರದ ನಿರ್ಧಾರದ ನಂತರವೂ ಹಲವು ಹಗರಣಗಳು ನಡೆದಿವೆ ಎಂಬ ಆರೋಪದ ಮೇಲೆ ಸಿಬಿಐಗೆ ವಹಿಸುವಂತೆ ಒತ್ತಡ ಬಂದರೂ ಸರ್ಕಾರ ಮಣಿಯಲಿಲ್ಲ. ಆದರೆ, ಕೇಂದ್ರ ಸರ್ಕಾರ ಭ್ರಷ್ಟಾಚಾರ ಆರೋಪಗಳು ಕೇಳಿಬಂದಾಗಲೆಲ್ಲಾ ಸಿಬಿಐ ಬದಲು ಇ.ಡಿ. ಮೂಲಕ ಸತ್ಯಾಸತ್ಯತೆ ಬಯಲು ಮಾಡಲು ಮುಂದಾಗಿದೆ.

ಆದಿಚುಂಚನಗಿರಿ ಶಾಖಾ ಮಠದ 2ನೇ ವಾರ್ಷಿಕೋತ್ಸವ: ನವಚಂಡಿಕಾ ಮಹಾಯಾಗ



ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ಆವರಣದ ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರಿನ ಶಾಖಾ ಮಠದಲ್ಲಿ ಎರಡನೇ ವಾರ್ಷಿಕೋತ್ಸವದ ಅಂಗವಾಗಿ ಲೋಕಕಲ್ಯಾಣಾರ್ಥ ಆಯೋಜಿಸಿದ್ದ ನವಚಂಡಿಕಾ ಮಹಾಯಾಗದಲ್ಲಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು.

ಮೈಸೂರು, ಸೆ.10(ಎಂಟಿವೈ)– ಆದಿಚುಂಚನಗಿರಿ ಮಹಾಸಂಸ್ಥಾನ ಮೈಸೂರಿನ ಶಾಖಾಮಠದಲ್ಲಿ 2ನೇ ವಾರ್ಷಿಕೋತ್ಸವದ ಅಂಗವಾಗಿ ಲೋಕಕಲ್ಯಾಣಾರ್ಥ ನವಚಂಡಿಕಾ ಮಹಾಯಾಗ ಏರ್ಪಡಿಸಲಾಗಿತ್ತು. ಮಹಾಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಗಳು ನೆರವೇರಿದವು.

ಮೈಸೂರಿನ ಹೆಬ್ಬಾಳ್ ಬಡಾವಣೆಯಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯದ ಆವರಣದಲ್ಲಿರುವ ಶಾಖಾಮಠದಲ್ಲಿ ಗುರುದೇವತಾ ಪ್ರಾರ್ಥನೆ, ಗಂಗಾಪೂಜೆ, ಮಹಾಗಣಪತಿ ಪೂಜೆ, ಮಹಾ ಸಂಕಲ್ಪ, ಕಲಶ ಸ್ಥಾಪನೆ, ಅಗ್ನಿಪ್ರತಿಷ್ಠೆ, ಮಹಾಗಣಪತಿ ಹೋಮ, ನವಗ್ರಹ ಹೋಮ ನಡೆಯಿತು. ಬುಧವಾರ ಮಹಾಗಣಪತಿ ಪ್ರಾರ್ಥನೆ, ಅಮ್ಮನವರಿಗೆ ಫಲಪಂಚಾಮೃತ ಅಭಿಷೇಕ, ಅಗ್ನಿಪ್ರತಿಷ್ಠೆ, ನವಚಂಡಿಕಾ ಮಹಾಯಾಗ ಶ್ರೀ ಮಹಾಲಕ್ಷ್ಮೀ ಲಕ್ಷ್ಮೀಕಾಂತ ಸ್ವಾಮಿಯವರಿಗೆ ಕಳಶಾಭಿಷೇಕ, ಅಷ್ಟಾವಧಾನ ಸೇವೆ, ಮಹಾಮಂಗಳಾರತಿ ನೆರವೇರಿಸಲಾಯಿತು.

ನವ ಚಂಡಿಕಾಯಾಗ ಸೇರಿದಂತೆ ಎಲ್ಲಾ ಧಾರ್ಮಿಕ ಕಾರ್ಯದಲ್ಲಿ ಪಾಲ್ಗೊಂಡಿದ್ದ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಭಕ್ತರನ್ನುದ್ದೇಶಿಸಿ ಮಾತನಾಡಿ, ಹೋಮಕ್ಕೆ ತನ್ನದೇ ಆದ ವಿಶೇಷತೆ ಇದೆ. ಸನಾತನ ಪ್ರಕ್ರಿಯೆಗಳಿಗೆ ಪೂರಕವಾಗಿ ಇಂದು ಹೋಮ–ಹವನಗಳ ನಡೆಸಲಾಗಿದೆ. ಮನಸ್ಸು ಶುದ್ಧವಿದ್ದರೆ ದೈವದ ಕಡೆಗೆ ಹೋಗುತ್ತದೆ. ದೇವಿಯನ್ನು ಪೂಜಿಸುವುದರಿಂದ ಬಹಳ ಬೇಗ ದೈವತ್ವ ಪಡೆಯಬಹುದು. ಮೋಕ್ಷವನ್ನು ತೋರಿಸುವ ಕೆಲಸವನ್ನು ತಾಯಿ ಮಾಡುತ್ತಾರೆ. ಅಮ್ಮನಿಗೆ ಹತ್ತಿರವಾಗಿರುವ ದೇವಿಯನ್ನು ಕುರಿತಾಗಿರುವ ಯಜ್ಞ ನಡೆದಿರುವುದರಿಂದ ಪರಮಾತ್ಮನ ಕೃಪೆಗೆ ಪಾತ್ರರಾಗಲು ಸಾಧ್ಯ. ದೈವವನ್ನು ತೋರಿಸುವುದಕ್ಕೆ ಅಮ್ಮನೇ ಮಾರ್ಗ. ನಮ್ಮ ಒಂದು ಪರಂಪರೆಯಲ್ಲಿ ವ್ಯಕ್ತಿಯ ಬದುಕಿನ ಉದ್ದೇಶವೇನೆಂದರೆ ಮುಕ್ತಿ ಪಡೆಯುವುದು. ಅದಕ್ಕೆ ಜ್ಞಾನ ಮುಖ್ಯ. ಸ್ವಾರ್ಥ ರಹಿತವಾದ ನಿಸ್ವಾರ್ಥ ಸೇವೆ ಮುಕ್ತಿಯೆಡೆಗೆ ಪ್ರತಿಯೊಬ್ಬರನ್ನು ಕೊಂಡೊಯ್ಯುತ್ತದೆ. ಭಕ್ತಿಯಲ್ಲಿ ಮನಸ್ಸಿಗೆ ಆನಂದ ಸಿಗುತ್ತದೆ. ಆದ್ದರಿಂದ ಭಗವಂತ ನಾಡಿಗೆ, ನಾಡಿನ ಜನತೆಗೆ ಒಳ್ಳೆಯದು ಮಾಡಲಿ ಎಂದರು.

ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ವಿವಿಧ ಶಾಖಾಮಠಗಳ ಸ್ವಾಮೀಜಿಗಳು, ವಿಧಾನಪರಿಷತ್ ಸದಸ್ಯ ಜಿ.ಮಾದೇಗೌಡ, ಮಾಜಿ ಮೇಯರ್ ಮೋದಾಮಣಿ, ಪಾಲಿಕೆ ಮಾಜಿ ಸದಸ್ಯ ಪ್ರಶಾಂತ್‌ಗೌಡ, ಗುಂಡಪ್ಪಗೌಡ, ಸುಬ್ರಹ್ಮಣ್ಯ ಉಪಸ್ಥಿತರಿದ್ದರು. ತುಮಕೂರಿನ ವಿನೋದ್ ದೀಕ್ಷಿತ್ ಅವರಿಂದ ಪೂಜಾ ಕಾರ್ಯಕ್ರಮ ನೆರವೇರಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ದಸರಾ ಮಹೋತ್ಸವ-2025

ದಸರಾ ಗಜಪಡೆಯ ಮಾವುತರು, ಕಾವಾಡಿಗರಿಗೆ ಆರೋಗ್ಯ ತಪಾಸಣೆ



ಮೈಸೂರು, ಸೆ.10(ಎಂಟಿವೈ) ದಸರಾ ಗಜಪಡೆಯ ಮಾವುತರು, ಕಾವಾಡಿಗಳಿಗೆ ಮಂಗಳವಾರ ಅವಂತ್ ಬಿಕೆಜಿ ಆಸ್ಪತ್ರೆ ಹಾಗೂ ಹಾರ್ಟ್ ಸಂಸ್ಥೆ ವತಿಯಿಂದ ಹೃದಯ ಹಾಗೂ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಅರಮನೆ ಆವರಣದ ಆನೆ ಬಿಡಾರದ ಬಳಿ ಮಂಗಳವಾರ ಬೆಳಗ್ಗೆ ಆಯೋಜಿಸಿದ್ದ ಶಿಬಿರದಲ್ಲಿ ಮೈಸೂರಿನ ಬೋಗಾದಿಯ ಅವಂತ್ ಬಿಕೆಜಿ ಆಸ್ಪತ್ರೆಯ ತಜ್ಞ ವೈದ್ಯರು ಮಾವುತ, ಕಾವಾಡಿಗಳಿಗೆ ಆರೋಗ್ಯ ತಪಾಸಣೆ ನಡೆಸಿದರು. ಅಲ್ಲದೆ, ಪ್ರಮುಖವಾಗಿ ಹೃದಯ ತಪಾಸಣೆ ನಡೆಸಲಾಯಿತು. ಮಾವುತರು, ಕಾವಾಡಿಗಳಿಗೆ ಇಸಿಜಿ, ಎಕೋ ಟೆಸ್ಟ್ ನಡೆಸಿ, ಅಗತ್ಯವುಳ್ಳವರಿಗೆ ಚಿಕಿತ್ಸೆ ಔಷಧೋಪಚಾರ ಮಾಡಲಾಯಿತು.

ತಪಾಸಣಾ ಶಿಬಿರದಲ್ಲಿ ಮಾವುತರು, ಕಾವಾಡಿಗರು ಮಾತ್ರವಲ್ಲದೆ, ಕುಟುಂಬದ ಸದಸ್ಯರು ಆರೋಗ್ಯ ತಪಾಸಣೆ ಮಾಡಿಸಿಕೊಂಡು ತಜ್ಞ ವೈದರಿಂದ ಸಲಹೆ ಪಡೆದರು. ಆಸ್ಪತ್ರೆಯ 10ಕ್ಕೂ ಹೆಚ್ಚು ಸಿಬ್ಬಂದಿ ಮಾವುತರು, ಕಾವಾಡಿಗಳ ಆರೋಗ್ಯ ತಪಾಸಣೆಯಲ್ಲಿ ತೊಡಗಿದ್ದರು. ಈ ಶಿಬಿರದಲ್ಲಿ 45 ಮಂದಿಗೆ ಸಾಮಾನ್ಯ ರೋಗ ತಜ್ಞರು ತಪಾಸಣೆ ನಡೆಸಿದರೆ, 45 ಮಂದಿಗೆ ರಕ್ತದೊತ್ತಡ ಮತ್ತು ಮಧುಮೇಹ ಪರೀಕ್ಷೆ, 35 ಮಂದಿಗೆ ಸಿಬಿಸಿ ಟೆಸ್ಟ್ ಹಾಗೂ ಐವರಿಗೆ ಇಸಿಜಿ ಪರೀಕ್ಷೆ ಮಾಡಲಾಯಿತು.

ಶಿಬಿರದಲ್ಲಿ ಅವಂತ್ ಬಿಕೆಜಿ ಆಸ್ಪತ್ರೆಯ ವೈದ್ಯರಾದ ಡಾ.ಎನ್.ಸಿ. ಇನಿ, ಆಸ್ಪತ್ರೆಯ ನಿರ್ದೇಶಕರಾದ ಶೋಭಾ ಬಾಲಕೃಷ್ಣೇಗೌಡ, ಮಾರು ಕಟ್ಟೆ ವಿಭಾಗದ ಮುಖ್ಯಸ್ಥರಾದ ನೀಲು ಶರ್ಮ, ಹಾರ್ಟ್ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಶಿವಕುಮಾರ್, ಸಂಯೋಜಕ ಶಿವಲಿಂಗ, ಆಸ್ಪತ್ರೆ ಸಿಬ್ಬಂದಿಗಳಾದ ಶಮಂತ್, ಸೈಯದ್ ಇಸ್ಮಾಯಿಲ್ ಹಾಗೂ ಹಾರ್ಟ್ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ದಸರಾದಲ್ಲಿ ಅಹಿತಕರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸಿ

ಪೊಲೀಸ್ ಅಧಿಕಾರಿಗಳಿಗೆ ಎಡಿಜಿಪಿ ಆರ್.ಹಿತೇಂದ್ರ ಸೂಚನೆ



ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಎಡಿಜಿಪಿ ಆರ್.ಹಿತೇಂದ್ರ ಪೊಲೀಸ್ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದರು.

ಮೈಸೂರು, ಸೆ.10(ಎಂಕೆ)– ನಾಡಹಬ್ಬ ಮೈಸೂರು ದಸರಾ ಮಹೋತ್ಸವದಲ್ಲಿ ಯಾವುದೇ ಅಹಿತರ ಘಟನೆಗಳು ನಡೆಯದಂತೆ ಕಟ್ಟೆಚ್ಚರ ವಹಿಸುವಂತೆ ಕಾನೂನು ಮತ್ತು ಸುವ್ಯವಸ್ಥೆ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಆರ್.ಹಿತೇಂದ್ರ ಸೂಚಿಸಿದರು.

ನಗರ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಬುಧವಾರ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ನಿನ್ನೆ ನಡೆದ ಚಾಮುಂಡಿ ಬೆಟ್ಟ ಚಲೋ, ಮದ್ದೂರು ಗಲಬೆ ಹಾಗೂ ಆರ್‌ಸಿಬಿ ವಿಜಯೋತ್ಸವದಲ್ಲಾದ ಕಾಲ್ತುಳಿತ ಪ್ರಸ್ತಾಪಿಸಿದ ಅವರು, ದಸರಾ ಆರಂಭದಿಂದ ಮುಕ್ತಾಯ ದವರೆಗೆ ವ್ಯವಸ್ಥಿತ ಬಂದೋಬಸ್ತ್ ನಿಯೋಜಿಸುವಂತೆ ತಿಳಿಸಿದರು.

ಹೆಚ್ಚು ಜನಸಂದಣಿ ಸೇರುವ ಚಾಮುಂಡಿಬೆಟ್ಟ, ದಸರಾ ಜಂಬೂ ಸವಾರಿ, ಪಂಜಿನ ಕವಾಯತು ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಪೊಲೀಸ್ ಬಂದೋಬಸ್ತ್ ಇರಬೇಕು.

ಮುಖ್ಯವಾಗಿ ಜಂಬೂ ಸವಾರಿ ಸಂದರ್ಭದಲ್ಲಿ ನೂಗು ನುಗ್ಗಲು ಸಂಭವಿಸದಂತೆ ಪೂರ್ವ ಸಿದ್ದತೆ ಮಾಡಿಕೊಳ್ಳಬೇಕು. ಸಂಚಾರಕ್ಕೆ ತೊಂದರೆಯಾಗದಂತೆ ಮಾರ್ಗಗಳನ್ನು ಸೂಚಿಸಬೇಕು ಎಂದು ಸಲಹೆ ನೀಡಿದರು.

ಶಾಂತಿ-ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳುವುದರ ಜೊತೆಗೆ ದಸರಾ ಬಂದೋಬಸ್ತ್‌ಗೆ ಎಷ್ಟು ಮಂದಿ ಸಿಬ್ಬಂದಿ ಮತ್ತು ಅಧಿಕಾರಿಗಳ ಅಗತ್ಯತೆ ಇದೆ ಎಂದು ಪ್ರಸ್ತಾವನೆ ರೂಪಿಸಿ, ನೀಡಿದರೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲು ಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಸಭೆಯಲ್ಲಿ ನಗರದ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಡಿಸಿಪಿಗಳಾದ ಬಿಂದುಮಣಿ, ಕೆ.ಎಸ್.ಸುಂದರ್ ರಾಜ್ ಸೇರಿದಂತೆ ಎಸಿಪಿಗಳು ಹಾಗೂ ಎಲ್ಲಾ ಪೊಲೀಸ್ ಠಾಣೆಗಳ ಇನ್ಸ್‌ಪೆಕ್ಟರ್‌ಗಳು ಉಪಸ್ಥಿತರಿದ್ದರು.

ಮೈಸೂರಿನ ಜೆ.ಕೆ.ಮೈದಾನದಲ್ಲಿ ಸೆ.26 ರಿಂದ 28ರವರೆಗೆ ರೈತ ದಸರಾ

ಮೈಸೂರು,ಸೆ.10(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪ್ರತಿವರ್ಷದಂತೆ ಈ ಬಾರಿಯೂ ಮೈಸೂರಿನ ಜೆ.ಕೆ.ಮೈದಾನದಲ್ಲಿ ಸೆ.26ರಿಂದ 28ರವರೆಗೆ ರೈತ ದಸರಾ ಏರ್ಪಡಿಸಲು ಉದ್ದೇಶಿಸಲಾಗಿದೆ.

ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ರೈತದಸರಾ ಉಪಸಮಿತಿ ಸಿದ್ದತಾ ಕಾರ್ಯ ನಡೆಸುತ್ತಿದ್ದು, ರೈತ ದಸರಾ ಕಾರ್ಯಕ್ರಮದ ರೂಪುರೇಷೆ ಸಿದ್ಧಪಡಿಸುತ್ತಿದೆ. ಮೈಸೂರಿನ ಜಿ.ಪಂ.ನ ದೇವರಾಜ ಅರಸು ಸಭಾಂಗಣದಲ್ಲಿ ನಡೆದ ರೈತದಸರಾ ಉಪಸಮಿತಿ ಪೂರ್ವಭಾವಿ ಸಭೆಯಲ್ಲಿ ದಸರಾ ಉಪಸಮಿತಿ ಉಪ ವಿಶೇಷಾಧಿಕಾರಿ, ಜಿ.ಪಂ. ಉಪ ಕಾರ್ಯದರ್ಶಿ(ಅಭಿವೃದ್ಧಿ) ಭೀಷ ಕಲಾಳಿ ಮಾತನಾಡಿ, ಸೆ.26ರ ಬೆಳಗ್ಗೆ 9.30ಕ್ಕೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಬಳಿ ರೈತ ದಸರಾದ ಮೆರವಣಿಗೆಗೆ ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಭಾಗವಹಿಸಲಿದ್ದು, ಶಾಸಕ ಟಿ.ಎಸ್ ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಕೆ.ಆರ್.ವೃತ್ತ, ದೇವರಾಜ ರಸ್ತೆ ಮಾರ್ಗವಾಗಿ ಮೆರವಣಿಗೆ ಜೆ.ಕೆ.ಮೈದಾನ ತಲುಪಲಿದ್ದು, ಅಂದು ಬೆಳಗ್ಗೆ 11ಕ್ಕೆ ಜೆ.ಕೆ. ಮೈದಾನದಲ್ಲಿ ಕೃಷಿ ವಸ್ತು ಪ್ರದರ್ಶನವನ್ನು ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ಸಚಿವ ಕೆ.ವೆಂಕಟೇಶ್ ಉದ್ಘಾಟಿಸಲಿದ್ದಾರೆ.

ನಂತರ ಬೆಳಗ್ಗೆ 11.15ಕ್ಕೆ ಜೆ.ಕೆ. ಮೈದಾನದ ಸರ್ಕಾರಿ ವೈದ್ಯಕೀಯ ಕಾಲೇಜಿನ ಅಮೃತ ಮಹೋತ್ಸವ ಸಭಾ ಭವನದಲ್ಲಿ ರೈತ ದಸರಾ ವೇದಿಕೆ ಕಾರ್ಯಕ್ರಮ ಜರುಗಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ.

ಸೆ.27ರಂದು ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ ಸಹ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪರವರು ಉದ್ಘಾಟಿಸಲಿದ್ದಾರೆ. ಅಂದು ಬೆಳಗ್ಗೆ 6.30 ಗಂಟೆಗೆ ಹಾಲು ಕರೆಯುವ ಸ್ಪರ್ಧೆ ನಡೆಯಲಿದ್ದು ಸಂಜೆ 5.30ಕ್ಕೆ ಬಹುಮಾನ ವಿತರಣೆ ಕಾರ್ಯಕ್ರಮ ನಡೆಯಲಿದೆ.

ಸೆ.28 ರಂದು ಬೆಳಗ್ಗೆ 9.30ರಿಂದಲೇ ಜೆ.ಕೆ. ಮೈದಾನದಲ್ಲಿ ಶ್ವಾನ, ಮುದ್ದು ಪ್ರಾಣಿಗಳ ಪ್ರದರ್ಶನ ಹಾಗೂ ವಿಜೇತರಿಗೆ ಬಹುಮಾನ ವಿತರಣೆ ನಡೆಯಲಿದೆ ಎಂದು ತಿಳಿಸಿದರು.

ಸಭೆಯಲ್ಲಿ ರೈತ ದಸರಾ ಉಪ ಸಮಿತಿ ಕಾರ್ಯಾಧ್ಯಕ್ಷರೂ ಆಗಿರುವ ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್ ರವಿ, ರೈತದ ಉಪಸಮಿತಿ ಸಹ ಕಾರ್ಯಾದ್ಯಕ್ಷರೂ, ಮೀನುಗಾರಿಕೆ ಇಲಾಖೆ ಉಪನಿರ್ದೇಶಕ ಜಿ.ಹೆಚ್ ಮಂಜುನಾಥ್ ಇನ್ನಿತರರು ಉಪಸ್ಥಿತರಿದ್ದರು.

ಮಹಾರಾಜ ಕಾಲೇಜು ಮೈದಾನದಲ್ಲಿ ಮಾತ್ರ ದಸರಾ ಆಹಾರ ಮೇಳ

- 120 ಮಳಿಗೆಗಳು, 14 ದಿನ ವಹಿವಾಟಿಗೆ ಅವಕಾಶ
- ಸಸ್ಯಾಹಾರಕ್ಕೆ 50 ಸಾವಿರ; ಮಾಂಸಾಹಾರಕ್ಕೆ 75 ಸಾವಿರ ನಿಗದಿ



ಮೈಸೂರು, ಸೆ.10 (ಎಂಕೆ)– ಇದೇ ಮೊದಲು 14 ದಿನಗಳು... 120 ಮಳಿಗೆಗಳು... ಪಾಕ ಪ್ರಿಯರು ಬಾಯಿ ಚಪ್ಪರಿಸುವಷ್ಟು ಖಾದ್ಯಗಳು... ಅಬ್ಬಾ... ಎಂತಹ ರುಚಿ... ಎನ್ನುತ್ತಲೇ ಹೊಟ್ಟೆತುಂಬ ಸವಿದು ಸಂಭ್ರಮಿಸುವ ದಿನಗಳು ಹತ್ತಿರವಾಗುತ್ತಿವೆ...!

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಮಹಾರಾಜ ಕಾಲೇಜು ಮೈದಾನದಲ್ಲಿ ನಡೆಯುವ ದಸರಾ ಆಹಾರ ಮೇಳವನ್ನು ಈ ವರ್ಷ 14 ದಿನ(ಸೆ.22 ರಿಂದ ಅ.5ರವರೆಗೆ) ಗಳಿಗೆ ವಿಸ್ತರಣೆ ಮಾಡಿರುವ ಆಹಾರ ಮೇಳ ಉಪ ಸಮಿತಿಯು ಭೋಜನ ಪ್ರಿಯರ ಸಂಭ್ರಮ ಹೆಚ್ಚಿಸಿದೆ.

ದಕ್ಷಿಣ ಮತ್ತು ಉತ್ತರ ಭಾರತದ ಜನಪ್ರಿಯ ಖಾದ್ಯಗಳ ಜೊತೆಗೆ ಊಟ ಮುಗಿದ ಮೇಲೆ ಸಿಹಿ ತಿನ್ನಬೇಕು ಎನ್ನುವವರಿಗಾಗಿ ರುಚಿಕರ ಹೋಂ ಮೇಡ್ ಚಾಕೊಲೇಟ್ ಮಾರಾಟಕ್ಕೂ ಅವಕಾಶ ಕಲ್ಪಿಸುತ್ತಿದ್ದು, ಬರೋಬ್ಬರಿ 120 ಮಳಿಗೆಗಳನ್ನು ಸ್ಥಾಪಿಸಲು ಪೂರ್ವ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ದಸರಾ ವೀಕ್ಷಣೆಗೆ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ದಸರಾ ಮುಗಿದ ಬಳಿಕವೂ ಜಗಮಗಿಸುವ ದಸರಾ ದೀಪಾಲಂಕಾರ ಕಣ್ತುಂಬಿಕೊಳ್ಳುತ್ತಾ ಇಷ್ಟದ ತಿಂಡಿ–ತಿನಿಸುಗಳನ್ನು ಸವಿಯಲು ಅವಕಾಶ ಮಾಡಿಕೊಡಲಾಗಿದೆ. ಅ.2ರ ಜಂಬೂಸವಾರಿ ನಂತರದ ವಾರಾಂತ್ಯ (ಅ.3, 4 ಮತ್ತು 5) ದಿನಗಳಲ್ಲಿಯೂ ಆಹಾರ ಮೇಳ ನಡೆಸಲು ತಿರ್ಮಾನಿಸಲಾಗಿದೆ ಎಂದು ಆಹಾರ ಮೇಳ ಸಮಿತಿಯ ಕಾರ್ಯಾಧ್ಯಕ್ಷ ಹಾಗೂ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರತೀ ವರ್ಷದಂತೆ ಆದಿವಾಸಿಗಳ ಜನಪ್ರಿಯ ಬಂಬೂ ಬಿರಿಯಾನಿ ಜೊತೆಗೆ ರಾಜ್ಯದ ಎಲ್ಲಾ ಜಿಲ್ಲೆಗಳ ಪ್ರಸಿದ್ಧ ಖಾದ್ಯಗಳು, ಉತ್ತರ ಭಾರತ ಮತ್ತು ದಕ್ಷಿಣ ಭಾರತದ ವೆಜ್ ಮತ್ತು ನಾನ್ ವೆಜ್ ತಿನಿಸುಗಳು, ಸಿಹಿ ಪದಾರ್ಥಗಳು ಲಭ್ಯವಿರಲಿವೆ ಎಂದರು.

350 ಅರ್ಜಿ: ಈ ವರ್ಷದ ಆಹಾರ ಮೇಳದಲ್ಲಿ ಮಳಿಗೆ ಆರಂಭಕ್ಕೆ ಇಲ್ಲಿಯವರೆಗೆ ಸುಮಾರು 350 ಅರ್ಜಿಗಳು ಬಂದಿದ್ದು, ಆದ್ಯತೆ ನೋಡಿಕೊಂಡು ಅವಕಾಶ ಕಲ್ಪಿಸಲಾಗುವುದು. ಒಬ್ಬೊಬ್ಬರು ಮೂರು–ನಾಲ್ಕು ಅರ್ಜಿಗಳನ್ನು ಹಾಕಿರುವ ಸಾಧ್ಯತೆ ಇರಲಿದ್ದು, ಪರಿಶೀಲನೆ ನಡೆಸಿ ಅರ್ಜಿ ಹಾಕಿದವರಲ್ಲಿ ಮಾನದಂಡ ಆಧರಿಸಿ ಮಳಿಗೆಗಳನ್ನು ಹಂಚಿಕೆ ಮಾಡಲಾಗುವುದು. ಸಸ್ಯಾಹಾರ (ವೆಜ್) ಮಳಿಗೆಗೆ ಶೇ.18ರಷ್ಟು ಜಿಎಸ್‌ಟಿ ಸೇರಿ 50 ಸಾವಿರ ರೂ., ಮಾಂಸಾಹಾರ(ನಾನ್‌ವೆಜ್)ಮಳಿಗೆ ಶೇ.18 ಜಿಎಸ್‌ಟಿ ಸೇರಿ 75 ಸಾವಿರ ರೂ. ನಿಗದಿ ಮಾಡಲಾಗಿದೆ ಎಂದು ತಿಳಿಸಿದರು.

ಶಾಲಾ–ಕಾಲೇಜು ಮಕ್ಕಳಿಂದಲೇ ಸಾಂಸ್ಕೃತಿಕ ಕಾರ್ಯಕ್ರಮ...!

“ದಸರಾ ಆಹಾರ ಮೇಳದ ಸಾಂಸ್ಕೃತಿಕ ವೇದಿಕೆಗೆ ಈ ವರ್ಷ ಕಲಾವಿದರನ್ನು ಆಹ್ವಾನಿಸದೆ ಶಾಲಾ–ಕಾಲೇಜು ಮಕ್ಕಳಿಗೆ ವೇದಿಕೆ ಕಲ್ಪಿಸಲಾಗುವುದು. ಯುವ ಸಂಭ್ರಮ ಹಾಗೂ ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಪ್ರತಿಭಾ ಕಾರಂಜಿಯಲ್ಲಿ ಭಾಗವಹಿಸಿ ವಿಜೇತರಾದ ಶಾಲಾ ಮಕ್ಕಳಿಂದ ಪ್ರತಿ ದಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲು ನಿರ್ಧರಿಸಲಾಗಿದ್ದು, ಪ್ರತೀ ದಿನ 4–5 ಶಾಲಾ–ಕಾಲೇಜು ತುಡದಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.


- ಚಂದ್ರಶೇಖರ್,
ಕಾರ್ಯಾಧ್ಯಕ್ಷ, ಆಹಾರ ಮೇಳ ಸಮಿತಿ

ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಹಿರಿಯ ಶಾಸಕ ತನ್ವೀರ್ ಸೇಠ್ ಚಾಲನೆ

ಉನ್ನತ ಸಾಧನೆಯತ್ತ ಗಮನಹರಿಸಲು ಸ್ಥಳೀಯ ಕ್ರೀಡಾಪಟುಗಳಿಗೆ ಕಿವಿಮಾತು



ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಆರಂಭವಾದ ದಸರಾ ಜಿಲ್ಲಾಮಟ್ಟದ ಕ್ರೀಡಾಕೂಟಕ್ಕೆ ಶಾಸಕ ತನ್ವೀರ್ ಸೇಠ್ ಗುಂಡು ಎಸೆಯುವ ಮೂಲಕ ಚಾಲನೆ ನೀಡಿದರು.



ಎತ್ತರ ಜಿಗಿತ ಸ್ಪರ್ಧೆಯಲ್ಲಿ ಕ್ರೀಡಾಪಟುವೊಬ್ಬರ ಸಾಹಸ.

ಮೈಸೂರು, ಸೆ.10(ಎಂಟಿವೈ)– ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಸಾಧನೆ ಮಾಡುವತ್ತ ಮೈಸೂರಿನ ಕ್ರೀಡಾಪಟುಗಳು ಗಮನಹರಿಸಬೇಕು ಎಂದು ಶಾಸಕ ತನ್ವೀರ್ ಸೇಠ್ ಸಲಹೆ ನೀಡಿದ್ದಾರೆ.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಆಯೋಜಿಸಿದ್ದ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತ ನಾಡಿದ ಅವರು, ಮೈಸೂರಲ್ಲಿ ಕ್ರೀಡಾಪಟು ಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಹಲವು ಕ್ರೀಡಾಕೂಟಗಳು ನಿರಂತರವಾಗಿ ನಡೆಯುತ್ತಿದ್ದು, ಕ್ರೀಡಾಪಟುಗಳಿಗೆ ತರಬೇತಿ ಪಡೆಯುವುದಕ್ಕೆ ಕ್ರೀಡಾಂಗಣ ಸೇರಿದಂತೆ ಮೂಲಭೂತ ಸೌಲಭ್ಯಗಳಿಗೆ ಪ್ರತಿದಿನ ವಿವಿಧ ಮೈದಾನದಲ್ಲಿ ಕ್ರೀಡಾಪಟುಗಳು ತರಬೇತಿ ಪಡೆಯುತ್ತಿದ್ದು, ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡುವ ತವಕದಲ್ಲಿರುವುದು ಶ್ಲಾಘನೀಯ ಎಂದರು.

ನಾಡಹಬ್ಬ ದಸರಾ ಮಹೋತ್ಸವದ ಸಂದರ್ಭದಲ್ಲಿ ಪ್ರತಿವರ್ಷವೂ ದಸರಾ ಕ್ರೀಡಾಕೂಟ ಆಯೋಜಿಸಲಾಗುತ್ತಿದ್ದು, ಸಾವಿರಾರು ಕ್ರೀಡಾಪಟುಗಳು ಭಾಗವಹಿಸುತ್ತಿದ್ದಾರೆ. ಅದರಲ್ಲೂ ತಾಲೂಕು, ಜಿಲ್ಲಾಮಟ್ಟದಲ್ಲಿ ಕ್ರೀಡಾಕೂಟ ನೆರವೇರಿದ ಬಳಿಕ ರಾಜ್ಯಮಟ್ಟದ ಕ್ರೀಡಾಕೂಟ ಜರುಗಲಿದೆ. ಈ ಹಿನ್ನೆಲೆಯಲ್ಲಿ ಕ್ರೀಡಾಪಟುಗಳು ಕ್ರೀಡಾ ಮನೋಭಾವದಿಂದ ಕ್ರೀಡೆಗಳಲ್ಲಿ ಪಾಲ್ಗೊಳ್ಳಬೇಕು. ಯಾವುದೇ ಕ್ರೀಡಾ ಚಟುವಟಿಕೆಗಳಲ್ಲೂ ಸ್ಪರ್ಧೆ ಇದ್ದೇ ಇರುತ್ತದೆ. ಸೋಲು–ಗೆಲುವು ಮುಖ್ಯವಲ್ಲ. ಪಾಲ್ಗೊಳ್ಳುವಿಕೆ ಮುಖ್ಯ. ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ನಡೆಯುತ್ತಿರುವ ವಿವಿಧ ಕ್ರೀಡೆಗಳಲ್ಲಿ ಗೆಲುವು ಸಾಧಿಸುವ ಗುರಿಯೊಂದಿಗೆ ಪಾಲ್ಗೊಳ್ಳಬೇಕು. ಆರೋಗ್ಯಕರ ಸ್ಪರ್ಧೆ ಇರಬೇಕು. ಆ ಮೂಲಕ ರಾಜ್ಯ ಕ್ರೀಡಾಕೂಟಕ್ಕೆ ಆಯ್ಕೆಯಾಗಬೇಕು ಎಂದು ಸಲಹೆ ನೀಡಿದರು.

ಕ್ರೀಡಾಚಟುವಟಿಕೆಯಲ್ಲಿ ಸಾಧನೆ ಮಾಡಿದ ಕ್ರೀಡಾಪಟುಗಳಿಗೆ ಉತ್ತಮ ಭವಿಷ್ಯವಿದೆ. ಅದಕ್ಕಾಗಿ ಕಠಿಣ ಶ್ರಮ ಅಗತ್ಯ. ದೊಡ್ಡಮಟ್ಟದ ಗುರಿಯೊಂದಿಗೆ ನಿರಂತರ ತರಬೇತಿ ಪಡೆಯಬೇಕು. ಆ ಮೂಲಕ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಗುರಿ ಕ್ರೀಡಾಪಟುಗಳಲ್ಲಿರಬೇಕು. ಆ ಮೂಲಕ ಸಾಧನೆ ಮಾಡಬೇಕು ಎಂದು ತಿಳಿಸಿದರು.

1500ಕ್ಕೂ ಹೆಚ್ಚು ಮಂದಿ ಭಾಗಿ: ಜಿಲ್ಲಾಮಟ್ಟದ ದಸರಾ ಕ್ರೀಡಾಕೂಟದಲ್ಲಿ ಮೈಸೂರು ಜಿಲ್ಲೆಯ ವಿವಿಧ ತಾಲೂಕಿನಿಂದ 1500ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ. ಅಥ್ಲೆಟಿಕ್ಸ್, ವಾಲಿಬಾಲ್, ಖೋ–ಖೋ, ಕಬಡ್ಡಿ, ಬ್ಯಾಸ್ಕೆಟ್ ಬಾಲ್, ಕುಸ್ತಿ, ಬ್ಯಾಡ್ಮಿಂಟನ್, ಹಾಕಿ, ಹ್ಯಾಂಡ್ ಬಾಲ್, ಟೇಬಲ್ ಟೆನ್ನಿಸ್, ಬಾಲ್ ಬ್ಯಾಡ್ಮಿಂಟನ್, ಥ್ರೋಬಾಲ್, ಯೋಗ, ಈಜು, ಟೆನ್ನಿಸ್, ನೆಟ್‌ಬಾಲ್ ಸೇರಿದಂತೆ ವಿವಿಧ ಕ್ರೀಡಾಸ್ಪರ್ಧೆ ಜರುಗಲಿದೆ. ಚಾಮುಂಡಿ ವಿಹಾರ ಕ್ರೀಡಾಂಗಣ, ಮೈಸೂರು ವಿಶ್ವವಿದ್ಯಾನಿಲಯದ ಒಳಾಂಗಣ ಸೇರಿದಂತೆ ವಿವಿಧೆಡೆ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟದ ಸ್ಪರ್ಧೆಗಳು ಜರುಗುತ್ತಿವೆ.

ಈ ಸಂದರ್ಭದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಲಿಂಗಾಂಬುದಿ ಬೊಟಾನಿಕಲ್ ಗಾರ್ಡನ್‌ನಲ್ಲಿ ಪುಷ್ಪಮೇಳ

- 40 ಸಾವಿರ ಹೂವಿನ ಕುಂಡ ಬಳಕೆ
- ನೂತನವಾಗಿ ಸಂಗೀತ ನೃತ್ಯ ಕಾರಂಜಿ, ವೀಕ್ಷಣಾ ಗೋಪುರ ನಿರ್ಮಾಣ



ಬೊಟಾನಿಕಲ್ ಗಾರ್ಡನ್ ಮುಖ್ಯದ್ವಾರ.

ಮೈಸೂರು, ಸೆ.10(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಅಂಗವಾಗಿ ಈ ಬಾರಿ ಲಿಂಗಾಂಬುದಿ ಕೆರೆಯ ಬೊಟಾನಿಕಲ್ ಗಾರ್ಡನ್‌ನಲ್ಲೂ ಸೆ.22ರಿಂದ ಅ.2ರವರೆಗೆ ಪುಷ್ಪಮೇಳ ಆಯೋಜಿಸಲು ಉದ್ದೇಶಿಸಲಾಗಿದ್ದು, 45ಕ್ಕೂ ಹೆಚ್ಚು ಬಗೆಯ ಹೂವಿನ ಗಿಡಗಳನ್ನು 40 ಸಾವಿರ ಪಾಟ್‌ಗಳಲ್ಲಿ ಬೆಳೆಸಿ, ಪುಷ್ಪಮೇಳಕ್ಕೆ ಮೆರುಗು ತುಂಬಲು ಉದ್ದೇಶಿಸಲಾಗಿದೆ.

ಈ ಸಾಲಿನ ದಸರಾ ಮಹೋತ್ಸವದಲ್ಲಿ ಎರಡು ಫಲಪುಷ್ಪ ಪ್ರದರ್ಶನ ಆಯೋಜಿಸಲಾಗಿದ್ದು, ನವರಾತ್ರಿ ವೇಳೆ ಸಾಂಸ್ಕೃತಿಕ ನಗರಿ ಮೈಸೂರನ್ನು ಕಣ್ತುಂಬಿಕೊಳ್ಳಲು ಬರುವ ಪ್ರವಾಸಿಗರಿಗೆ ಈ ಬಾರಿ ಡಬಲ್ ಧಮಾಕ ಏರ್ಪಟ್ಟಿದೆ. ಇದೇ ಮೊದಲ ಬಾರಿಗೆ ಮೈಸೂರಿನ ರಾಮಕೃಷ್ಣನಗರದಲ್ಲಿರುವ ಲಿಂಗಾಂಬುದಿ ಬೊಟಾನಿಕಲ್ (ಸಸ್ಯಶಾಸ್ತ್ರೀಯ ತೋಟ) ಗಾರ್ಡನ್‌ನಲ್ಲಿ ದೊಡ್ಡಮಟ್ಟದಲ್ಲಿ ಪುಷ್ಪಮೇಳ ಆಯೋಜಿಸಲಾಗಿದ್ದು, ಅದಕ್ಕಾಗಿ ಸಿದ್ಧತೆ ಸಾಗಿದೆ.

15 ಎಕರೆ ವಿಸ್ತೀರ್ಣದ ಬೊಟಾನಿಕಲ್ ಗಾರ್ಡನ್‌ನಲ್ಲಿ ಈಗಾಗಲೇ ವಿವಿಧ ಬಗೆಯ ಗಾರ್ಡನ್ ನಿರ್ಮಿಸಲಾಗಿದ್ದು, ಸಸ್ಯಶಾಸ್ತ್ರ ಅಧ್ಯಯನಕ್ಕೆ ಪೂರಕವಾದ 290ಕ್ಕೂ ಹೆಚ್ಚು ಸಸ್ಯ ಪ್ರಭೇದ ಬೆಳೆಸಲಾಗಿದೆ. 174 ಜೆನರಾ ಬೆಳೆಸಲಾಗಿದ್ದು, ತೋಟಗಾರಿಕಾ ಇಲಾಖೆ ನಿರ್ಮಿಸಿರುವ ರಾಜ್ಯದ 4ನೇ ಹಾಗೂ ಮೈಸೂರು ಜಿಲ್ಲೆಯ ಮೊಟ್ಟ ಮೊದಲ ಸಸ್ಯಶಾಸ್ತ್ರೀಯ ತೋಟ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. 5.60 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿರುವ ಈ ಬೊಟಾನಿಕಲ್ ಗಾರ್ಡನ್‌ನಲ್ಲಿ ಇದೀಗ ದಸರಾ ಪುಷ್ಪಮೇಳ ಪ್ರವಾಸಿಗರ ಆಕರ್ಷಣೀಯ ಕೇಂದ್ರಬಿಂದುವಾಗಲಿದೆ.

ಹೂವಿನ ಗಿಡಗಳು: ಲಿಂಗಾಂಬುದಿ ಬೊಟಾನಿಕಲ್ ಗಾರ್ಡನ್‌ನಲ್ಲಿ ಆಯೋಜಿಸುತ್ತಿರುವ ಪುಷ್ಪಮೇಳದಲ್ಲಿ ಗುಲಾಬಿ ತೋಟ, ಪ್ಲುಮೆರಿಯಾ, ಬಹುನಿಯಾ, ಥನ್ ಬರ್ಜಿಯಾ, ಎರಿಥ್ರಿನಾ ವೆರಿಗೆಟ, ಚೆಂಡೂವು ಸೇರಿದಂತೆ ವಿವಿಧ ಬಗೆಯ ಹೂವಿನ ಗಿಡಗಳನ್ನು ಬೆಳೆಸಲಾಗಿದ್ದು, ನವರಾತ್ರಿ ಆರಂಭಕ್ಕೂ 3–4 ದಿನ ಮೊದಲು ಗಾರ್ಡನ್‌ನಲ್ಲಿ ವಿವಿಧ ವಿನ್ಯಾಸದಲ್ಲಿ ಜೋಡಣೆ ಮಾಡಲಾಗುತ್ತದೆ.

ಮಿನಿ ತೋಟಗಳು: ಬೊಟಾನಿಕಲ್ ಗಾರ್ಡನ್‌ನಲ್ಲಿ ಈಗಾಗಲೇ ನಿರ್ಮಿಸಿರುವ ಗುಲಾಬಿ ತೋಟ, ಗಿಡ–ಬಳ್ಳಿಗಳಿಂದ ವಿವಿಧ ಪ್ರಾಣಿ–ಪಕ್ಷಿ ಆಕೃತಿಯಲ್ಲಿ ನಿರ್ಮಿಸಿರುವ ಟೋಪಿಯರಿ ಉದ್ಯಾನವನ, ಚಿಟ್ಟೆ ಪಾರ್ಕ್, ಔಷಧೀಯ ಸಸ್ಯಗಳ ಪಾರ್ಕ್, ಬೊಂಬು ಬಿದಿರು ಪಾರ್ಕ್, ಪ್ಲುಮೇರಿಯಾ ಪಾರ್ಕ್, ಕಿರುಹಣ್ಣುಗಳ ಪಾರ್ಕ್, ಪಾಮೇಟಮ್, ಕ್ಯಾಕ್ಟಸ್, ಕೋನಿಫೆರಸ್ ಪಾರ್ಕ್‌ಗಳು ಪ್ರವಾಸಿಗರ ಮನಸೂರೆಗೊಳ್ಳಲಿದೆ.



ನೂತನವಾಗಿ ನಿರ್ಮಿಸಿರುವ ವೀಕ್ಷಣಾ ಗೋಪುರ.



ಲಿಂಗಾಂಬುದಿ ಬೊಟಾನಿಕಲ್ ಗಾರ್ಡನ್‌ನಲ್ಲಿ ಪುಷ್ಪಮೇಳಕ್ಕೆ ಬೆಳೆದಿರುವ ಹೂವಿನ ಗಿಡಗಳನ್ನು ಉದ್ಯಾನವನಗಳ ಹಿರಿಯ ಸಹಾಯಕ ನಿರ್ದೇಶಕ ನವೀನ್ ಹಾಗೂ ಲಿಂಗಾಂಬುದಿ ಸಸ್ಯಕ್ಷೇತ್ರದ ಸಹಾಯಕ ನಿರ್ದೇಶಕ ಮಂಜುನಾಥ್ ಪರಿಶೀಲಿಸುತ್ತಿರುವುದು.

ಆಕರ್ಷಕ ಪರ್ಗೋಲ, ಸಂಗೀತ ಕಾರಂಜಿ: ಬೊಟಾನಿಕಲ್ ಗಾರ್ಡನ್‌ಗೆ ಬರುವ ಪ್ರವಾಸಿಗರು ವಿಶ್ರಾಂತಿ ಪಡೆಯಲು ಗಿಡಗಳಿಂದ ನಿರ್ಮಿಸಿರುವ ಪರ್ಗೋಲಗಳಿದ್ದು, ಪ್ರವಾಸಿಗರು ವಿಶ್ರಾಂತಿಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ, ಹೃದಯ ಆಕೃತಿಯ ಕಮಾನುಗಳು ಹೂವುಗಳಿಂದ ತಲೆ ಎತ್ತಲಿದ್ದು, ಕಣ್ಮನ ಸೆಳೆಯಲಿದೆ. ಇದೇ ಮೊದಲ ಬಾರಿಗೆ ಬೊಟಾನಿಕಲ್ ಗಾರ್ಡನ್‌ನಲ್ಲಿ ಸಂಗೀತ, ನೃತ್ಯ ಕಾರಂಜಿ ನಿರ್ಮಿಸಲಾಗಿದ್ದು, ಈ ಬಾರಿ ಪ್ರವಾಸಿಗರಿಗೆ ಮುದ ನೀಡಲಿದೆ. ಸುತ್ತಲೂ 150 ಜನ ಕುಳಿತುಕೊಂಡು ನೃತ್ಯ ಕಾರಂಜಿ ವೀಕ್ಷಿಸಬಹುದಾಗಿದೆ. ಲಿಂಗಾಂಬುದಿ ಕೆರೆಯಲ್ಲಿನ ಪಕ್ಷಿ ವೀಕ್ಷಣೆ ಹಾಗೂ ಬೊಟಾನಿಕಲ್ ಗಾರ್ಡನ್ ವೀಕ್ಷಣೆಗಾಗಿ 60 ಅಡಿ ಎತ್ತರದ ವೀಕ್ಷಣಾ ಗೋಪುರ ನಿರ್ಮಿಸಲಾಗಿದೆ. ಈ ಗೋಪುರಕ್ಕೆ ರೇಲಿಂಗ್ಸ್ ಅಳವಡಿಸುವ ಕಾರ್ಯ ಬಿರುಸಾಗಿ ಸಾಗುತ್ತಿದ್ದು, ದಸರಾ ಆರಂಭಕ್ಕೂ ಮುನ್ನವೇ ಕಾಮಗಾರಿ ಪೂರ್ಣಗೊಳ್ಳಲಿದೆ. ಈ ವೀಕ್ಷಣಾ ಗೋಪುರದ ಮೇಲೆ ನಿಂತು ಬೊಟಾನಿಕಲ್ ಗಾರ್ಡನ್ ಹಾಗೂ ಲಿಂಗಾಂಬುದಿ ಕೆರೆಯಲ್ಲಿ ಪಕ್ಷಿ ಸಂಕುಲ ವೀಕ್ಷಿಸಬಹುದಾಗಿದೆ. ಈ ಗೋಪುರದಲ್ಲಿ ಮುಂದಿನ ದಿನಗಳಲ್ಲಿ ಬೈನಾಕ್ಯುಲರ್ ತಂದಿಡಲು ಉದ್ದೇಶಿಸಲಾಗಿದೆ.



ಬೊಟಾನಿಕಲ್ ಗಾರ್ಡನ್‌ನಲ್ಲಿ ನೂತನವಾಗಿ ನಿರ್ಮಿಸಿರುವ ಸಂಗೀತ ನೃತ್ಯ ಕಾರಂಜಿ.

ದಸರಾದಲ್ಲಿ ಮಾಹಿತಿ ರವಾನೆ: ನೈಸರ್ಗಿಕ ವಾತಾವರಣದಲ್ಲಿ ನಿರ್ಮಾಣವಾಗಿರುವ ಬೊಟಾನಿಕಲ್ ಗಾರ್ಡನ್‌ನಲ್ಲಿ ಪುಷ್ಪಮೇಳ ಆಯೋಜಿಸಿರುವ ಕುರಿತಂತೆ ದಸರಾ ಮಹೋತ್ಸವ ವಿವಿಧ ಕಾರ್ಯಕ್ರಮ ನಡೆಯುವ ಸ್ಥಳ, ಪ್ರಮುಖ ವೃತ್ತ, ಜನನಿಬಿಡ ಸ್ಥಳಗಳಲ್ಲಿ ಪುಷ್ಪಮೇಳದ ಮಾಹಿತಿ ನೀಡುವ ಫಲಕ ಅಳವಡಿಸಲು ಉದ್ದೇಶಿಸಲಾಗಿದೆ. ಆ ಫಲಕದಲ್ಲಿ ಕ್ಯೂಆರ್ ಕೋಡ್ ಇದ್ದು, ಅದನ್ನು ಸ್ಕ್ಯಾನ್ ಮಾಡಿದರೆ, ಬೊಟಾನಿಕಲ್ ಗಾರ್ಡನ್ ಇರುವ ಸ್ಥಳದ ಮ್ಯಾಪ್ ಕಾಣಿಸಲಿದೆ.

“ನವರಾತ್ರಿ ಆರಂಭವಾಗುವ ಸೆ.22ರಿಂದ ಜಂಬೂಸವಾರಿ ದಿನ ಅ.2ರವರೆಗೆ ಪುಷ್ಪಮೇಳ ನಡೆಯಲಿದೆ. ಪ್ರತಿದಿನ ಬೆಳಗ್ಗೆ 9ರಿಂದ ರಾತ್ರಿ 9 ಗಂಟೆವರೆಗೂ ಪುಷ್ಪಮೇಳ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ. ವಯಸ್ಕರಿಗೆ 60ರೂ., ಮಕ್ಕಳಿಗೆ 30 ರೂ. ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಪುಷ್ಪಮೇಳ ಮುಗಿದ ನಂತರವೂ ವರ್ಷವಿಡೀ ಬೊಟಾನಿಕಲ್ ಗಾರ್ಡನ್ ವೀಕ್ಷಣೆಗೆ ಲಭ್ಯವಿದೆ.

- ಮಂಜುನಾಥ್
ಸಹಾಯಕ ನಿರ್ದೇಶಕರು, ಲಿಂಗಾಂಬುದಿ ಸಸ್ಯಕ್ಷೇತ್ರ



ಟೋಪಿಯರಿ ಉದ್ಯಾನ./ ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್



ಪೊಲೀಸರ ಸರ್ಪಗಾವಲಲ್ಲಿ ಗಣೇಶ ಮೂರ್ತಿಗಳ ಸಾಮೂಹಿಕ ವಿಸರ್ಜನೆ



ಸಾಮೂಹಿಕ ವಿಸರ್ಜನೆಗೆ ನಿಯೋಜಿತಗೊಂಡಿದ್ದ ಖಾಕಿ ಸರ್ಪಗಾವಲು



18 ಗಣೇಶ ವಿಗ್ರಹಗಳ ಸಾಮೂಹಿಕ ವಿಸರ್ಜನೆ ಮದ್ದೂರಿನಲ್ಲಿ ನಡೆಯಿತು.

ಮದ್ದೂರು, ಸೆ.10–ಕೋಮು ಸಂಘರ್ಷದಿಂದ ಮೂರು ದಿನಗಳಿಂದ ಬೂದಿ ಮುಚ್ಚಿದ ಕೆಂಡದಂತಿದ್ದ ಮದ್ದೂರಿನಲ್ಲಿ ಬುಧವಾರ ಒಟ್ಟು 18 ಗಣೇಶ ವಿಗ್ರಹಗಳ ಸಾಮೂಹಿಕ ವಿಸರ್ಜನೆ ಖಾಕಿ ಸರ್ಪಗಾವಲಿನಲ್ಲಿ ನಡೆಯಿತು.

ಸಾಮೂಹಿಕ ವಿಸರ್ಜನೆ ಮೆರವಣಿಗೆಯಲ್ಲಿ ಸಾವಿರಾರು ಮಂದಿ ಹಿಂದೂಪರ ಕಾರ್ಯಕರ್ತರು ಪಾಲ್ಗೊಂಡಿದ್ದರೆ, ಇವರಿಗೆ ರಾಜ್ಯ ಬಿಜೆಪಿ ಹಾಗೂ ಜಿಲ್ಲಾ ಜೆಡಿಎಸ್ ನಾಯಕರು ಸಾಥ್ ನೀಡಿದರು.

ವಿಸರ್ಜನೆಗೆ ಬಂದ ವಿಪಕ್ಷ ನಾಯಕ ಆರ್. ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಶಾಸಕರಾದ ಅಶ್ವತ್ಥ್ ನಾರಾಯಣ, ಸಿ.ಟಿ.ರವಿ ಮತ್ತಿತರೆ ನಾಯಕರು ದೊಡ್ಡರಸಿನಕೆರೆ ಬಸಪ್ಪನ ಆಶೀರ್ವಾದ ಪಡೆದು ಮೆರವಣಿಗೆಗೆ ಚಾಲನೆ ನೀಡಿದರು. ಜನಸಾಗರದ ನಡುವೆ ನಾಯಕರೂ ಹೆಜ್ಜೆ ಹಾಕಿದರು. ಕಾರ್ಯಕರ್ತರು ಜೈ ಶ್ರೀರಾಮ್ ಘೋಷಣೆ ಕೂಗುತ್ತಾ ಬಿಜೆಪಿ ನಾಯಕರನ್ನು ಹೆಗಲ ಮೇಲೆ ಕೂರಿಸಿಕೊಂಡು ಮೆರವಣಿಗೆಯಲ್ಲಿ ಸಾಗಿದರು.

ಮಳವಳ್ಳಿ ರಸ್ತೆಯಿಂದ ಆರಂಭವಾದ ಗಣೇಶಮೂರ್ತಿ ಮೆರವಣಿಗೆ ಟಿ.ಬಿ.ವೃತ್ತ, ಹಳೇ ಬೆಂಗಳೂರು–ಮೈಸೂರು ಹೆದ್ದಾರಿ, ಕೊಲ್ಲಿ ವೃತ್ತ, ಪೇಟೆ ಬೀದಿ ಮಾರ್ಗವಾಗಿ ಹೊಳೆ ಆಂಜನೇಯಸ್ವಾಮಿ ದೇಗುಲದ ಬಳಿ ಬಂದು ಅಲ್ಲಿ ಶಿಂಷಾ ನದಿಯಲ್ಲಿ ಸಾಮೂಹಿಕವಾಗಿ ಗಣಪತಿ ವಿಸರ್ಜನೆ ಮಾಡಲಾಯಿತು. ಹಿಂದೂಪರ ಕಾರ್ಯಕರ್ತರು, ವಿದ್ಯಾರ್ಥಿಗಳು ಭಾಗಿಯಾಗಿದ್ದರು. ಡಿಜೆ, ಸಿನಿಮಾ ಹಾಡುಗಳು ಮತ್ತು ತಮಟೆ ಸದ್ದಿಗೆ ನೃತ್ಯ ಮಾಡುತ್ತಾ, ಭಾಗವತ ಧ್ವಜ ಹಿಡಿದು ಮೆರವಣಿಗೆ ಟಿ.ಬಿ. ವೃತ್ತದ ಮೂಲಕ ಪೇಟೆ ಬೀದಿ ತಲುಪಿದಾಗ ಸಮೀಪದಲ್ಲೇ ಬೃಹತ್ ವೇದಿಕೆ ಸ್ಥಾಪಿಸಿ, ಅಲ್ಲಿ ಬಿಜೆಪಿ ಮತ್ತು ಜೆಡಿಎಸ್ ನಾಯಕರು ನೆರೆದಿದ್ದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದರು. ಮೂರೂವರೆ ಕಿಲೋಮೀಟರ್ ದೂರದವರೆಗೆ ಮೆರವಣಿಗೆ ಸಾಗಿತು.

ಸಾಮೂಹಿಕ ಗಣಪತಿ ವಿಸರ್ಜನೆ ವೇಳೆ ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಐಜಿ ಡಾ.ಬೋರಲಿಂಗಯ್ಯ ಸಿಬ್ಬಂದಿಗಳಿಗೆ ಅಗತ್ಯ ಸೂಚನೆ ಹಾಗೂ ಸಲಹೆಗಳನ್ನು ನೀಡಿದ್ದರು. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಹಿಂದಿನ ಎಸ್ಪಿ ಎನ್.ಯತೀಶ್ ಸೇರಿ ಏಳು ಮಂದಿ ಎಸ್ಪಿಗಳು ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿತ್ತು.

ಕೆಲವೆಡೆ ಬಂದ್: ಸಾಮೂಹಿಕ ಗಣಪತಿ ವಿಸರ್ಜನೆ ಸಾಗುವ ಮಾರ್ಗಗಳಾದ ಮಳವಳ್ಳಿ ರಸ್ತೆಯ ಕೆಲವೆಡೆ ಹಾಗೂ ಪೇಟೆ ಬೀದಿ ರಸ್ತೆಗಳ ಅಂಗಡಿ, ಮುಗ್ಗಟ್ಟುಗಳು ಇಂದೂ ಸಹ ಬಂದ್ ಆಗಿದ್ದವು. ಸಾವಿರಾರು ಜನ ಸೇರುವ ನಿರೀಕ್ಷೆ ಇದ್ದಿದ್ದರಿಂದ ಯಾವುದೇ ಸಮಸ್ಯೆಗಳಾಗಬಾರದೆಂದು ವರ್ತಕರು ಇಂದು ಸಹ ಸ್ವಯಂಪ್ರೇರಿತ ಬಂದ್ ಮಾಡಿದ್ದರು. ಹಳೇ ಬೆಂಗಳೂರು– ಮೈಸೂರು ರಸ್ತೆ ಸೇರಿದಂತೆ ಇನ್ನಿತರೆ ಕಡೆಗಳಲ್ಲಿ ಅಂಗಡಿ, ಮುಗ್ಗಟ್ಟುಗಳಲ್ಲಿ ವ್ಯಾಪಾರ, ವಹಿವಾಟು ನಡೆಯಿತು. ವಾಹನಗಳ ಸಂಚಾರವೂ ಎಂದಿನಂತೆ ಇತ್ತು.

ವಿಧಾನಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಯದುವೀರ್ ಒಡೆಯರ್, ಶಾಸಕರಾದ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ, ಸಿ.ಟಿ. ರವಿ ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಕೆ.ಸಿ.ನಾರಾಯಣಗೌಡ, ಶಾಸಕ ಧೀರಜ್ ಮುನಿರಾಜು, ಮುಖಂಡರಾದ ಎಸ್.ಪಿ.ಸ್ವಾಮಿ, ಡಾ. ಇಂದ್ರೇಶ್, ಸಚ್ಚಿದಾನಂದ ಇಂಡುವಾಳು, ಅಶೋಕ್ ಜಯರಾಂ ಉಪಸ್ಥಿತರಿದ್ದರು.

ನ್ಯಾಯಾಂಗ ತನಿಖೆಗೆ ಆಗ್ರಹ

ಮದ್ದೂರು,ಸೆ.10–ಮದ್ದೂರಿನಲ್ಲಿ ಸಂಭವಿಸಿದ ಕೋಮು ಗಲಭೆ ಬಗ್ಗೆ ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥರು ಯಾರೇ ಇದ್ದರೂ ಅವರ ವಿರುದ್ಧ ಕಠಿಣ ಕಾನೂನು ಕ್ರಮಕೈಗೊಳ್ಳಲು ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು.

ಈಗಾಗಲೇ ಎಸ್ ಪಿಯವರನ್ನು ನಾನು ಮತ್ತು ಆರ್. ಅಶೋಕ್ ಭೇಟಿ ಮಾಡಿ ಮಾಹಿತಿ ಪಡೆದಿದ್ದೇವೆ. ಒಂದು ಕೋಮಿನ ಜನ ಆ ರಸ್ತೆಯಲ್ಲಿ ಗಣಪತಿ ಮೆರವಣಿಗೆ ಸಾಗಬಾರದೆಂದು ಅವರೇ ಕಾನೂನು ಮಾಡಿಕೊಂಡಿದ್ದಾರೆ. ಇಂತಹ ಗೂಂಡಾವರ್ತನೆಗೆ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ಇವತ್ತು ಮಹಿಳೆಯರಲ್ಲೂ ಆಕ್ರೋಶ ಬಂದಿದೆ ಎಂದರೆ ದುಷ್ಕರ್ಮಿಗಳ ಅಟ್ಟಹಾಸ ಯಾವ ಮಟ್ಟಕ್ಕಿದೆ ಎಂಬುದು ತಿಳಿಯುತ್ತದೆ ಎಂದು ಕಿಡಿಕಾರಿದರು.

ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆಗಳನ್ನು ನೋಡಿದರೆ ಕೋಮು ಸೌಹಾರ್ದತೆಯನ್ನು ಬಿಜೆಪಿ ಕದಡುತ್ತಿವೆ ಎಂದು ಆಪಾದಿಸಿದ್ದಾರೆ. ಮಸೀದಿಯಲ್ಲಿ ಕಲ್ಲಿಟ್ಟು, ಮೆರವಣಿಗೆ ಮೇಲೆ ತೂರಲು ನಾವು ಷಡ್ಯಂತ್ರ ಮಾಡಿದ್ದೆವಾ? ನಮ್ಮ ಮತ್ತು ಹಿಂದೂಗಳ ಮೇಲೆ ಆರೋಪ ಮಾಡುವುದನ್ನು ನಿಲ್ಲಿಸಲಿ. ಒಂದು ಕಡೆ ಸಿಎಂ, ಸಚಿವರು, ಭದ್ರಾವತಿ ಶಾಸಕರು ನೀಡುತ್ತಿರುವ ಹೇಳಿಕೆಗಳು ಬೆಂಕಿಗೆ ತುಪ್ಪ ಸುರಿಯುವಂತೆ ಆಗಿವೆ. ಆದರೆ ಮೆರವಣಿಗೆಯಲ್ಲಿ ಪಾಲ್ಗೊಂಡು ಹಿಂದೂಗಳಿಗೆ ಧೈರ್ಯ ತುಂಬುವುದು ನಮ್ಮ ಕರ್ತವ್ಯ ಎಂದರು

ಮಾನ ಮರ್ಯಾದೆ ರಾಜ್ಯ ಸರ್ಕಾರಕ್ಕಿದ್ದರೆ ದೇಶದ್ರೋಹಿಗಳು ಕಲ್ಲು ಶೇಖರಣೆ ಮಾಡಿ ಎಸೆದವರನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಿ, ಅದನ್ನು ಬಿಟ್ಟು ಅಮಾಯಕ ಹಿಂದೂ ಮಹಿಳೆಯರ ಮೇಲೆ ಎಫ್ಐಆರ್ ಮಾಡಿ, ಅವರ ವಿರುದ್ಧ ದೌರ್ಜನ್ಯ ಮಾಡೋದು ಸರಿಯಲ್ಲ, ಪೊಲೀಸರು ಮುಂಜಾಗ್ರತಾ ಕ್ರಮ ಕೈಗೊಳ್ಳದಿರುವುದೇ ಘಟನೆಗೆ ಕಾರಣ. ಗೃಹಸಚಿವರು ಸಣ್ಣ ಪುಟ್ಟ ಘಟನೆ ಅಂತಾರೆ, ಈ ಕ್ಷೇತ್ರದ ಆಡಳಿತ ಪಕ್ಷದ ಶಾಸಕರು ವಿದೇಶದಲ್ಲಿದ್ದಾರೆ. ಅವರಿಗೆ ಜನರ ಬಗ್ಗೆ ಕಾಳಜಿ ಇಲ್ಲ, ಮೋಜು ಮಸ್ತಿಗೆ ವಿದೇಶಕ್ಕೆ ಹೋಗಿ ಅಲ್ಲಿ ವಿಡಿಯೋ ಮಾಡಿ ಬಿಡುತ್ತಾರೆ. ಕಾನೂನು ಸುವ್ಯವಸ್ಥೆ ಕಾಪಾಡುವ ಶಾಸಕರೇ ಕ್ಷೇತ್ರದಲ್ಲಿಲ್ಲ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಯುವತಿಯರನ್ನು ಕೆಣಕಲು ಅವಕಾಶ ನೀಡದ
ಬಸ್ ಚಾಲಕ, ನಿರ್ವಾಹಕನ ಮೇಲೆ ಮಾರಣಾಂತಿಕ ಹಲ್ಲೆ



ಗಾಯಾಳು ಟಿ.ಜಗದೀಶ್

ಕೆ.ಆರ್.ಪೇಟೆ: ಕೆಎಸ್ಆರ್‌ಟಿಸಿ ಬಸ್ಸನ್ನು ಅಡ್ಡಗಟ್ಟಿ ಒಳಗಿದ್ದ ಹೆಣ್ಣು ಮಕ್ಕಳನ್ನು ಕೆಣಕಲು ಅವಕಾಶ ಮಾಡಿಕೊಡದ ಕಂಡಕ್ಟರ್ ಮೇಲೆ ಕಲ್ಲಿನಿಂದ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ತಾಲೂಕಿನ ವಿಠಲಾಪುರ ಮಾರ್ಗದ ಪಿಡಿಜಿ ಕೊಪ್ಪಲು ಗೇಟ್ ಬಳಿ ನಡೆದಿದೆ.

ಸಾರಿಗೆ ಡಿಪೋ ಕಂಡಕ್ಟರ್ ಟಿಜಗದೀಶ್ ಎಂಬವರೇ ಗಾಯಗೊಂಡು ಆಸ್ಪತ್ರೆಗೆ ದಾಖಲಾದವರಾಗಿದ್ದಾರೆ. ಬೈಕ್‌ನಲ್ಲಿ ಬಂದಿರುವ ನಾಗೋರ್ನಹಳ್ಳಿ ಗ್ರಾಮದವರೆನ್ನಲಾದ ಧರ್ಮ, ಭರತ್, ತಿಮ್ಮ, ಶೇಖರ್ ಎಂಬವರು ಬಸ್ ಅಡ್ಡಗಟ್ಟಿ ಒಳಗೆ ನುಗ್ಗಲು ಪ್ರಯತ್ನಿಸಿದ್ದಾರೆ. ಬಸ್ಸಿನೊಳಗೆ ನುಗ್ಗದಂತೆ ತಡೆದು ಹೆಣ್ಣು ಮಕ್ಕಳ ಸುರಕ್ಷತೆಗೆ ಕಂಡಕ್ಟರ್ ಜಗದೀಶ್ ಮತ್ತು ಡ್ರೈವರ್ ಈರಗಂಟಪ್ಪ ಮುಂದಾಗಿದ್ದಾರೆ. ಇದರಿಂದ ಆಕ್ರೋಷಗೊಂಡ ಯುವಕರ ಗುಂಪು ಕಲ್ಲಿನಿಂದ ಕಂಡಕ್ಟರ್ ಮತ್ತು ಡ್ರೈವರ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ಇದರಿಂದ ಕಂಡಕ್ಟರ್ ಜಗದೀಶ್ ಅವರಿಗೆ ತಲೆ ಮತ್ತು ಕಣ್ಣಿನ ಭಾಗಕ್ಕೆ ಗಂಭೀರ ಗಾಯಗಳಾಗಿದ್ದು, ಡ್ರೈವರ್ ಈರಗಂಟಪ್ಪ ಅವರಿಗೂ ಸಣ್ಣಪುಟ್ಟ ಗಾಯಗಳಾಗಿವೆ ಗಾಯಾಳು ಜಗದೀಶ್‌ರನ್ನು ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ, ನಂತರ ವೈದ್ಯರ ಸಲಹೆಯ ಮೇರೆಗೆ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಘಟನೆ ಕುರಿತು ಪ್ರಕರಣ ದಾಖಲು ಮಾಡಿಕೊಂಡಿದ್ದ ಪಟ್ಟಣದ ಪೊಲೀಸರು ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದು, ಸಂಜೆ ಹೊತ್ತಿಗೆ ಪರಾರಿಯಾಗಿದ್ದವರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಬಂಧಿತ ಆರೋಪಿಗಳನ್ನು ಪಟ್ಟಣದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದಾಗ ನ್ಯಾಯಾಧೀಶರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೊಪ್ಪಿಸಿದರು.

ಸಾರಿಗೆ ನೌಕರರಿಗೆ ಹಾಗೂ ಬಸ್ಸಿನ ಪ್ರಯಾಣಿಕರಿಗೆ ಸೂಕ್ತ ರಕ್ಷಣೆ ಒದಗಿಸಿ ಕೊಡಬೇಕೆಂದು ಪ್ರತಿಭಟನಾ ನಿರತ ಸಾರಿಗೆ ನೌಕರರು ಒತ್ತಾಯಿಸಿದರು.

ಮುಸ್ಲಿಂ ತುಷ್ಟೀಕರಣವೇ ಗಲಭೆಗೆ ಕಾರಣ: ವಿಪಕ್ಷ ನಾಯಕ ಅಶೋಕ್



ಮದ್ದೂರು, ಸೆ.10–ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಅತಿಯಾಗಿ ಮುಸ್ಲಿಂ ತುಷ್ಟೀಕರಣ ಮಾಡುತ್ತಿರುವುದರಿಂದಲೇ ಇಂತಹ ಗಲಭೆಗಳು ಹೆಚ್ಚಾಗುತ್ತಿವೆಯೆಂದು ವಿಪಕ್ಷನಾಯಕ ಆರ್.ಅಶೋಕ್ ಕಿಡಿಕಾರಿದರು.

ಮಂಡ್ಯ ಜಿಲ್ಲೆಯ ಜನರಿಂದ ಮತ ಹಾಕಿಸಿ ಕೊಂಡ ಡಿಕೆಶಿ, ಕಡೆಗೆ ಈ ಜಿಲ್ಲೆಯ ಜನರನ್ನು 'ಛತ್ರಿಗಳು' ಎಂದರು. ಭಾರತ ಹಿಂದೂ ರಾಷ್ಟ್ರವಾಗಿದ್ದು, ಪಾಕಿಸ್ತಾನಕ್ಕೆ ಜೈ ಎಂದರೆ ಅಂತಹವರ ಹೆಡೆ ಮುರಿ ಕಟ್ಟುತ್ತೇವೆ ಎಂದು ಕಿಡಿಕಾರಿ ಮಸೀದಿಯಲ್ಲಿ ಕಲ್ಲುಗಳನ್ನಿಟ್ಟು ಕೊಳ್ಳುತ್ತಾರೆ. ಹೋಗಿ ಮಸೀದಿಯನ್ನು ಪರಿಶೀಲಿಸಿದರೆ ಗೊತ್ತಾಗುತ್ತದೆ. ಈ ಸರ್ಕಾರಕ್ಕೆ ಮಾನ, ಮರ್ಯಾದೆ ಇದ್ದರೆ ಮಸೀದಿಗಳನ್ನು ಶೋಧಿಸಲಿ.ಹಿಂದೂಗಳ ಮೇಲಿನ ಕೇಸ್ ವಾಪಸ್ ತೆಗೆದುಕೊಳ್ಳಲಾಗದ ಈ ಸರ್ಕಾರ ಮುಸಲ್ಮಾನರ ಮೇಲಿನ ಕೇಸ್ ವಾಪಸ್ ಪಡೆಯುತ್ತದೆ. ಹಾಗಿದ್ದರೆ ಹಿಂದೂಗಳು ನಿಮಗೆ ಮತಕೊಟ್ಟಿಲ್ಲವೆ? ಎಂದು ಪ್ರಶ್ನಿಸಿದರು.

ಜಾತಿಯತೆ ಬಿಟ್ಟು ಒಗ್ಗಟ್ಟಾಗಬೇಕು: ಶಾಸಕ ಸಿ.ಟಿ.ರವಿ ಮಾತನಾಡಿ, ನಮ್ಮ ಗಣೇಶ ಮೆರವಣಿಗೆ ಮೇಲೆ ಕಲ್ಲು ತೂರಲಾಗಿದೆ. ಹಿಂದೂ ಭಾವನೆಗಳಿಗೆ ಧಕ್ಕೆ ಆಗಿದೆ, ಯಾರೂ ಇಲ್ಲಿ ರಾಜಕಾರಣ ಮಾಡೋಕೆ ಬಂದಿಲ್ಲ ಅನ್ಯಕೋಮಿನವರು ಬಾಲ ಬಿಚ್ಚಿದರೆ ಸಹಿಸಿಕೊಳ್ಳಲು ಆಗಲ್ಲ. ಭದ್ರಾವತಿ ಶಾಸಕ ಮುಂದಿನ ಜನ್ಮಕ್ಕೆ ಮುಸ್ಲಿಂ ಆಗಿ ಹುಟ್ಟುವೆ ಎನ್ನುತ್ತಾರೆ. ಮುಂದಿನ ಜನ್ಮ ಯಾಕೆ ಈಗಲೇ ಮತಾಂತರವಾಗಲಿ. ನಮ್ಮ ಮುಂದೆ ತೊಡೆ ತಟ್ಟುವುದಕ್ಕೆ ಬಂದರೆ ತೊಡೆಯನ್ನು ಮುರೀತೀವಿ, ತಲೇನೂ ತೆಗೀತೇವೆ ಎಂದರು.

ಕಾಂಗ್ರೆಸ್‌ನಿಂದ ಓಲೈಕೆ ರಾಜಕಾರಣ: ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ್ ನಾರಾಯಣ ಮಾತನಾಡಿ, ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಓಲೈಕೆ ರಾಜಕೀಯ ಮಾಡುತ್ತಿದ್ದು, ನಮ್ಮ ತಾಳ್ಮೆಯನ್ನು ಪರೀಕ್ಷೆ ಮಾಡುತ್ತಿದೆ. ಠಾಣೆಯನ್ನು ಸುಡಲು ಹೋದವರು ಈ ಮುಸ್ಲಿಮರು. ಇಂಥವರ ಮೇಲೆ ಕೇಸ್ ಮಾಡಲು ಹಿಂಜರಿಯುತ್ತಾರೆ. ಕೇಸ್ ಹಾಕಿದ ಮೇಲೆ ಕೇಸ್ ಹಿಂದೆ ತಗೊಳುತ್ತಾರೆ. ಇದು ಕಾನೂನು ಸುವ್ಯವಸ್ಥೆ ಕಾಪಾಡುವ ಸರ್ಕಾರ ಅಲ್ಲ ಜನವಿರೋಧಿ ಸರ್ಕಾರ ಎಂದು ಆಕ್ರೋಶಿಸಿದರು.

ರಕ್ಷಿಸುವವರು ಸರಿಯಾಗಿದ್ದರೆ ಇಂತಹ ಘಟನೆ ನಡೆಯಲ್ಲ: ಮಾಜಿ ಸಂಸದೆ ಸುಮಲತಾ ಅಂಬರೀಷ್ ಮಾತನಾಡಿ, ನಾವೆಲ್ಲ ನಿಂತಿರೋದು ನಮ್ಮ ನೋವು ಹಂಚಿಕೊಳ್ಳಲು. ಸರ್ಕಾರ ನಮ್ಮ ವಿರುದ್ಧ ಯಾವ ರೀತಿ ನಡೆದುಕೊಳ್ಳುತ್ತಿದೆ ಎಂದು ನೋಡುತ್ತಿದ್ದೇವೆ. ಈಗ ಅಭಿಮಾನಿಗಳು ನನ್ನ ಅಡ್ಡ ಹಾಕಿ ಹೇಳಿದ್ದರು. ಅಕ್ಕ ಅಂಬರೀಶ್ ಅಣ್ಣ ಇರಬೇಕಿತ್ತು ಅಂತ ಹೇಳುತ್ತಿದ್ದರು. ನಮಗೆ ರಕ್ಷಣೆ ಕೊಡುವ ನಾಯಕರು ಸರಿಯಾಗಿದ್ದರೆ ಎಲ್ಲಾ ಸರಿ ಇರುತ್ತದೆ.ನಾಯಕರು ಅಸಮರ್ಥರಾದಾಗ ಇಂಥಘಟನೆ ನಡೆಯುತ್ತದೆ ಎಂದು ಟೀಕಿಸಿದರು. ಮಾಜಿ ಶಾಸಕ ಕೆ.ಸುರೇಶ್ ಗೌಡ ಮಾತನಾಡಿದರು.ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಸಂಸದ ಯದುವೀರ್, ಮಾಜಿ ಸಚಿವರಾದ ಸಿ.ಎಸ್. ಪುಟ್ಟರಾಜು, ಡಿ.ಸಿ.ತಮ್ಮಣ್ಣ, ಕೆ.ಸಿ. ನಾರಾಯಣ ಗೌಡ, ಶಾಸಕ ಧೀರಜ್ ಮುನಿರಾಜು, ಮುಖಂಡರಾದ ಎಸ್.ಪಿ.ಸ್ವಾಮಿ, ಡಾ. ಇಂದ್ರೇಶ್, ಸಚ್ಚಿದಾನಂದ ಇಂಡುವಾಳು, ಅಶೋಕ್ ಜಯರಾಂ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ತಕ್ಷಣ ರದ್ದುಗೊಳಿಸಿ

ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿರುವ ವಾಹನಗಳಿಗೆ ಜಿಪಿಎಸ್ ಟ್ರಾಕರ್‌ಗಳನ್ನು ಅಳವಡಿಸಬೇಕು. ರಾಜ್ಯದಲ್ಲಿರುವ ಎಲ್ಲಾ ಗೋದಾಮುಗಳಲ್ಲಿ ಸಿಸಿಟಿವಿ ಅಳವಡಿಸಲು ಕ್ರಮ ಕೈಗೊಳ್ಳಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಕನಿಷ್ಠ ಬೆಂಬಲ ಯೋಜನೆಯಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಹಾಗೂ ಸ್ವಸಹಾಯ ಸಂಘಗಳ ಸಹಯೋಗದೊಂದಿಗೆ ಆಹಾರಧಾನ್ಯಗಳ ಖರೀದಿ ಪ್ರಕ್ರಿಯೆ ನಡೆಸಬೇಕು. ಇದೇ ಪ್ರಥಮ ಬಾರಿಗೆ 0.29 ಲಕ್ಷ ಮೆಟ್ರಿಕ್ ಟನ್ ಕಿರು ಸಿರಿಧಾನ್ಯಗಳನ್ನು ಖರೀದಿಸಲಾಗುತ್ತಿದೆ. ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಲ್ಲಿ ಖಾಲಿಯಿರುವ ಅಗತ್ಯ ಸಿಬ್ಬಂದಿಗಳ ನೇಮಕಾತಿಗೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ಹೇಳಿದ್ದಾರೆ.

ವಿವಿಧ ವಸತಿ ಯೋಜನೆಗಳ ಪ್ರಗತಿ ಪರಿಶೀಲನೆ: ವಿವಿಧ ವಸತಿ ಯೋಜನೆಗಳ ಅಡಿ ಮನೆಗಳ ನಿರ್ಮಾಣಕ್ಕೆ ಅಗತ್ಯ ಇರುವ ಅನುದಾನ ಹಂಚಿಕೆ ಕುರಿತು ಪ್ರಸ್ತಾವಗಳನ್ನು ಸಲ್ಲಿಸುವಂತೆ ಆರ್ಥಿಕ ಇಲಾಖೆ ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ. ಮನೆಗಳ ನಿರ್ಮಾಣವನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಿ, ಅರ್ಹ ಫಲಾನುಭವಿಗಳಿಗೆ ಶೀಘ್ರವಾಗಿ ಹಸ್ತಾಂತರಿಸಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದ್ದಾರೆ.

ಹಿಂದೆ ನಮ್ಮ ಸರ್ಕಾರ ಇದ್ದಾಗ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ನಗರ) 43,874 ಮನೆಗಳು ಸೇರಿದಂತೆ ಒಟ್ಟು 47,848 ಮನೆಗಳನ್ನು ಮಂಜೂರು ಮಾಡಲಾಗಿತ್ತು. ಈ ಪೈಕಿ, 13,303 ಮನೆಗಳು ಬಹುತೇಕ ಪೂರ್ಣಗೊಂಡಿವೆ. ಒಟ್ಟು 25,815 ಮನೆಗಳು ನಿರ್ಮಾಣ ಹಂತದಲ್ಲಿವೆ. ಇದರಲ್ಲಿ ಫಲಾನುಭವಿಗಳ ವಂತಿಕೆ 134 ಕೋಟಿ ಸಂಗ್ರಹಿಸಲಾಗಿದೆ. ಮೊದಲ ಹಂತದಲ್ಲಿ 7,900 ಮನೆಗಳು ಬಹುತೇಕ ಪೂರ್ಣಗೊಂಡಿದ್ದು, ಫಲಾನುಭವಿಗಳ ವಂತಿಕೆ ಮೊತ್ತ 216 ಕೋಟಿ ಬಾಕಿಯಿದೆ. ಮನೆ ಹಂಚಿಕೆ ಮಾಡಲು ಸಾಧ್ಯವಾಗುವಂತೆ, ಈ ಬಾಕಿ ಮೊತ್ತದ ಪಾವತಿ ಬಗ್ಗೆ ಹುಡ್ಕೋದಿಂದ ಸಾಲ ಪಡೆಯುವುದು ಸೇರಿದಂತೆ ಸೂಕ್ತ ಪ್ರಸ್ತಾವ ಸಿದ್ಧಪಡಿಸಬೇಕು ಎಂದೂ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಹೇಳಿದ್ದಾರೆ.

ಬಜೆಟ್‌ನಲ್ಲಿ ಅಂಬೇಡ್ಕರ್ ವಸತಿ ಯೋಜನೆಯಡಿ (ಗ್ರಾಮೀಣ) 900 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಈ ಯೋಜನೆಯಡಿ 94,939 ಮನೆಗಳನ್ನು ನಿರ್ಮಿಸಲಾಗುತ್ತಿದ್ದು, 56,682 ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದು ಸಭೆಗೆ ಅಧಿಕಾರಿಗಳು ಮಾಹಿತಿ ನೀಡಿದರು. ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ (ಸ್ಲಂ ಬೋರ್ಡ್) ಅಡಿ 42 ಸಾವಿರ ಮನೆಗಳನ್ನು ನಿರ್ಮಿಸಲಾಗುತ್ತಿದೆ. ಇಲ್ಲಿ ರಸ್ತೆ ಸೇರಿದಂತೆ ಮೂಲಸೌಲಭ್ಯಗಳನ್ನು ಕಲ್ಪಿಸಲು ಅನುದಾನ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ವಸತಿ ಸಚಿವ ಜಮೀರ್ ಅಹಮದ್ ಖಾನ್, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಮತ್ತು ವಸತಿ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಯುವ ಸಂಭ್ರಮಕ್ಕೆ ವರ್ಣರಂಜಿತ ಚಾಲನೆ



ಮಾನಸಗಂಗೋತ್ರಿಯ ಬಯಲುರಂಗಮಂದಿರದಲ್ಲಿ ಹಮ್ಮಿಕೊಂಡಿರುವ ಯುವ ಸಂಭ್ರಮಕ್ಕೆ ಚಾಲನೆ ನೀಡಲಾಯಿತು. ಚಿತ್ರ ತಾರೆಯರಾದ ಯುವ ರಾಜ್‌ಕುಮಾರ್, ಅಮೃತಾ ಅಯ್ಯಂಗಾರ್, ಸಚಿವ ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಎಂಎಲ್‌ಸಿ ಮಂಜೇಗೌಡ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಎಂದು ಸಂತಸ ವ್ಯಕ್ತಪಡಿಸಿದರು. 'ಲವ್ ಯು ಮೈಸೂರು...' ಎಂದರಲ್ಲದೆ, 'ಬಡವ ರಾಸ್ಕಲ್' ಸಿನಿಮಾದ ಡೈಲಾಗ್ ಹೊಡೆದು ಯುವ ಪಡೆಯ ಎದೆಗೆ ಲಗ್ಗೆ ಇಟ್ಟರು.

ಯುವ ರಾಜ್‌ಕುಮಾರ್ ಮೋಡಿ: ನಮಸ್ಕಾರ ಮೈಸೂರು... ಇಲ್ಲಿ ಬಂದಿದ್ದು ತುಂಬ ಖುಷಿಯಾಗುತ್ತಿದೆ. ಯುವ ಸಂಭ್ರಮದ ಸೆಷಾಲಿಟಿ ಎಂದರೆ ದಸರಾ ಶುರುವಾಗುವುದೇ ಇದರಿಂದ. ಇಲ್ಲಿ ಮೂಡುವ ಯುವ ಪಡೆಯ ಎನರ್ಜಿ, ಪ್ರತಿಭೆಯಿಂದ ದಸರಾ ಆರಂಭವಾಗುತ್ತದೆ. ಮೈಸೂರು ಮಹಾರಾಜರು, ಕುವೆಂಪು ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನೆಲ್ಲಾ ನಾವು ನೆನೆಪಿಸಿಕೊಳ್ಳಬೇಕೆಂದು ಹೇಳಿ ಶುಭ ಹಾರೈಸಿದರು.

ಬ್ಯಾಂಗಲ್ ಬಂಗಾರಿ ಸಾಂಗ್‌ಗೆ ಭರ್ಜರಿ ಡ್ಯಾನ್ಸ್: ಯುವ ರಾಜ್‌ಕುಮಾರ್, ಅಮೃತಾ ಅಯ್ಯಂಗಾರ್ ಮಾತಿನ ಮೋಡಿ ಬಳಿಕ ಈ ಜೋಡಿಯ ಡ್ಯಾನ್ಸ್ ವೇದಿಕೆಯಲ್ಲಿ ಕಳೆಗಟ್ಟಿತು. ಯುವ ರಾಜ್‌ಕುಮಾರ್ ಅವರೇ ನಾಯಕ ನಟರಾಗಿ ಅಭಿನಯಿಸಿರುವ ಎಕ್ಕ ಸಿನಿಮಾದ ಬ್ಯಾಂಗಲ್ ಬಂಗಾರಿ... ಗೀತೆಗೆ ಈ ಇಬ್ಬರು ಜೊತೆಯಾಗಿ ಹೆಜ್ಜೆ ಹಾಕಿ ನೆರೆದವರ ಎದೆಗೆ ಲಗ್ಗೆ ಇಟ್ಟು, ಹುಚ್ಚೆದ್ದು ಕುಣಿಯುವಂತೆ ಮಾಡಿದರು.

25 ಕಾಲೇಜು ತಂಡಗಳ ನೃತ್ಯ ವೈಭವ: ಉದ್ಘಾಟನಾ ಸಮಾರಂಭದ ಬಳಿಕ 25 ಕಾಲೇಜು ತಂಡಗಳ ವೈವಿಧ್ಯಮಯ, ವಿಭಿನ್ನ ನೃತ್ಯ ಪ್ರದರ್ಶನ ವಿಶೇಷವಾಗಿ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಯುವ ಜನರನ್ನು ಕುಣಿದು ಕುಪ್ಪಳಿಸುವಂತೆ ಮಾಡಿತು. ನೃತ್ಯ ಪ್ರದರ್ಶನದಲ್ಲಿ ನಾಡು–ನುಡಿ ಹಾಗೂ ದೇಶಾಭಿಮಾನ ಜೊತೆಗೆ ಸಾಮಾಜಿಕ ಸಂದೇಶ ಸಹ ಮೂಡಿ ಬಂದಿತು. ವಿವಿಧ ಹಾಗೂ ವಿಭಿನ್ನ ವೇಷಭೂಷಣ ಮತ್ತು ಬೆಳಕಿ ಚಿತ್ತಾರದೊಂದಿಗೆ ಮೂಡಿಬಂದ ನೃತ್ಯ ಪ್ರದರ್ಶನ ಸಡಗರ ಸಂಭ್ರಮ ಕಳೆಗಟ್ಟುವಂತೆ ಮಾಡಿತು.

'ಸ್ವರ ಭಾರತಿ' ಶೀರ್ಷಿಕೆಯಡಿ ನಾಡು–ದೇಶಾಭಿಮಾನದ ಗೀತೆಗೆ ಭರತನಾಟ್ಯ ಶೈಲಿಯಲ್ಲಿ ಮೈಸೂರಿನ ಸಂಗೀತ ವಿವಿ ತಂಡವು ನೃತ್ಯ ಪ್ರದರ್ಶಿಸಿತು.ಆ ಬಳಿಕ ಮತ್ತೊಂದು ತಂಡ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕೊಡುಗೆ, ಸಾಧನೆಯನ್ನು ವೇದಿಕೆಯಲ್ಲಿ ಅನಾವರಣಗೊಳಿಸಿತು. ಸಾತಗಳ್ಳಿಯ ಮಹಾತ್ಮ ಗಾಂಧಿ ಬಿಎಡ್ ಕಾಲೇಜು ತಂಡದಿಂದ ನಾಲ್ವಡಿಯ ಸ್ಮರಣೆಯು ನೃತ್ಯದಲ್ಲಿ ಮೂಡಿಬಂದಿತು.

ಶಿವನ ಕುರಿತ ನೃತ್ಯವು ಶಿವಮೊಗ್ಗದ ಸಹ್ಯಾದ್ರಿ ಕಲಾ ಕಾಲೇಜು ತಂಡದಿಂದ ಅದ್ಭುತವಾಗಿ ಅನಾವರಣಗೊಂಡಿತು. 'ಆಟ ಹುಡುಗಾಟವೋ... ಸೇರಿದಂತೆ ವಿವಿಧ ಚಿತ್ರಗೀತೆ ಸಂಯೋಜಿಸಿದ ಹಾಡಿಗೆ ಹೆಜ್ಜೆ ಹಾಕಿ ಶಿವ ತಾಂಡವವನ್ನು ಕಣ್ಮುಂದೆ ತರಲಾಯಿತು. ನೃತ್ಯದ ಭಾವ ಭಂಗಿಯೊಂದಿಗೆ ಸಾಹಸಮಯ ಪಟ್ಟುಗಳನ್ನು ಸಂಯೋಜಿಸಿ, ನರ್ತಿಸುವ ಮೂಲಕ ಈ ತಂಡ, ಸಭಿಕರ ಗಮನ ಸೆಳೆಯುವಲ್ಲಿ ಯಶಸ್ವಿಯಾಯಿತು.

ಮೈಸೂರಿನ ರಾಜೇಂದ್ರನಗರದ ಶ್ರೀ ಛಾಯಾದೇವಿ ಕಾಲೇಜ್ ಆಫ್ ಎಜುಕೇಷನ್ ತಂಡವು 'ಗ್ಯಾರಂಟಿ ಯೋಜನೆಗಳ ಗೀತಗುಚ್ಛ' ಶೀರ್ಷಿಕೆಯಡಿ ನೃತ್ಯ ಪ್ರದರ್ಶಿಸಿ ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಪ್ರಯೋಜನಗಳನ್ನು ಅನಾವರಣಗೊಳಿಸಿತು. ಬಳಿಕ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆ ಹಾಗೂ ಸಾಧನೆ ಅನಾವರಣಗೊಳಿಸುವ ನೃತ್ಯವು ವೇದಿಕೆಯಲ್ಲಿ ಮೂಡಿಬಂದಿತು. ಮೈಸೂರಿನ ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ತಂಡವು 'ರಾಷ್ಟ್ರ ಸಂವಿಧಾನಕ್ಕೆ ನೀನೇ ಶಿಲ್ಪಿಯು...', 'ಭಾರತದ ಪ್ರಜೆಗಳಾದ ನಾವು...' ಗೀತೆಗಳಿಗೆ ಹೆಜ್ಜೆ ಹಾಕುವ ಮೂಲಕ ಅಂಬೇಡ್ಕರ್ ಅವರ ಕೊಡುಗೆಗಳನ್ನು ಸ್ಮರಿಸಿತು. 'ಆದಿವಾಸಿ ಜೀವನ ಶೈಲಿ' ಕುರಿತು ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ತಂಡ, 'ಸಾಮಾಜಿಕ ನ್ಯಾಯ' ಕುರಿತು ಬೆಂಗಳೂರಿನ ಜಿ.ಸಿ. ಮ್ಯಾಟ್ ಗುಪ್ತ ಕಾಲೇಜು ತಂಡ, ದಸರಾ ವೈಭವ ಕುರಿತು ಮೈಸೂರು ಮಹಾರಾಜ ಕಾಲೇಜು ತಂಡ ನೃತ್ಯ ಪ್ರದರ್ಶಿಸಿ ಗಮನ ಸೆಳೆದವು. ಒಟ್ಟಾರೆ ಮೊದಲ ದಿನ 25 ಕಾಲೇಜು ತಂಡಗಳು ವಿಭಿನ್ನ ವಿಶಿಷ್ಟ ಶೈಲಿಯ ನೃತ್ಯ ಪ್ರಕಾರಗಳೊಂದಿಗೆ ಸಭಿಕರ ಮನಕ್ಕೆ ಲಗ್ಗೆ ಇಟ್ಟವು.

ಉದ್ಘಾಟನೆ: ಸಚಿವ ಕೆ.ವೆಂಕಟೇಶ್ ದೀಪ ಬೆಳಗುವ ಮೂಲಕ ಯುವ ಸಂಭ್ರಮಕ್ಕೆ ಚಾಲನೆ ನೀಡಿದರು. ಅಲ್ಲದೆ, ಸಿನಿಮಾ ತಾರೆಯರಾದ ಯುವ ರಾಜ್‌ಕುಮಾರ್, ಅಮೃತಾ ಅಯ್ಯಂಗಾರ್ ಸೇರಿದಂತೆ ಪಾಲ್ಗೊಂಡಿದ್ದ ಎಲ್ಲರೂ ಜಾನಪದ ಪರಿಕರಗಳನ್ನು ನುಡಿಸುವ ಮೂಲಕ ಯುವ ಸಡಗರಕ್ಕೆ ಮೆರಗು ನೀಡಿದರು. ಬಳಿಕ ಖ್ಯಾತ ಗಾಯಕ ವಿಜಯ್ ಪ್ರಕಾಶ್ ಯುವ ಸಂಭ್ರಮ ಯಶಸ್ವಿಯಾಗಲೆಂದು ಹಾರೈಸಿರುವ ಶುಭ ಸಂದೇಶ ವೇದಿಕೆಯ ಪರದೆಯಲ್ಲಿ ಮೂಡಿಬಂದಿತು. ಅಲ್ಲದೆ, ಆಗಾಗ್ಗೆ ಯುವ ಸಂಭ್ರಮ ಶೀರ್ಷಿಕೆ ಗೀತೆ ಝೇಂಕರಿಸುತ್ತಿತ್ತು. ಕೆಲಕಾಲ ಸುರಿದ ತುಂತುರು ಮಳೆಗೂ ಯುವ ಜನರ ಉತ್ಸಾಹ ಕುಂದಲಿಲ್ಲ. ಕೆಲ ಸಣ್ಣಪುಟ್ಟ ಗೊಂದಲವೂ ಕಂಡುಬಂದಿತು.

ಯುವ ಸಂಭ್ರಮ ಕಾರ್ಯಕ್ರಮದಲ್ಲಿ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಸಿ.ಎನ್. ಮಂಜೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಡಿಸಿ ಜಿ.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸಿಫ್, ಜಿಪಂ ಸಿಇಓ ಯುಕೇಶ್‌ಕುಮಾರ್, ಯುವ ಸಂಭ್ರಮ ಉಪಸಮಿತಿ ಕಾರ್ಯಾಧ್ಯಕ್ಷರೂ ಆದ ಮೈಸೂರು ಉಪ ವಿಭಾಗಾಧಿಕಾರಿ ಆಶಪ್ಪ ಮತ್ತಿತರರಿದ್ದರು.



ನೃತ್ಯದಲ್ಲಿ ಗ್ಯಾರಂಟಿ ಯೋಜನೆಗಳ ಪ್ರಯೋಜನ ಅನಾವರಣಗೊಳಿಸಿದ ಶ್ರೀ ಛಾಯಾದೇವಿ ಕಾಲೇಜು ತಂಡ.



ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆಯನ್ನು ಸಾತಗಳ್ಳಿಯ ಮಹಾತ್ಮಗಾಂಧಿ ಬಿಎಡ್ ಕಾಲೇಜು ತಂಡ ನೃತ್ಯದ ಮೂಲಕ ಅನಾವರಣಗೊಳಿಸಿತು.



ನೃತ್ಯದಲ್ಲಿ ಡಾ.ಅಂಬೇಡ್ಕರ್ ಕೊಡುಗೆ ಅನಾವರಣಗೊಳಿಸಿದ ಮೈಸೂರಿನ ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ ತಂಡ.



ಮೈಸೂರಿನ ಸಂಗೀತ ವಿವಿ ತಂಡದ ನೃತ್ಯ ಪ್ರದರ್ಶನ.



ಮಹಾರಾಜ ಕಾಲೇಜು ತಂಡದಿಂದ ದಸರಾ ವೈಭವ ಅನಾವರಣ.



ತುಂತುರು ಮಳೆಗೆ ಕೊಡೆ ಹಿಡಿದು ಕಾರ್ಯಕ್ರಮ ವೀಕ್ಷಿಸಿದ ಯುವ ಜನರು.

ರಾಜ್ಯ ಸರ್ಕಾರದ ವಿರುದ್ಧ ಎಸ್‌ಸಿ ಒಳಮೀಸಲಾತಿ ಕಿಚ್ಚು

ಫ್ರೀಡಂಪಾರ್ಕ್‌ನಲ್ಲಿ ಉಗ್ರ ಹೋರಾಟ, ಆತ್ಮಹತ್ಯೆಗೆ ಮಹಿಳೆ ಯತ್ನ



ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿವೆ.

ಬೆಂಗಳೂರು, ಸೆ.10– ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆಯಲ್ಲಿ ಅನ್ಯಾಯವಾಗಿದೆ ಎಂದು ಆರೋಪಿಸಿ ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಸಿವೆ. ಈ ವೇಳೆ ರೊಚ್ಚಿಗೆದ್ದ ಪ್ರತಿಭಟನೆಕಾರರು ಪ್ರತಿಕೃತಿ ದಹಿಸಿ, ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ ಮಹಿಳೆಯೊಬ್ಬರು ಸ್ಥಳದಲ್ಲೇ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

ಮಹಾರಾಣಿ ಕಾಲೇಜು ಬಳಿ ಪ್ರತಿಭಟನಾಕಾರರು ರಸ್ತೆ ತಡೆದು ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು. ರಸ್ತೆ ತಡೆಯಿಂದಾಗಿ ಕೆ.ಆರ್.ಸರ್ಕಲ್ ಬಳಿ ಟ್ರಾಫಿಕ್ ಜಾಮ್ ಆಗಿದ್ದು, ಕೆಲಕಾಲ ವಾಹನಗಳು ಕಿಲೋ ಮೀಟರ್ ಉದ್ದ ನಿಂತಲ್ಲೇ ನಿಂತುಕೊಂಡಿತ್ತು.

ಎಡಗೈ ಸಮುದಾಯಕ್ಕೆ ಶೇ.6 ರಷ್ಟು, ಬಲ ಸಮುದಾಯಕ್ಕೆ ಶೇ. 6ರಷ್ಟು ಹಾಗೂ ಸ್ಪೃಶ್ಯ ಸಮುದಾಯಕ್ಕೆ ಶೇ.5ರಷ್ಟು ಮೀಸಲಾತಿ ಕಲ್ಪಿಸಲು ತೀರ್ಮಾನ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆ.20 ರಂದು ವಿಧಾನಸೌಧದಲ್ಲಿ ಘೋಷಿಸಿದ್ದರು. ನ್ಯಾ.ನಾಗಮೋಹನ್ ದಾಸ್ ವರದಿಯ ಶಿಫಾರಸುಗಳನ್ನು ಕೆಲ ಮಾರ್ಪಾಡುಗಳೊಂದಿಗೆ ಒಳ ಮೀಸಲಾತಿ ಕಲ್ಪಿಸಲಾಗಿದೆ. ಎ,ಬಿ,ಸಿ ಎಂದು ವರ್ಗೀಕರಣ ಮಾಡಿ ಮೀಸಲಾತಿ ಹಂಚಲಾಗಿದ್ದು, ಈ ಮೂಲಕ ದಶಗಳ ಹೋರಾಟಕ್ಕೆ ನಮ್ಮ ಸರ್ಕಾರ ನ್ಯಾಯ ಒದಗಿಸಿದೆ ಎಂದು ಸಿಎಂ ತಿಳಿಸಿದರು. ಆದರೆ ಒಳ ಮೀಸಲತಿಯಿಂದ ನಮಗೆ ಅನ್ಯಾಯವಾಗುತ್ತದೆ ಎಂದು ಬಂಜಾರ, ಭೋವಿ, ಕೊರಚ, ಕೊರಮ ಸಮುದಾಯಗಳು ಆಕ್ರೋಶ ವ್ಯಕ್ತಪಡಿಸಿದ್ದವು.

ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ 101 ಜಾತಿಗಳನ್ನು ಐದು ಗುಂಪುಗಳಾಗಿ ವರ್ಗೀಕರಿಸಿ, ಲಭ್ಯ ಶೇ.17 ಮೀಸಲಾತಿಯನ್ನು ಸುಪ್ರೀಂಕೋರ್ಟ್ ಮಾನದಂಡಗಳ ಅನ್ವಯ ಹಂಚಿಕೆ ಮಾಡುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ನೇತೃತ್ವದ ಏಕಸದಸ್ಯ ಆಯೋಗ, ಆರು ಶಿಫಾರಸುಗಳನ್ನೂ ಮಾಡಿತ್ತು. ಅಲ್ಲದೆ ಆಯೋಗವು ಸುಮಾರು 1,765 ಪುಟಗಳ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲಿಸಿತ್ತು.

ಧರ್ಮಸ್ಥಳದಲ್ಲಿನ ಅತ್ಯಾಚಾರ, ಕೊಲೆ ಪ್ರಕರಣಗಳ ವಿರುದ್ಧದ ಹೋರಾಟ ಹತ್ತಿಕ್ಕುವ ಷಡ್ಯಂತ್ರ



ಮೈಸೂರಿನ ಚಿಕ್ಕ ಗಡಿಯಾರ ವೃತ್ತದಲ್ಲಿ ಧರ್ಮಸ್ಥಳದಲ್ಲಿನ ಅತ್ಯಾಚಾರ, ಹತ್ಯೆಗಳ ವಿರುದ್ಧ ನಡೆಯುತ್ತಿರುವ ನ್ಯಾಯಬದ್ಧ ಹೋರಾಟದ ಹಳಿ ತಪ್ಪಿಸಲು ಧರ್ಮದ ಹೆಸರು ಬಳಸುತ್ತಿರುವ ಮತಾಂಧ ಶಕ್ತಿಗಳ ವಿರುದ್ಧ ಪ್ರಗತಿಪರ ಸಂಘಟನೆಗಳು ಪ್ರತಿಭಟಿಸಿದವು.

ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ ಆರೋಪ

ಮೈಸೂರು, ಸೆ.10(ಬಿಎಲ್‌ಯು)– ಧರ್ಮಸ್ಥಳದಲ್ಲಿ ನಡೆದಿರುವ ಅತ್ಯಾಚಾರ, ಕೊಲೆಗಳ ವಿರುದ್ಧದ ಹೋರಾಟವನ್ನು ಹತ್ತಿಕ್ಕುವ ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ ಎಂದು ಮೈಸೂರಿನ ಒಡನಾಡಿ ಸೇವಾ ಸಂಸ್ಥೆ ಸಂಸ್ಥಾಪಕ ಸ್ಟ್ಯಾನ್ಲಿ ಆರೋಪಿಸಿದರು.

ನಗರದ ಚಿಕ್ಕ ಗಡಿಯಾರ ವೃತ್ತದಲ್ಲಿ ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅತ್ಯಾಚಾರ, ಕೊಲೆಗಳ ವಿರುದ್ಧ ನಡೆಯುತ್ತಿರುವ ನ್ಯಾಯಬದ್ಧ ಹೋರಾಟವನ್ನು ಹಳಿ ತಪ್ಪಿಸಲು ಧರ್ಮದ ಹೆಸರು ಬಳಸುತ್ತಿರುವ ಮತಾಂಧ ಶಕ್ತಿಗಳ ವಿರುದ್ಧದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಧರ್ಮಸ್ಥಳದ ಸೌಜನ್ಯ ಪರವಾಗಿ ಪ್ರತಿಭಟನೆ ನಡೆಸುತ್ತಿದ್ದೇವೆ. ಆದರೆ ಮತಾಂಧ ಶಕ್ತಿಗಳು ತನಿಖೆಯ ದಿಕ್ಕನ್ನೆ ಬದಲಾಯಿಸುತ್ತಿದ್ದಾರೆ ಎಂದು ಆಪಾದಿಸಿದರು.

ಸೌಜನ್ಯ ಪ್ರಕರಣದಲ್ಲಿ ಬಂಧಿತನಾಗಿ, ಬಳಿಕ ಖುಲಾಸೆಗೊಂಡ ಸಂತೋಷ್ ರಾವ್ ನಿರಪರಾಧಿ. ಆದರೆ ದೇವಸ್ಥಾನಕ್ಕೆ ಬಂದ ಆತನನ್ನು ಜೈಲಿಗೆ ಕಳುಹಿಸಿದರು. ಈ ಮೂಲಕ ಅತ್ಯಾಚಾರಿಯನ್ನು ಬಚಾವ್ ಮಾಡಿದ್ದಾರೆ ಎಂದು ಸ್ಟ್ಯಾನ್ಲಿ ದೂರಿದರು.

ಧರ್ಮಸ್ಥಳದ ಬಸ್ ನಿಲ್ದಾಣದ ಸಿಸಿಟಿವಿಯನ್ನು ನಾಶ ಮಾಡಲಾಗಿದೆ. ಸೌಜನ್ಯಳ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ಹಾಗೂ ಪೊಲೀಸರು ನಿಷ್ಪಕ್ಷಪಾತ ವರದಿ ನೀಡಿಲ್ಲ. ಸಾಕ್ಷಿಗಳನ್ನು ಸಂರಕ್ಷಣೆ ಮಾಡುವಲ್ಲಿ ಪೊಲೀಸರು ವಿಫಲರಾಗಿದ್ದಾರೆ. ಈ ಬಗ್ಗೆ ಸಿಬಿಐಗೆ ಪತ್ರ ಬರೆದು ವಿವರಣೆ ನೀಡಿದರೆ, ಸರ್ಕಾರ ಅದನ್ನು ಬಚ್ಚಿಟ್ಟಿದೆ ಎಂದು ದೂರಿದರು.

ಶಿಕ್ಷೆಯಿಂದ ತಪ್ಪಿಸಿಕೊಳ್ಳಲು ಪ್ರಭಾವಿಗಳು ವ್ಯವಸ್ಥಿತ ಪಿತೂರಿ ನಡೆಸುತ್ತಿದ್ದಾರೆ. ಇದನ್ನೆಲ್ಲಾ ಮೀರಿ ಆರೋಪಿಗಳಿಗೆ ಶಿಕ್ಷೆ ಆಗುತ್ತದೆ ಎಂಬ ವಿಶ್ವಾಸ ಹೊಂದಿದ್ದೇವೆ. ಈ ಮೂಲಕ ಸೌಜನ್ಯ ಕೊಲೆ ಪ್ರಕರಣ ತಾರ್ಕಿಕ ಅಂತ್ಯ ಕಾಣುತ್ತದೆ ಎಂದು ಸ್ಟ್ಯಾನ್ಲಿ ವಿಶ್ವಾಸ ವ್ಯಕ್ತಪಡಿಸಿದರು.

ಸೌಜನ್ಯ ಮೇಲೆ ಅತ್ಯಾಚಾರ ಮಾಡಿದ ಪ್ರಕರಣದ ಬಗ್ಗೆ ಮರು ತನಿಖೆಗೆ ಆಕೆಯ ತಾಯಿ ಸೆರಗೊಡ್ಡಿ ಕೇಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸರ್ಕಾರ ಮರು ತನಿಖೆಗೆ ಆದೇಶಿಸಬೇಕು ಎಂದು ಆಗ್ರಹಿಸಿದರು.

ಯಾರೆಲ್ಲಾ ಸೌಜನ್ಯ ಪರವಾಗಿ ಹೋರಾಟ ನಡೆಸುತ್ತಾರೋ ಅವರನ್ನೆ ಹತ್ತಿಕ್ಕುವ ಕೆಲಸ ನಡೆಯುತ್ತಿದೆ. ಆದರೆ ನಾವು ಇಂತಹ ಕುತಂತ್ರಕ್ಕೆ ಹೆದರುವುದಿಲ್ಲ. ಸತ್ಯಪರವಾದ ನಮ್ಮ ಹೋರಾಟಕ್ಕೆ ಎಲ್ಲರೂ ಕೈಜೋಡಿಸಬೇಕು. ಧರ್ಮಸ್ಥಳದಲ್ಲಿ ಅತ್ಯಾಚಾರಗಳು, ಕೊಲೆ ಪ್ರಕರಣಗಳ ಬಗ್ಗೆ ಸಾಕ್ಷಿ ಹೇಳಲು ಬಂದವರಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಸ್ಟ್ಯಾನ್ಲಿ ಒತ್ತಾಯಿಸಿದರು.

ಇದೇ ವೇಳೆ ಮಾತನಾಡಿದ ಸಾಮಾಜಿಕ ಹೋರಾಟಗಾರ ಉಗ್ರನರಸಿಂಹಗೌಡ, ಧರ್ಮಸ್ಥಳದಲ್ಲಿ ನಿತ್ಯ ಅನ್ನ ದಾಸೋಹ ನಡೆಯುತ್ತದೆ ಎಂದು ಪ್ರಶಂಸೆ ವ್ಯಕ್ತಪಡಿಸುತ್ತಾರೆ. ಆದರೆ ಧರ್ಮಸ್ಥಳಕ್ಕೆ ಹೋದವರು ಕಾಣಿಕೆ ಹಾಕಿ ಬರುತ್ತಾರೆ. ಈ ಮೂಲಕ ಕೆರೆಯ ನೀರನ್ನು ಕೆರೆಗೆ ಚೆಲ್ಲುತ್ತಿದ್ದಾರೆ ಎಂದು ಹೇಳಿದರು.

ಧರ್ಮಸ್ಥಳ ಸ್ವಸಹಾಯ ಸಂಘದಲ್ಲಿ ಸಾಲ ತೆಗೆದುಕೊಂಡ ಅನೇಕರು ಆತ್ಮಹತ್ಯೆಗೆ ಶರಣಾಗಿದ್ದಾರೆ. ಆದರೆ ಇಂತಹ ಪ್ರಕರಣಗಳನ್ನು ಮುಚ್ಚಿಡಲಾಗುತ್ತಿದೆ ಎಂದು ಆಪಾದಿಸಿದರು. ಪ್ರೊ.ಸಬೀಹಾ ಗೌಡ, ಪ್ರೊ.ಕಾಳಚೆನ್ನೇಗೌಡ, ಸವಿತಾ ಪ.ಮಲ್ಲೇಶ್, ಪತ್ರಕರ್ತ ಗುರುರಾಜ್, ಸುಶೀಲ, ಹೊಸಕೋಟೆ ಬಸವರಾಜು, ಮರಂಕಯ್ಯ, ಶಂಭುಲಿಂಗಸ್ವಾಮಿ, ಲತಾ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ನೇಪಾಳದಲ್ಲಿ 120 ವರ್ಷಗಳಷ್ಟು ಹಳೆಯ ಏಷ್ಯಾದ ಅತಿದೊಡ್ಡ ಅರಮನೆ ಸಿಂಹ ದರ್ಬಾರ್‌ಗೆ ಬೆಂಕಿ

ಕಠ್ಮಂಡು, ಸೆ.10–ಭಾರತದ ನೆರೆಯ ರಾಷ್ಟ್ರ ನೇಪಾಳ ಯುವ ದಂಗೆಗೆ ಹೊತ್ತಿ ಉರಿಯುತ್ತಿದೆ. ಸತತ 3ನೇ ದಿನವೂ ನೇಪಾಳ ಕುದಿಯುತ್ತಿದೆ. ನೇಪಾಳದ ಯುವ ಪ್ರತಿಭಟನಾಕಾರರು ಸರ್ಕಾರವನ್ನೇ ಉರುಳಿಸಿದ್ದಾರೆ. ಅಧಿಕೃತ ಮಾಹಿತಿಯಂತೆ 25 ಮಂದಿ ಹಿಂಸಾಚಾರಕ್ಕೆ ಪ್ರಾಣ ಕಳೆದುಕೊಂಡಿದ್ದು, 633 ಮಂದಿ ಗಾಯಗೊಂಡಿದ್ದಾರೆ. ಹೋರಾಟದ ಕಿಚ್ಚಿಗೆ ನೇಪಾಳ ಪ್ರಧಾನಿ ಚಕೆಪಿ ಶರ್ಮಾ ಓಲಿ ಪ್ರಧಾನಿ ಹುದ್ದೆಯನ್ನೇ ತ್ಯಜಿಸಿದ್ದಾರೆ. ಅಧ್ಯಕ್ಷ ರಾಮಚಂದ್ರ ಪೌಡೆಲ್ ಕೂಡ ರಾಜೀನಾಮೆ ಸಲ್ಲಿಸಿದ್ದಾರೆ.

ಅಧ್ಯಕ್ಷರ ಭವನ, ಪ್ರಧಾನಿ ನಿವಾಸ, ಸಂಸತ್ ಭವನ, ಮಾಜಿ ಪಿಎಂ ಪ್ರಚಂಡ್ ಮನೆ, ಸಚಿವರ ನಿವಾಸಗಳನ್ನು ಗುರಿಯಾಗಿಸಿ ಕಲ್ಲು ತೂರಾಟ ನಡೆಸಿದ್ದಾರೆ. ಇದೇ ವೇಳೆ ವರ್ಷವಿಡೀ ಪ್ರವಾಸಿಗರಿಂದ ತುಂಬಿರುತ್ತಿದ್ದ ಏಷ್ಯಾದ ಅತಿದೊಡ್ಡ ಅರಮನೆ 'ಸಿಂಹ ದರ್ಬಾರ್'ಗೂ ಉದ್ರಿಕ್ತರು ಬೆಂಕಿ ಹಚ್ಚಿದ್ದಾರೆ. ಅರಮನೆ ಧಗಧಗಿಸಿದ್ದು, ಭಾರೀ ಪ್ರಮಾಣದ ಸಂಪತ್ತು ನಷ್ಟವಾಗಿದೆ.

ಸುಮಾರು 120 ವರ್ಷಗಳ ಇತಿಹಾಸ ಹೊಂದಿರುವ ಹಾಗೂ ಏಷ್ಯಾದ ಅತಿದೊಡ್ಡ ಅರಮನೆಯಾದ 'ಸಿಂಹ ದರ್ಬಾರ್' 1903ರಲ್ಲಿ ನೇಪಾಳದ ಪ್ರಧಾನಿಯ ಅಧಿಕೃತ ನಿವಾಸವಾಗಿ ನಿರ್ಮಿಸಲಾಗಿತ್ತು. ಬಳಿಕ ಐತಿಹಾಸಿಕ ಅರಮನೆಯಾಗಿ ಗುರುತಿಸಿಕೊಂಡಿದ್ದ ಈ ಅರಮನೆಯನ್ನು ಪ್ರವಾಸಿ ತಾಣವಾಗಿಯೂ ಮಾಡಲಾಗಿತ್ತು. ಇದೀಗ ಉದ್ರಿಕ್ತರ ಗುಂಪು ಬೆಂಕಿ ಹಚ್ಚಿದ್ದಲ್ಲದೇ ಇದ್ದಬದ್ದ ವಸ್ತುಗಳೆಲ್ಲವನ್ನು ಲೂಟಿ ಮಾಡಿದೆ.

ಸೆ.13ರಂದು ಮೈಸೂರಿಗೆ ಮುಖ್ಯಮಂತ್ರಿ



ಮೈಸೂರು, ಸೆ.10(ಬಿಎಲ್‌ಯು)– ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೆ.13ರಂದು ಮೈಸೂರಿಗೆ ಆಗಮಿಸುತ್ತಿದ್ದಾರೆ. ಅಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಟು 10.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ಮೈಸೂರಿನ ವರುಣ ಕೆರೆ ಪಕ್ಕದಲ್ಲಿರುವ ಶ್ರೀ ಶಿವರಾತ್ರಿ ರಾಜೇಂದ್ರ ನಗರದಲ್ಲಿ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘ ನಿರ್ಮಿಸಿರುವ ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ ಹಾಗೂ ಸಂಘದ ಕಚೇರಿಯನ್ನು ಸಿದ್ದರಾಮಯ್ಯ ಉದ್ಘಾಟಿಸುವರು. ಸಂಜೆ 4 ಗಂಟೆಗೆ ಮೈಸೂರು ತಾಲೂಕು ಭುಗತಗಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಲೋಕಾರ್ಪಣೆ ಮಾಡುವರು. ನಂತರ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಗಗನಚುಕ್ಕಿಗೆ ಭೇಟಿ ನೀಡಿ 'ಗಗನಚುಕ್ಕಿ ಜಲಪಾತೋತ್ಸವ'ವನ್ನು ಉದ್ಘಾಟಿಸುವರು. ಬಳಿಕ ರಸ್ತೆ ಮೂಲಕ ಅವರು ಬೆಂಗಳೂರಿಗೆ ಮರಳುವರು.

ಭಾರೀ ಹೆಬ್ಬಾವು ರಕ್ಷಣೆ



ಮೈಸೂರು ತಾಲೂಕಿನ ವರಕೋಡು ಬಳಿ ಹೊಲದಲ್ಲಿ ರಕ್ಷಿಸಲ್ಪಟ್ಟ ಹೆಬ್ಬಾವು.

ಮೈಸೂರು, ಸೆ.10(ಎಂಟಿವೈ)– ನವಿಲೊಂದನ್ನು ನುಂಗಿ ಮುಂದೆ ಸಾಗಲಾಗದೇ ಹೊಲದಲ್ಲೇ ಮಲಗಿದ್ದ ಹೆಬ್ಬಾವನ್ನು ಉರಗ ಸಂರಕ್ಷರು ರಕ್ಷಿಸಿ, ಅರಣ್ಯ ಪ್ರದೇಶಕ್ಕೆ ಸುರಕ್ಷಿತವಾಗಿ ಬಿಡುಗಡೆ ಮಾಡಿದ್ದಾರೆ. ಮೈಸೂರು ತಾಲೂಕಿನ ವರಕೋಡು ಗ್ರಾಮದ ಬಿಂಗಿಹಳ್ಳದ ಬಳಿ ಹೊಲದಲ್ಲಿ ಬುಧವಾರ ಬೆಳಗ್ಗೆ ಹೆಬ್ಬಾವು ಮಲಗಿತ್ತು. ಇದನ್ನು ಕಂಡ ಗ್ರಾಮಸ್ಥರು ಅದೇ ಗ್ರಾಮದ ಉರಗ ಸಂರಕ್ಷಕ ನಿತೇಶ್ ಗೌಡ ಅವರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಆನಂದ್ ಅವರೊಂದಿಗೆ ಬಂದು ಹಳ್ಳದಲ್ಲಿದ್ದ ಹೆಬ್ಬಾವನ್ನು ರಕ್ಷಿಸಿದ್ದಾರೆ. ಈ ವೇಳೆ ಹಾವು ತಾನು ನುಂಗಿದ್ದ ನವಿಲನ್ನು ಕಕ್ಕಿದೆ. ಕೊನೆಗೆ ಅದನ್ನು ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಸುರಕ್ಷಿತವಾಗಿ ಬಿಡುಗಡೆ ಮಾಡಲಾಗಿದೆ. ರಕ್ಷಿಸಲ್ಪಟ್ಟ ಈ ಹೆಬ್ಬಾವು 9 ಅಡಿ ಉದ್ದ, 53 ಕೆಜಿ ತೂಕವಿತ್ತು ಎನ್ನಲಾಗಿದೆ.

ಬಡ್ತಿ, ಬ್ಯಾಕ್‌ಲಾಗ್ ಹುದ್ದೆಯಲ್ಲಿ ಒಳಮೀಸಲಾತಿ ನೀಡದಿದ್ದರೆ ಸೆ.14ರಿಂದ ಮತ್ತೆ ಹೋರಾಟ



ಮೈಸೂರಿನ ರೋಟರಿ ಸಭಾಂಗಣದಲ್ಲಿ ಸಾಮಾಜಿಕ ನ್ಯಾಯಪರ ವೇದಿಕೆಯಿಂದ 'ಒಳಮೀಸಲಾತಿಯ ಒಳಸುಳಿಗಳು' ವಿಚಾರ ಸಂಕಿರಣ ನಡೆಯಿತು.

ಭಾಸ್ಕರ್‌ಪ್ರಸಾದ್ ಎಚ್ಚರಿಕೆ

ಮೈಸೂರು, ಸೆ.10(ಎಂಕೆ)– ಪರಿಶಿಷ್ಟ ಜಾತಿ ಒಳ ಮೀಸಲಾತಿಯಲ್ಲಿ ಆದಿ ಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ (ಎಕೆಎಡಿಎಎ) ಕುರಿತ ಗೊಂದಲ ಪರಿಹರಿಸಿ, ಬಡ್ತಿ ಮತ್ತು ಬ್ಯಾಕ್‌ಲಾಗ್ ಹುದ್ದೆಯಲ್ಲಿ ಒಳ ಮೀಸಲಾತಿ ಕಲ್ಪಿಸದಿದ್ದರೆ ಸೆ.14 ರಿಂದ ರಾಜ್ಯವ್ಯಾಪ್ತಿ 2ನೇ ಹಂತದ ಹೋರಾಟ ನಡೆಸಲಾಗುವುದು ಎಂದು ಸಾಮಾಜಿಕ ಹೋರಾಟಗಾರ ಬಿ.ಆರ್.ಭಾಸ್ಕರ್ ಪ್ರಸಾದ್ ಎಚ್ಚರಿಕೆ ನೀಡಿದರು.

ನಗರದ ರೋಟರಿ ಸಭಾಂಗಣದಲ್ಲಿ ಸಾಮಾಜಿಕ ನ್ಯಾಯಪರ ವೇದಿಕೆ ವತಿಯಿಂದ ಆಯೋಜಿಸಿದ್ದ 'ಒಳಮೀಸಲಾತಿಯ ಒಳಸುಳಿಗಳು' ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿ ಹಂಚಿಕೆಯಲ್ಲಾಗಿರುವ ಅನ್ಯಾಯದ ವಿರುದ್ಧ ಹೋರಾಟವನ್ನು ಕೈ ಬಿಡುವ ಮಾತೇ ಇಲ್ಲ. ಅಲೆಮಾರಿ ಸಮುದಾಯಗಳ ಸೇರಿಸಿಕೊಂಡು ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ರಾಜಕೀಯ ಅಧಿಕಾರಕ್ಕಾಗಿ ಕುತ್ತಿಗೆ ಹಿಸುಕುವ ಕೆಲಸ ಮಾಡಲಾಗುತ್ತಿದೆ. ಒಳ ಮೀಸಲಾತಿ ಹಂಚಿಕೆ ಸಂಬಂಧ ಆರೋಗ್ಯಪೂರ್ಣವಾಗಿ ಚರ್ಚೆ ಮಾಡುತ್ತೇವೆ. ಆದರೆ ದಾಳಿ ಮಾಡ್ತಿವಿ, ಚಪ್ಪಲಿ ಹಾರ ಹಾಕ್ತೀವಿ ಅಂದರೆ ನಾವು ಬಿಡಲ್ಲ. ಮಾದಿಗರ ಇತಿಹಾಸ ಗೊತ್ತಿಲ್ಲದೆ ಮಾತನಾಡಲಾಗುತ್ತಿದೆ. ಬಡ್ತಿಯಲ್ಲಿ ಇಲ್ಲ. ಬ್ಯಾಕ್‌ಲಾಗ್‌ನಲ್ಲಿ ಇಲ್ಲ. ರಾಜಕೀಯದಲ್ಲಿ ಒಳ ಮೀಸಲಾತಿ ಇಲ್ಲ ಎನ್ನುವುದು ಸರಿಯಲ್ಲ. ಆರ್ಥಿಕವಾಗಿ, ರಾಜಕೀಯವಾಗಿ ಒಳ ಮೀಸಲಾತಿ ಜಾರಿ ಅವಶ್ಯವಾಗಿದೆ ಎಂದರು.

ವಿಚಾರ ಸಂಕಿರಣ ಉದ್ಘಾಟಿಸಿದ ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮಾತನಾಡಿ, ನಮ್ಮ ಹೋರಾಟ ಯಾರ ವಿರೋಧವಾಗಿಯೂ ಅಲ್ಲ. ನಮ್ಮ ಹಕ್ಕುಗಳಿಗಾಗಿ ಹೋರಾಟ ಮಾಡುತ್ತಿದ್ದೇವೆ. ಒಳ ಮೀಸಲಾತಿಯಲ್ಲಿ ಆದಿ ಕರ್ನಾಟಕ, ಆದಿ ದ್ರಾವಿಡ, ಆದಿ ಆಂದ್ರ ಕುರಿತಂತೆ ಪರಿಶೀಲನೆಯಾಗಬೇಕಿದೆ ಎಂದು ಒತ್ತಾಯಿಸಿದರು. ಚಿತ್ರದುರ್ಗ ಕೋಡಿಹಳ್ಳಿ ಆದಿಜಾಂಬವ ಬೃಹನ್ಮಠದ ಶ್ರೀ ಷಡಕ್ಷರಿ ಮುನಿಸ್ವಾಮೀಜಿ, ಮುಖಂಡರಾದ ಕೋಡಿಹಳ್ಳಿ ಸಂತೋಷ್, ಕುಮಾರ್, ಪ್ರಕಾಶ್, ಮಂಜುನಾಥ್, ರವಿಕುಮಾರ್ ಮತ್ತಿತರರಿದ್ದರು.



ತಾಲೂಕು ಮಟ್ಟಕ್ಕೆ ಆಯ್ಕೆ...

ಸಾರ್ವಜನಿಕ ಶಿಕ್ಷಣ ಇಲಾಖೆ ನಡೆಸಿದ ವಲಯ ಮಟ್ಟದ ಕ್ರೀಡಾಕೂಟದಲ್ಲಿ ಮಹಾವೀರ ವಿದ್ಯಾಮಂದಿರ ಶಾಲೆಯ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಲಯನ್ಸ್‌ನಿಂದ ಮೈಸೂರಿನ ಮೃಗಾಲಯದ 30 ಪ್ರಾಣಿ, ಪಕ್ಷಿಗಳ ದತ್ತು ಸ್ವೀಕಾರ



ಮೈಸೂರು, ಸೆ.10– ಅಂತರಾಷ್ಟ್ರೀಯ ಲಯನ್ ಸಂಸ್ಥೆ ಜಿಲ್ಲೆ317G ಲಯನ್ಸ್ ಕ್ಲಬ್ ಮೈಸೂರ್ ಪ್ಯಾಲೇಸ್ ಸಿಟಿ ಮತ್ತು ಪ್ಯಾಲೇಸ್ ಸಿಟಿ ಕ್ವೀನ್ಸ್ ಕ್ಲಬ್ ವತಿಯಿಂದ ಮೈಸೂರು ಮೃಗಾಲಯದಲ್ಲಿ 4.50 ಲಕ್ಷ ನೀಡಿ 30 ಪ್ರಾಣಿ/ ಪಕ್ಷಿಗಳ ದತ್ತು ಸ್ವೀಕಾರ ಮಾಡಲಾಯಿತು.

ಈ ಕಾರ್ಯಕ್ರಮಕ್ಕೆ 317G ಜಿಲ್ಲಾ ಗರ್ವನರ್ ಲಯನ್ ಕೆ.ಎಲ್. ರಾಜಶೇಖರ, ಡಾ.ಕೃಷ್ಣೆಗೌಡ, 1ನೇ ಉಪ ಜಿಲ್ಲಾ ಗರ್ವನರ್ ಎಸ್ ಮತ್ತಿ ದೇವಕುಮಾರ, ಜಿಎಂಟಿ ಕೋ ಆರ್ಡಿನೇಟರ್ ಜಯಕುಮಾರ್, ಡಿಸಿಎಸ್ ಸಿದ್ದೇಗೌಡರ, ಪಿಎಸ್‌ಟಿ ಫೋರಂ ಎಡಿಎಸ್‌ಸಿ ಜಯರಾಮ್, ಪ್ರಾಂತೀಯ ಅಧ್ಯಕ್ಷ ಹೊನ್ನರಾಜು, ಎಡಿಎಸ್‌ಸಿ ಲೋಕೇಶ್, ನಂದೀಶ್, ಜಿಶ್ ಸಿ ಪ್ರಕಾಶ್, ಡಿ.ಸಿ.ಮೋಹನ್, ಕ್ಲಬ್ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆಯ ಅಶ್ವಥ್, ರಾಣಿ ಲಕ್ಷ್ಮಣ್, ಸುಗುಣ ಹೊನ್ನರಾಜು, ಕವಿತಾ ಪ್ರಕಾಶ್, ಶಶಿಕಲಾ ಮೋಹನ್ ಜಿವರು ಮೃಗಾಲಯದ ಕಾರ್ಯ ನಿರ್ವಹಕ ನಿರ್ದೇಶಕರಾದ ಪಿ.ಅನುಷಾ ಅವರಿಗೆ ಚೆಕ್ಕನ್ನು ಹಸ್ತಾಂತರಿಸಿದರು. ಈ ವೇಳೆ ಕೆ.ಎಲ್.ರಾಜಶೇಖರ್ ಮಾತನಾಡಿ, ಮೃಗಾಲಯದ ದತ್ತು ಸ್ವೀಕಾರ ಕಾರ್ಯಕ್ರಮವನ್ನು ಸತತ ಐದು ವರ್ಷಗಳಿಂದ ಮಾಡಿಕೊಂಡು ಬರುತ್ತಿದ್ದೇವೆ. ಈ ವರ್ಷವೂ ಸಹ ಪ್ಯಾಲೇಸ್ ಸಿಟಿ ಕ್ಲಬ್ ಮತ್ತು ಪ್ಯಾಲೇಸ್ ಸಿಟಿ ಕ್ವೀನ್ಸ್ ಕ್ಲಬ್ ವತಿಯಿಂದ ಮೃಗಾಲಯದ ಅಧಿಕಾರಿಗಳಿಗೆ ರೂ 4.50ಲಕ್ಷ ದೇಣಿಗೆ ನೀಡುತ್ತಿರುವುದು ಸಂತೋಷ ತಂದಿದೆ ಎಂದು ತಿಳಿಸಿದರು.

ಡಾ.ಎನ್. ಕೃಷ್ಣೆಗೌಡ ಮಾತನಾಡಿ, ಮೂಕ ಪ್ರಾಣಿಗಳಿಗೆ ಆರೋಗ್ಯದ ಉಪಚಾರ ಮನುಷ್ಯನಿಂದ ಮಾತ್ರ ಸಾಧ್ಯ. ಈ ಕಾರ್ಯಕ್ರಮಕ್ಕೆ ಎಲ್ಲಾ ಸದಸ್ಯರು ಕೈ ಜೋಡಿಸಿರುವುದು ಹಾಗೂ ಹೆಚ್ಚಿನ ದೇಣಿಗೆ 2 ಲಕ್ಷ ರೂ ನೀಡಿರುವ ಲಯನ್ ಜಯಕುಮಾರರವರಿಗೆ ಅಭಿನಂದನೆಗಳನ್ನು ತಿಳಿಸಿದರು. ಮೃಗಾಲಯದ ಅಧಿಕಾರಿಗಳು ದೇಣಿಗೆ ಪಡೆದು ಲಯನ್ಸ್ ಕ್ಲಬ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಜಾತಿ ಸಮೀಕ್ಷೆಯಲ್ಲಿ ಒಕ್ಕಲಿಗ ಎಂದೇ ನಮೂದಿಸಿ

ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೂಚನೆ



ಮೈಸೂರಿನಲ್ಲಿ ಜಾತಿಗಣತಿ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಆದಿಚುಂಚನಗಿರಿ ಮಠದ ಪೀಠಾ ಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಮಾತನಾಡಿದರು.

ಮೈಸೂರು, ಸೆ.10– ರಾಜ್ಯ ಸರ್ಕಾರದಿಂದ ಸೆ.22ರಿಂದ 15 ದಿನಗಳ ಕಾಲ ನಡೆಯುವ ಹಿಂದುಳಿದ ವರ್ಗಗಳ ಆಯೋಗದ ಶೈಕ್ಷಣಿಕ, ಸಾಮಾಜಿಕ, ಹಾಗೂ ಆರ್ಥಿಕ ಸಮೀಕ್ಷೆಯಲ್ಲಿ ಒಕ್ಕಲಿಗ ಜನಾಂಗ ಒಕ್ಕಲಿಗ ಎಂದೇ ನಮೂದಿಸುವಂತೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೂಚಿಸಿದರು.

ಮೈಸೂರಿನ ಹೆಬ್ಬಾಳದ ಆದಿಚುಂಚನಗಿರಿ ಶಾಖಾ ಮಠದಲ್ಲಿ ಜಾತಿಗಣತಿ ಸಂಬಂಧ' ಪೂರ್ವಭಾವಿಯಾಗಿ ಮೈಸೂರು ಜಿಲ್ಲೆಯ ಒಕ್ಕಲಿಗ ಜನಾಂಗದ ಮುಖಂಡರ ಸಭೆಯನ್ನು ಸಾನಿಧ್ಯ ವಹಿಸಿ ಅವರು ಮಾತನಾಡಿದರು. ಮುಂಬರುವ ಸಮೀಕ್ಷೆಯಲ್ಲಿ ಜಾತಿ ಕಲಂನಲ್ಲಿ ಒಕ್ಕಲಿಗ ಎಂದೇ ನಮೂದಿಸಬೇಕು. ಉಪ ಜಾತಿ ಕಲಂನಲ್ಲಿ ಉಪಪಂಗಡ ಬಗ್ಗೆ ಮಾಹಿತಿ ಇದ್ದರೆ ನಮೂದಿಸಬೇಕು ಇಲ್ಲದಿದ್ದರೆ ಒಕ್ಕಲಿಗ ಎಂದೇ ನಮೂದಿಸಬೇಕು ಎಂದು ತಿಳಿಸಿದರು.

ತಮ್ಮ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿಗಳ ಬಗ್ಗೆ ನಿಖರವಾದ ಮಾಹಿತಿಯನ್ನು ನೀಡಬೇಕು. ಪ್ರತಿ ಗ್ರಾಮಕ್ಕೂ ಈ ಮಾಹಿತಿಯನ್ನು ನೀಡುವ ಜವಾಬ್ದಾರಿಯನ್ನು ಮುಖಂಡರು ಸ್ವಯಂ ಪ್ರೇರಿತವಾಗಿ ಮಾಡಬೇಕು ಎಂದು ಸೂಚಿಸಿದರು. ಈ ಸಮೀಕ್ಷೆಯಲ್ಲಿ ಪ್ರತಿಯೊಬ್ಬರು ಪಾಲ್ಗೊಳ್ಳುವಂತೆ ಕ್ರಮವಹಿಸಬೇಕೆಂದು ಹೇಳಿದರು ಈ ಜವಾಬ್ದಾರಿಯನ್ನು ಆಯಾ ಗ್ರಾಮ, ತಾಲೂಕು, ಜಿಲ್ಲಾ ಮುಖಂಡರು ವಹಿಸಿಕೊಂಡು ಸಮೀಕ್ಷೆಗೆ ಸಹಕರಿಸುವಂತೆ ಕೋರಿದರು. ಈ ಸಂದರ್ಭದಲ್ಲಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಶ್ರೀ ಪ್ರಸನ್ನನಾಥ ಸ್ವಾಮೀಜಿ, ಶಾಸಕ ಜಿ.ಡಿ.ಹರೀಶ್‌ಗೌಡ, ಒಕ್ಕಲಿಗರ ಮೀಸಲಾತಿ ಹೋರಾಟ ಸಮಿತಿಯ ಆಡಿಟರ್ ನಾಗರಾಜ್, ಮೈಸೂರು ಹಾಗೂ ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಮರಿಸ್ವಾಮಿ, ಗೌರವಾಧ್ಯಕ್ಷ ಅಲತೂರು ಜಯರಾಮ್, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಕೆ.ವಿ.ಶ್ರೀಧರ್, ಸಿ.ಜಿ. ಗಂಗಾಧರ್, ಎಂ.ಬಿ.ಮಂಜೇಗೌಡ, ಜಿಲ್ಲಾ ಒಕ್ಕಲಿಗ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಈ.ಚೇತನ್, ಉಪಾಧ್ಯಕ್ಷ ಮಹೇಶ್, ಖಜಾಂಚಿ ಆರ್.ಲೋಕೇಶ್, ನಿರ್ದೇಶಕರಾದ ಪ್ರಶಾಂತ್‌ಗೌಡ, ಕೆ.ಪಿ.ನಾಗಣ್ಣ, ಬಿ.ಪಿ. ಬೋರೇಗೌಡ, ಎ.ರವಿ, ಗುರುರಾಜ್, ಯಳಂದೂರು ಕುಮಾರ್, ಮೈಸೂರು ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಎಸ್. ಅರುಣ್‌ಕುಮಾರ್, ನಗರಪಾಲಿಕೆ ಮಾಜಿ ಸದಸ್ಯರಾದ ಪ್ರೇಮ ಶಂಕರೇಗೌಡ, ಮುಖಂಡರಾದ ಕಾವೇರಿ ಆಸ್ಪತ್ರೆಯ ಡಾ. ಚಂದ್ರಶೇಖರ್, ಡಾ.ಎಸ್. ಪಿ.ಯೋಗಣ್ಣ, ಡಾ.ಸುಶ್ರೂತ್‌ಗೌಡ, ಹೆಚ್.ಕೆ.ರಮೇಶ್, ಸವಿತಾಗೌಡ, ಹೇಮಾ ನಂದೀಶ್, ಯೋಗೇಶ್, ಕುಮಾರ್, ಕೀಲಾರ ಜಯರಾಮ್ ಇನ್ನಿತರರು ಉಪಸ್ಥಿತರಿದ್ದರು.

ದೇಶ - ವಿದೇಶ

ಭವಿಷ್ಯದ ದಾಳಿಯಲ್ಲಿ ಹಮಾಸ್ ನಾಯಕರ ಹತ್ಯೆ: ಇಸ್ರೇಲ್

ಜೆರುಸಲೇಮ್: ಕತಾರ್‌ನ ಮೇಲೆ ಮಂಗಳವಾರ ನಡೆದ ವೈಮಾನಿಕ ದಾಳಿಯಲ್ಲಿ, ಹಮಾಸ್ ನಾಯಕರು ಹತ್ಯೆಯಾಗಿರದಿದ್ದಲ್ಲಿ, ಮುಂದಿನ ಬಾರಿ ನಡೆಯುವ ದಾಳಿಯಲ್ಲಿ ನಾವು ಯಶಸ್ಸು ಸಾಧಿಸುತ್ತೇವೆ' ಎಂದು ಅಮೆರಿಕದಲ್ಲಿನ ಇಸ್ರೇಲ್ ರಾಯಭಾರಿ ಯೆಚಿಯಲ್ ಲೀಟೆರ್ ಹೇಳಿದ್ದಾರೆ. ಗಾಜಾದಲ್ಲಿ ನಡೆಯುತ್ತಿರುವ ಕದನ ವಿರಾಮ ಪ್ರಯತ್ನಗಳಿಗೆ ಈ ದಾಳಿ ಅಡ್ಡಿಯಾಗಲಿದೆ ಎಂಬ ಆತಂಕದ ನಡುವೆಯೇ, ಅವರು ಈ ಹೇಳಿಕೆ ನೀಡಿದ್ದಾರೆ. ಸದ್ಯ ನಾವು ಕೆಲವರ ಟೀಕೆಗೆ ಗುರಿಯಾಗಿರಬಹುದು. ಉತ್ತಮ ಉದ್ದೇಶಕ್ಕಾಗಿ ಇಸ್ರೇಲ್ ಬದಲಾವಣೆ ಬಯಸುತ್ತಿದೆ' ಎಂದು 'ಫಾಕ್ಸ್ ನ್ಯೂಸ್'ಗೆ ನೀಡಿರುವ ಸಂದರ್ಶನದಲ್ಲಿ ಅವರು ಹೇಳಿದ್ದಾರೆ. ಕತಾರ್‌ನಲ್ಲಿ ನೆಲೆಸಿರುವ ಹಮಾಸ್ ನಾಯಕರನ್ನು ಗುರಿಯಾಗಿಸಿ ರಾಜಧಾನಿ ದೋಹಾ ಮೇಲೆ ಇಸ್ರೇಲ್ ಪಡೆಗಳು ಮಂಗಳವಾರ ವೈಮಾನಿಕ ದಾಳಿ ನಡೆಸಿದ್ದವು.



ತಂದೆ ಆಸ್ತಿಯಲ್ಲಿ ಪಾಲು ಕೇಳಿದ ಕರಿಷ್ಮಾ ಮಕ್ಕಳು

ನವದೆಹಲಿ: ಬಾಲಿವುಡ್ ನಟಿ ಕರಿಷ್ಮಾ ಕಪೂರ್ ಅವರ ಮಕ್ಕಳಾದ ಸಮೈರಾ ಕಪೂರ್ (20) ಮತ್ತು ಕಿಯಾನ್ ರಾಜ್ ಕಪೂರ್ (15) ಅವರು ಇತ್ತೀಚೆಗೆ ನಿಧನ ಹೊಂದಿದ ತಮ್ಮ ತಂದೆ ಉದ್ಯಮಿ ಸಂಜಯ್ ಕಪೂರ್ ಅವರ 30,000 ಕೋಟಿ ರೂ. ಮೌಲ್ಯದ ಎಸ್ಟೇಟ್‌ನಲ್ಲಿ ಪಾಲು ಕೋರಿ ಪ್ರಿಯಾ ಕಪೂರ್ ವಿರುದ್ಧ ಸಲ್ಲಿಸಿದ್ದ ಮೊಕದ್ದಮೆಗೆ ಸಂಬಂಧಪಟ್ಟಂತೆ ದೆಹಲಿ ಹೈಕೋರ್ಟ್ ಸಮನ್ಸ್ ಜಾರಿ ಮಾಡಿದೆ. ನ್ಯಾಯಮೂರ್ತಿ ಜ್ಯೋತಿಸಿಂಗ್ ನೇತೃತ್ವದ ಪೀಠವು ಸಂಜಯ್ ಕಪೂರ್ ಅವರ ಆಸ್ತಿಗಳ ಮೇಲೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಕ್ಷಣ ಆದೇಶ ಹೊರಡಿಸಲು ನಿರಾಕರಿಸಿತು. ಆದರೆ ಉದ್ಯಮಿ ಸಂಜಯ್ ಕಪೂರ್ ಹೊಂದಿದ್ದ ಆಸ್ತಿಗಳ ಪಟ್ಟಿಯನ್ನು ಸಲ್ಲಿಸುವಂತೆ ಅವರ ಪತ್ನಿ ಪ್ರಿಯಾ ಕಪೂರ್ ಅವರಿಗೆ ಸೂಚಿಸಿತು. ಈ ಪ್ರಕರಣದ ಮುಂದಿನ ವಿಚಾರಣೆ ಅ.9ರಂದು ನಡೆಯಲಿದೆ. ಪ್ರಿಯಾ ಕಪೂರ್ ಆರಂಭದಲ್ಲಿ ಯಾವುದೇ ವಿಲ್ ಅಸ್ತಿತ್ವವನ್ನು ನಿರಾಕರಿಸಿದ್ದಾರೆ ಎಂದು ಕರಿಷ್ಮಾ ಕಪೂರ್ ಅವರ ಅರ್ಜಿಯಲ್ಲಿ ಆರೋಪಿಸಲಾಗಿದೆ, ಸಂಜಯ್ ಅವರ ಎಲ್ಲಾ ಆಸ್ತಿಗಳು ಆರ್ ಕೆ ಫ್ಯಾಮಿಲಿ ಟ್ರಸ್ಟ್ ಅಡಿಯಲ್ಲಿವೆ ಎಂದು ಹೇಳಿದ್ದಾರೆ.



ನೇಪಾಳ ಬಳಿಕ ಈಗ ಫ್ರಾನ್ಸ್‌ನಲ್ಲಿ ಭುಗಿಲೆದ್ದ ಹಿಂಸಾಚಾರ

ಪ್ಯಾರಿಸ್: ನೇಪಾಳದಲ್ಲಿ ಹಿಂಸಾಚಾರದ ಬೆಂಕಿಯ ಕಾವು ಇನ್ನೂ ಕಡಿಮೆಯಾಗಿಲ್ಲ. ಇದರ ಬೆನ್ನಲ್ಲೇ ಫ್ರೆಂಚ್ ರಾಜಧಾನಿ ಪ್ಯಾರಿಸ್ ಕೂಡ ಧಗಧಗಿಸುತ್ತಿದೆ. ಬ್ಲಾಕ್ ಎವೆರಿಥಿಂಗ್ ಆಂದೋಲನದ ನಂತರ ಹೆಚ್ಚಿನ ಸಂಖ್ಯೆಯ ಪ್ರತಿಭಟನಾಕಾರರು ಬೀದಿಗಿಳಿದಿದ್ದಾರೆ. ಪ್ಯಾರಿಸ್‌ನ ಎಲ್ಲೆಡೆ ಬೆಂಕಿ ಹಚ್ಚಿದ್ದಾರೆ. ಪ್ರತಿಭಟನೆ ಹಿನ್ನೆಲೆ ಪೊಲೀಸರು 200 ಪ್ರತಿಭಟನಾಕಾರರನ್ನು ವಶಕ್ಕೆ ಪಡೆದಿದ್ದಾರೆ.

ಪ್ಯಾರಿಸ್‌ನಲ್ಲಿ ಪ್ರತಿಭಟನಾಕಾರರು ಮತ್ತು ಪೊಲೀಸರ ನಡುವೆ ಘರ್ಷಣೆ ಕೂಡ ಕಂಡುಬಂದಿದೆ. ಪ್ರತಿಭಟನಾಕಾರರು ಪ್ಯಾರಿಸ್‌ನ ಅನೇಕ ಸ್ಥಳಗಳಲ್ಲಿ ಬೆಂಕಿ ಇಡಲು ಪ್ರಾರಂಭಿಸಿದರು. ಅಂತಹ ಪರಿಸ್ಥಿತಿಯಲ್ಲಿ ಹಿಂಸಾಚಾರ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಹಾರಿಸಿ 200ಕ್ಕೂ ಹೆಚ್ಚು ಜನರನ್ನು ವಶಕ್ಕೆ ಪಡೆದಿದ್ದಾರೆ.

ಫ್ರೆಂಚ್ ಪ್ರಧಾನಿ ಬೇರೂ ಬಜೆಟ್‌ನಲ್ಲಿ 44 ಬಿಲಿಯನ್ ಯುರೋಗಳನ್ನು, (ಸುಮಾರು 4 ಲಕ್ಷ ಕೋಟಿ ರೂ.) ಉಳಿಸುವ ಯೋಜನೆಯನ್ನು ಮಂಡಿಸಿದ್ದರು. ಇದಕ್ಕಾಗಿ ತೀವ್ರ ಟೀಕೆ ವ್ಯಕ್ತವಾಗಿತ್ತು. ಮತ್ತು ಅವರು ತಮ್ಮ ಅಧಿಕಾರವನ್ನು ಕಳೆದುಕೊಳ್ಳಬೇಕಾಯಿತು. ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ರಕ್ಷಣಾ ಸಚಿವ ಲೆಕೋರ್ನುರನ್ನು ನೂತನ ಪ್ರಧಾನಿಯಾಗಿ ನೇಮಿಸಿದರು.

ರಷ್ಯಾದ 19 ಡ್ರೋನ್‌ಗಳನ್ನು ಹೊಡೆದುರುಳಿಸಿದ ಪೋಲೆಂಡ್

ವಾರ್ಸಾ: ತನ್ನ ವಾಯುಪ್ರದೇಶ ಪ್ರವೇಶಿಸಿದ್ದ ರಷ್ಯಾದ 19 ಡ್ರೋನ್‌ಗಳನ್ನು ಹೊಡೆದುರುಳಿಸಿದ್ದಾಗಿ ಪೋಲೆಂಡ್ ಬುಧವಾರ ಹೇಳಿದೆ. ಈ ಮೂಲಕ ರಷ್ಯಾ ಮತ್ತು ಉಕ್ರೇನ್ ನಡುವೆ ಯುದ್ಧ ಆರಂಭವಾದ ನಂತರ, ನ್ಯಾಟೊ ಸದಸ್ಯ ರಾಷ್ಟ್ರವೊಂದರ ಮೇಲೆ ರಷ್ಯಾ ಪಡೆಗಳು ಇದೇ ಮೊದಲ ಬಾರಿಗೆ ದಾಳಿ ನಡೆಸಿದಂತಾಗಿದೆ. ಪೋಲೆಂಡ್ ಪ್ರಧಾನಿ ಡೊನಾಲ್ಡ್ ಟಸ್ಕ್ ಈ ಬಗ್ಗೆ ಮಾಹಿತಿ ನೀಡಿದ್ದು, ಭದ್ರತೆಗೆ ಬೆದರಿಕೆ ಒಡ್ಡಿದ ಡ್ರೋನ್‌ಗಳನ್ನು ಈಗಾಗಲೇ ಹೊಡೆದುರುಳಿಸಿದ್ದೇವೆ. ಇದಕ್ಕೆ ತಕ್ಕ ತಿರುಗೇಟು ನೀಡಲಾಗುವುದು. ಈ ಸಂಬಂಧ ನ್ಯಾಟೊ ಸದಸ್ಯ ರಾಷ್ಟ್ರಗಳೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದಿದ್ದಾರೆ. ರಾತ್ರೋರಾತ್ರಿ ರಷ್ಯಾದ ಡ್ರೋನ್‌ಗಳು ಪೋಲೆಂಡ್ ವಾಯುಪ್ರದೇಶಕ್ಕೆ ಲಗ್ಗೆ ಇಟ್ಟಿದ್ದವು. 10ಕ್ಕೂ ಹೆಚ್ಚು ಡ್ರೋನ್‌ಗಳನ್ನು ಹೊಡೆದುರುಳಿಸಲಾಯಿತು. ರಷ್ಯಾ ಡ್ರೋನ್‌ಗಳ ದಾಳಿಯಿಂದಾಗಿ ಪೋಲೆಂಡ್‌ನ ವಿವಿಧ ವಿಮಾನ ನಿಲ್ದಾಣಗಳ ಕಾರ್ಯಾಚರಣೆಗಳಿಗೆ ಸ್ವಲ್ಪ ಕಾಲ ಅಡ್ಡಿಯುಂಟಾಗಿತ್ತು. ವಾರ್ಸಾದಲ್ಲಿರುವ ದೇಶದ ಅತ್ಯಂತ ದೊಡ್ಡ ವಿಮಾನ ನಿಲ್ದಾಣ ಕೂಡ ಕೆಲ ಗಂಟೆಗಳು ಕಾರ್ಯಾಚರಣೆ ಸ್ಥಗಿತಗೊಳಿಸಿ ಮತ್ತೆ ಆರಂಭಿಸಿತು.



ಇಂದು ಮಾರಿಷಸ್ ಪ್ರಧಾನಿ ಜತೆ ಮೋದಿ ದ್ವಿಪಕ್ಷೀಯ ಸಭೆ

ನವದೆಹಲಿ: ಭಾರತ ಪ್ರವಾಸದಲ್ಲಿರುವ ಮಾರಿಷಸ್ ಪ್ರಧಾನಿ ಡಾ.ನವೀನ್ ಚಂದ್ರ ರಾಮಗೂಲಂ ಅವರಿಗೆ ನಾಳೆ (ಸೆ.11)ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಲೋಕಸಭಾ ಕ್ಷೇತ್ರ ಮತ್ತು ಪ್ರಸಿದ್ಧ ಕಾಶಿ ವಿಶ್ವನಾಥ ದೇವಾಲಯದ ನೆಲೆಯಾದ ವಾರಣಾಸಿಯಲ್ಲಿ ಹಾಗೂ ಇತರ ಸಾಂಸ್ಕೃತಿಕ ಮತ್ತು ಧಾರ್ಮಿಕ ತಾಣಗಳಲ್ಲಿ ಆತಿಥ್ಯ ವಹಿಸಲಿದ್ದಾರೆ. ವಾರಣಾಸಿಯಲ್ಲಿ ತಮ್ಮ ಕಾರ್ಯಕ್ರಮಗಳ ನಂತರ ಮೋದಿ ಡೆಹ್ರಾಡೂನ್‌ಗೆ ತೆರಳಲಿದ್ದಾರೆ. ಅಲ್ಲಿ ಅವರು ಉತ್ತರಾಖಂಡದ ಪ್ರವಾಹಪೀಡಿತ ಪ್ರದೇಶಗಳ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ. ನಂತರ ಅಧಿಕಾರಿಗಳೊಂದಿಗೆ ಉನ್ನತ ಮಟ್ಟದ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಪ್ರಧಾನಮಂತ್ರಿಗಳ ಕಚೇರಿ ತಿಳಿಸಿದೆ.

ಪಿಎಂಒ ಹೇಳಿಕೆ ಪ್ರಕಾರ, ವಾರಣಾಸಿಯಲ್ಲಿ ಪ್ರಧಾನಿ ಮೋದಿ, ಮಾರಿಷಸ್ ಪ್ರಧಾನಿ ರಾಮಗೂಲಂ ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಸಭೆಯಲ್ಲಿ ಉಭಯ ನಾಯಕರು ಅಭಿವೃದ್ಧಿ ಪಾಲುದಾರಿಕೆ ಮತ್ತು ಸಾಮರ್ಥ್ಯ ವೃದ್ಧಿಯ ಮೇಲೆ ನಿರ್ದಿಷ್ಟವಾಗಿ ಗಮನಹರಿಸಿ, ಸಹಕಾರದ ಸಂಪೂರ್ಣ ವರ್ಣಪಟಲವನ್ನು ಪರಿಶೀಲಿಸಲಿದ್ದಾರೆ ಎಂದು ಪಿಎಂಒ ಬುಧವಾರ ಪ್ರಕಟಣೆಯಲ್ಲಿ ತಿಳಿಸಿದೆ.



ಅರಣ್ಯಾಧಿಕಾರಿ, ಸಿಬ್ಬಂದಿಯಿಂದ ಕಾಫಿ, ಏಲಕ್ಕಿ ತೋಟ ನಾಶ

ಕೊಡಗು ಜಿಲ್ಲಾ ರೈತ ಹೋರಾಟ ಸಮಿತಿ ಆಕ್ರೋಶ

● ತೋಟ ನಾಶ ಮಾಡಿದವರ ವಜಾಗೊಳಿಸಲು ಆಗ್ರಹ ● ನೊಂದ ರೈತನಿಗೆ 30 ಲಕ್ಷ ರೂ. ಪರಿಹಾರಕ್ಕೆ ಒತ್ತಾಯ ● ಬೇಡಿಕೆ ಈಡೇರದಿದ್ದರೆ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ



ಸುದ್ದಿಗೋಷ್ಠಿಯಲ್ಲಿ ರೈತ ಹೋರಾಟ ಸಮಿತಿ ಅಧ್ಯಕ್ಷ ಸುರೇಶ್ ಚಕ್ರವರ್ತಿ ಮಾತನಾಡಿದರು.

ಮಡಿಕೇರಿ,ಸೆ.10– ಮುಕ್ಕೋಡ್ಲು ಗ್ರಾಮದ ನಿವಾಸಿಯೊಬ್ಬರ ಎರಡು ಎಕರೆ ಕಾಫಿ ಮತ್ತು ಏಲಕ್ಕಿ ತೋಟವನ್ನು ಅರಣ್ಯ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳು ನಾಶ ಗೊಳಿಸಿರುವ ಅಮಾನವೀಯ ಘಟನೆ ಬೆಳಕಿಗೆ ಬಂದಿದ್ದು, ಕೊಡಗು ಜಿಲ್ಲಾ ರೈತ ಹೋರಾಟ ಸಮಿತಿ ಈ ಬಗ್ಗೆ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ರೈತ ಹೋರಾಟ ಸಮಿತಿ ಅಧ್ಯಕ್ಷ ಸುರೇಶ್ ಚಕ್ರವರ್ತಿ, ಮುಕ್ಕೋಡ್ಲುವಿನ ಕಾಳ ಚಂಡ ನಾಣಿಯಪ್ಪ ಎಂಬುವರ ತೋಟವನ್ನು ಸಂಪೂರ್ಣ ನಾಶಗೊಳಿಸಲು ಕಾರಣರಾ ಗಿರುವ ಅರಣ್ಯ ಅಧಿಕಾರಿಗಳಾದ ದರ್ಶಿನಿ ಮತ್ತು ದಿನೇಶ್ ಅವರನ್ನು ಸೆ.26ರೊಳ ಗಾಗಿ ಕೆಲಸದಿಂದ ವಜಾಗೊಳಿಸಬೇಕು ಮತ್ತು ನೊಂದ ಬೆಳೆಗಾರನಿಗೆ 30 ಲಕ್ಷ ರೂ. ಪರಿಹಾರವನ್ನು ನೀಡುವಂತೆ ಆಗ್ರಹಿಸಿದ್ದಾರೆ. ನಿಗದಿತ ಗಡುವಿನ ಒಳಗೆ ನಮ್ಮ ಈ ಬೇಡಿಕೆಯನ್ನು ಈಡೇರಿಸಲು ಅಗತ್ಯ ಕ್ರಮ ಕೈಗೊಳ್ಳದಿದ್ದಲ್ಲಿ ಮಡಿಕೇರಿಯ ಅರಣ್ಯ ಭವನಕ್ಕೆ ಮುತ್ತಿಗೆ ಹಾಕಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ನೆಲ ಸಮವಾದ ತೋಟ: ಕಳೆದ ಆಗಸ್ಟ್ 18ರಂದು ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ಮುಕ್ಕೋಡ್ಲುವಿನ ಕಾಳಚಂಡ ನಾಣಿಯಪ್ಪ ಅವರು ತೋಟ ಮಾಡಿಕೊಂಡಿರುವ ಜಾಗವನ್ನು ದೇವಕಾಡು ಅರಣ್ಯ ಎಂದು ತಿಳಿಸಿ ಸಂಪೂರ್ಣ ನಾಶ ಗೊಳಿಸಿರುವುದಾಗಿ ತಿಳಿಸಿದರು. ನಾಣಿಯಪ್ಪ ಅವರು ಮುಕ್ಕೋಡ್ಲುವಿನ ಸರ್ಕಾರಿ ಪೈಸಾರಿ ಜಾಗದಲ್ಲಿ ಏಲಕ್ಕಿ, ಕಾಫಿ ತೋಟವನ್ನು ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ತಮ್ಮ ತೋಟ ಪೈಸಾರಿಯಾಗಿರುವ ಹಿನ್ನೆಲೆ ಇವರು ಇದನ್ನು ಮಂಜೂರು ಮಾಡಿಕೊಡು ವಂತೆ 1991 ರಲ್ಲಿ ಫಾರಂ ನಂ.51ರಲ್ಲಿ ಮತ್ತು 2018ರಲ್ಲಿ ಫಾರಂ ನಂ.53ರಲ್ಲಿ ಅರ್ಜಿಯನ್ನು ಸಲ್ಲಿಸಿದ್ದಾರೆ. ಇವರ ತೋಟ ಸರ್ವೇ ನಂ.33/2 ರಲ್ಲಿದ್ದು, ಇದರ ಪಹಣಿಯಲ್ಲಿ ಪೈಸಾರಿ ಎಂದಿದೆ ಹೊರತು ಅರಣ್ಯ ಎಂದು ನಮೂದಾಗಿಲ್ಲ. ಹೀಗಿದ್ದೂ ಇವರ ಜಾಗದಲ್ಲಿನ ಕೃಷಿಯನ್ನು ನಾಶ ಮಾಡಲು ಅರಣ್ಯ ಇಲಾಖೆಗೆ ಅಧಿಕಾರ ವನ್ನು ನೀಡಿದವರು ಯಾರು ಎಂದು ಸುರೇಶ್ ಚಕ್ರವರ್ತಿ ಪ್ರಶ್ನಿಸಿದರು.

ಸದ್ದಿಲ್ಲದೆ ಇಲಾಖೆಯಿಂದ ಸರ್ವೇ: ಪ್ರಸ್ತುತ ಸೋಮವಾರಪೇಟೆ ತಾಲೂಕು ವ್ಯಾಪ್ತಿಯಲ್ಲಿ 'ಸಿ ಮತ್ತು ಡಿ' ಜಮೀನಿನ ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಮಸ್ಯೆ ಬಗೆಹರಿಕೆಗೆ ಕಂದಾಯ ಮತ್ತು ಅರಣ್ಯ ಇಲಾಖೆ ಜಂಟಿ ಸರ್ವೇ ನಡೆಸಬೇಕು. ಆದರೆ ಅರಣ್ಯ ಇಲಾಖೆ ಇಂತಹ ಸೂಚನೆಗಳನ್ನು ಬದಿಗೊತ್ತಿ ಜಿಲ್ಲೆಯ ತಣ್ಣೀಮಾನಿ, ಭಾಗ ಮಂಡಲ ಮೊದಲಾದೆಡೆಗಳಲ್ಲಿ ಸರ್ವೇ ಕಾರ್ಯ ವನ್ನು ನಡೆಸುತ್ತಿರುವುದಾಗಿ ತಿಳಿಸಿದರಲ್ಲದೇ ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು.

ಸಿ ಮತ್ತು ಡಿ ದರ್ಜೆಯ ಜಮೀನುಗಳನ್ನು ಗುರುತಿಸುವ ಮತ್ತು ಸರ್ವೇ ಕಾರ್ಯಕ್ಕಾಗಿ ವಿಶೇಷಾಧಿಕಾರಿಯಾಗಿ ರೇಣುಕಾಂಬ ಎಂಬು ವರನ್ನು ಸರ್ಕಾರ ನಿಯುಕ್ತಿಗೊಳಿಸಿದೆ. ನಿಯಮದಂತೆ ಸರ್ವೇ ನಡೆಸುವ ಆಯಾ ಪಂಚಾಯಿತಿ ವ್ಯಾಪ್ತಿಯ ಬೆಳೆಗಾರರಿಗೆ ಪೂರ್ವ ಭಾವಿ ಮಾಹಿತಿಯನ್ನು ನೀಡಬೇಕು. ಆದರೆ ಇಂತಹ ಯಾವುದೇ ಸೂಚನೆಗಳನ್ನು ನೀಡದೆ ಸರ್ವೇ ಕಾರ್ಯ ನಡೆಸಲಾಗುತ್ತಿದೆ. ಅರಣ್ಯ ಜಾಗ ಎನ್ನುವ ಕಾರಣ ಹೇಳಿ ಇದೀಗ ಮುಕ್ಕೋಡ್ಲುವಿನ ನಾಣಿಯಪ್ಪ ಅವರ ತೋಟವನ್ನೇ ಅರಣ್ಯ ಇಲಾಖೆ ನಾಶ ಮಾಡಿರುವುದಾಗಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಸ್ಪಂದಿಸದ ಸರ್ಕಾರ: ಸಿ ಮತ್ತು ಡಿ ಜಮೀನನ್ನು ಅರಣ್ಯವನ್ನಾಗಿ ಪರಿವರ್ತಿಸುವುದಕ್ಕೆ ಮತ್ತು ಈ ಕುರಿತ ಸೆಕ್ಷನ್ 4 ಸರ್ವೇ ಕಾರ್ಯಕ್ಕೆ ಬೆಳೆಗಾರರ ತೀವ್ರ ವಿರೋಧವಿದೆ. ಸಮಸ್ಯೆ ಯನ್ನು ಬಗೆಹರಿಸಿ ಕೊಡುವಂತೆ ರೈತ ಹೋರಾಟ ಸಮಿತಿ ಈಗಾಗಲೆ ಬೃಹತ್ ಸ್ವರೂಪದ ಹೋರಾಟಗಳನ್ನು ಮಡಿಕೇರಿ, ಸೋಮವಾರಪೇಟೆಯಲ್ಲಿ ನಡೆಸಿದೆ. ಆದರೂ ಇದಕ್ಕೆ ಸರ್ಕಾರದ ಮಟ್ಟದಲ್ಲಿ ಸೂಕ್ತ ಸ್ಪಂದನ ದೊರಕಿಲ್ಲ. ಇದಕ್ಕೆ ಬದ ಲಾಗಿ ಸಿ ಮತ್ತು ಡಿ ಜಮೀನುಗಳಲ್ಲಿ ಕೃಷಿ ನಡೆಸುತ್ತಿರುವ ಸಣ್ಣ ಬೆಳೆಗಾರರ ಮೇಲೆ ನಿರಂತರ ಕಿರುಕುಳ ನಡೆಯುತ್ತಿರುವುದಾಗಿ ಆರೋಪಿಸಿದರು. ಸೋಮವಾರಪೇಟೆ ತಾಲೂಕಿನ ಬಹಳಷ್ಟು ಬೆಳೆಗಾರರು ಸಿ ಮತ್ತು ಡಿ ಭೂಮಿಯಲ್ಲಿ ಅರ್ಧ, ಒಂದು ಏಕರೆ ತೋಟಗಳನ್ನು ಮಾಡಿಕೊಂಡು ಬದುಕು ಕಟ್ಟಿಕೊಂಡಿದ್ದಾರೆ. ಪ್ರಸ್ತುತ ಸಿ ಮತ್ತು ಡಿ ಜಾಗ ಅರಣ್ಯ ಭೂಮಿ ಎನ್ನುವ ಕಾರಣ ಗಳ ಹಿನ್ನೆಲೆ, ಬೆಳೆಗಾರರಿಗೆ ಸರ್ಕಾರದ ಯಾವುದೇ ಪರಿಹಾರವಾಗಲಿ, ಸೌಲಭ್ಯಗ ಳಾಗಲಿ ದೊರಕುತ್ತಿಲ್ಲ ಎಂದು ಸುರೇಶ್ ಚಕ್ರವರ್ತಿ ಬೇಸರ ವ್ಯಕ್ತಪಡಿಸಿದರು.

ಕಣ್ಣೀರಿಟ್ಟ ಬೆಳೆಗಾರ: ಸಂತ್ರಸ್ತ ಬೆಳೆಗಾರ ಮುಕ್ಕೋಡ್ಲುವಿನ ಕಾಳಚಂಡ ನಾಣಿಯಪ್ಪ ಅವರು ತಮಗೊದಗಿದ ದುರ್ಗತಿಯ ಬಗ್ಗೆ ಮಾಹಿತಿ ನೀಡುತ್ತಾ ಕಣ್ಣೀರಿಟ್ಟರು. ಪತ್ನಿ ಮತ್ತು ನಾನು ಇಬ್ಬರೆ ಮನೆ ಯಲ್ಲಿರುವುದು. ಪೈಸಾರಿ ಜಾಗದಲ್ಲಿರುವ ನಮ್ಮ ತೋಟಕ್ಕೆ ಬಂದ ಅರಣ್ಯ ಅಧಿ ಕಾರಿಗಳು, ಈ ಜಾಗ ದೇವರ ಕಾಡಾಗಿದ್ದು ಅರಣ್ಯ ಇಲಾಖೆಗೆ ಸೇರಿದೆ ಎಂದು ತಿಳಿಸಿ ತೆರಳಿದ್ದರು. ಎರಡು ದಿನಗಳ ಬಳಿಕ ಮತ್ತೆ ಏಕಾಏಕಿ ತೋಟಕ್ಕೆ ಆಗಮಿಸಿದ ಇವರು ಕಾಫಿ ಗಿಡಗಳು ಮತ್ತು ಫಸಲು ಭರಿತ ಏಲಕ್ಕಿ ಗಿಡಗಳನ್ನು ಸಂಪೂರ್ಣ ಕಡಿದು ಹಾಕಿದರು ಎಂದು ನೊಂದು ನುಡಿದರು.

ಸುದ್ದಿಗೋಷ್ಠಿಯಲ್ಲಿ ರೈತ ಹೋರಾಟ ಸಮಿತಿಯ ಭಾಗಮಂಡಲ ಹೋಬಳಿ ಅಧ್ಯಕ್ಷ ಹೊಸೂರು ಗಿರೀಶ್, ಸಂಘದ ಜಿಲ್ಲಾ ನಿರ್ದೇಶಕ ನಾಗಂಡ ಭವಿನ್, ಮುಕ್ಕೋಡ್ಲು ಗ್ರಾಮದ ಸಜನ್ ನಂದೀರ, ಓಡಿಯಂಡ ಸುಜನ್ ಉಪಸ್ಥಿತರಿದ್ದರು.

ವಿರಾಜಪೇಟೆಯಲ್ಲಿ ವಾರ್ಡ್‌ಗಳ ಅವೈಜ್ಞಾನಿಕ ಪುನರ್‌ವಿಂಗಡಣೆ

ಜೆಡಿಎಸ್ ಆರೋಪ, ಕಾನೂನು ಹೋರಾಟದ ಎಚ್ಚರಿಕೆ



ಜೆ.ಡಿ.ಎಸ್ ತಾಲೂಕು ಘಟಕದ ಅಧ್ಯಕ್ಷ ಪಿ.ಎ.ಮಂಜುನಾಥ್ ಮಾತನಾಡುತ್ತಿರುವುದು.

ವಿರಾಜಪೇಟೆ, ಸೆ.10– ವಿರಾಜಪೇಟೆ ಪುರಸಭೆ ವ್ಯಾಪ್ತಿಯಲ್ಲಿ ಅವೈಜ್ಞಾನಿಕವಾಗಿ ವಾರ್ಡ್‌ಗಳ ಪುನರ್‌ವಿಂಗಡಣೆ ಮಾಡ ಲಾಗಿದ್ದು, ಜಿಲ್ಲಾಧಿಕಾರಿಗಳು ಇದನ್ನು ಗಂಭೀರ ವಾಗಿ ಪರಿಶೀಲಿಸಿ ಸರಿಪಡಿಸದಿದ್ದರೆ ಕಾನೂನು ಹೋರಾಟ ನಡೆಸಲಾಗುವುದು ಎಂದು ಜೆ.ಡಿ.ಎಸ್ ತಾಲೂಕು ಘಟಕದ ಅಧ್ಯಕ್ಷ ಪಿ.ಎ.ಮಂಜುನಾಥ್ ಎಚ್ಚರಿಕೆ ನೀಡಿದ್ದಾರೆ.

ವಿರಾಜಪೇಟೆ ಪ್ರೆಸ್‌ಕ್ಲಬ್‌ನಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪಟ್ಟಣದ ನೆಹರು ನಗರವನ್ನು 1 ಮತ್ತು 2 ಎಂದು ವಿಭಾಗ ಮಾಡಲಾಗಿದೆ ಅದೇ ರೀತಿ ವಿದ್ಯಾನಗರವನ್ನು ಕೂಡ 1 ಮತ್ತು 2 ಭಾಗಗಳಾಗಿ ವಿಂಗಡಿಸಿ ದ್ದಾರೆ. ಆದರೆ ಪಟ್ಟಣದ ಅತಿ ದೊಡ್ಡ ಕ್ಷೇತ್ರ ವಾದ ಗಾಂಧಿನಗರದ ಒಂದು ಭಾಗವನ್ನು ಗೌರಿಕೆರೆ ವಾರ್ಡ್‌ಗೆ ಸೇರ್ಪಡೆಗೊಳಿಸಿ ದ್ದಾರೆ. ಈ ಸೇರ್ಪಡೆ ದುರುದ್ದೇಶಪೂರಕ ವಾಗಿದ್ದು, ಜಿಲ್ಲಾಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಗಾಂಧಿನಗರ ವನ್ನು ಕೂಡ ವಾರ್ಡ್ 1 ಮತ್ತು 2 ಎಂದು ವಿಭಾಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ರೀತಿಯ ವಾರ್ಡ್ ಬದಲಾವಣೆಗ ಳಿಂದ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸ್ಥಳೀಯರಿಗೆ ತಮ್ಮ ಅಧಿಕೃತ ದಾಖ ಲಾತಿಗಳು ತಿದ್ದುಪಡಿ ಮಾಡುವ ಅನಿವಾರ್ಯತೆ ಉಂಟಾಗಲಿದೆ. ವಾರ್ಡ್ ವಿಂಗಡಣೆಯಲ್ಲಿ ಸ್ಥಳೀಯ ಸಂಸ್ಥೆಗೆ ಪ್ರತಿ ಬಾರಿ ಖಾಯಂ ಆಗಿ ಆಯ್ಕೆಯಾಗಿ ಬರುತ್ತಿರುವ ಜನಪ್ರತಿ ನಿಧಿಗಳು ಮುಂದಿನ ಚುನಾವಣೆಯಲ್ಲಿ ತಮ್ಮ ಗೆಲುವಿಗೆ ಅನುಕೂಲವಾಗುವಂತೆ ವಾರ್ಡ್ ವಿಂಗಡಣೆ ಮಾಡಿಸಿಕೊಳ್ಳುವಲ್ಲಿ ಸಫಲರಾಗಿದ್ದಾರೆ ಎಂದು ಆಪಾದಿಸಿದ್ದಾರೆ.

ಪಟ್ಟಣದಲ್ಲಿ ಹೊರಜಿಲ್ಲೆ ಹಾಗೂ ಹೊರ ರಾಜ್ಯಗಳಿಂದ ಬಂದಿರುವ ಕಾರ್ಮಿಕರು ಮತ್ತು ವ್ಯಾಪಾರಿಗಳ ಹೆಸರನ್ನು ಅನಧಿಕೃತ ವಾಗಿ ಮತದಾರರ ಪಟ್ಟಿಗೆ ಸೇರಿಸಲಾಗಿದೆ. ಇವರುಗಳು ತಮ್ಮ ಸ್ವರಾಜ್ಯದಲ್ಲಿ ಮತದಾನ ನಡೆಯುವಾಗ ಇಲ್ಲಿಂದ ಅಲ್ಲಿಗೆ ತೆರಳಿ ಮತದಾನ ಮಾಡಿ ಬರುವುದನ್ನು ಖುದ್ದು ಗಮನಿಸಿದ್ದೇವೆ. ಇನ್ನು ಕೆಲವರು ವಾರ್ಡ್‌ಗ ಳಿಂದ ಮನೆಗಳನ್ನು ಸ್ಥಳಾಂತರ ಮಾಡಿದಾಗ ಒಂದು ಕಡೆಯ ಮತದಾನದ ಪಟ್ಟಿಯಿಂದ ಹೆಸರನ್ನು ತೆಗೆಯದೆ 2 ಕಡೆ ತಮ್ಮ ಹೆಸರನ್ನು ದಾಖಲಿಸಿಕೊಂಡು 2 ಕಡೆಗಳಲ್ಲಿ ಮತದಾನ ಮಾಡುವ ಪ್ರವೃತಿಯನ್ನು ನಾವು ಕಳೆದ ಚುನಾವಣೆಯಲ್ಲಿ ಖುದ್ದು ಗಮನಿಸಿದ್ದೇವೆ. ಅದರಿಂದಲೇ ನಾನು ಗಾಂಧಿನಗರ ವಾರ್ಡ್ ನಲ್ಲಿ ಮೂರು ಮತಗಳ ಅಂತರದಿಂದ ಸೋಲಬೇಕಾಯಿತು ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಈ ಅಕ್ರಮಗಳಲ್ಲಿ ವಿರಾಜಪೇಟೆ ತಾಲೂಕು ಕಚೇರಿಯ ಚುನಾವಣಾ ವಿಭಾಗದ ಅಧಿಕಾರಿ ಗಳೂ ಶಾಮೀಲಾಗಿದ್ದಾರೆ. ಇಂತಹ ಅಧಿಕಾರಿ ಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇ ಕೆಂದು ಆಗ್ರಹಿಸಿದ್ದಾರೆ. ಗೋಷ್ಠಿಯಲ್ಲಿ ಕಾರ್ಯದರ್ಶಿ ಹರ್ಷ, ತಾಲೂಕು ಉಪಾಧ್ಯಕ್ಷ ಪಾಣತ್ತಲೆ ಸತ್ಯ, ಬಲ್ಲಡ ವಿನೋದ್, ಯುವ ಘಟಕದ ಅಧ್ಯಕ್ಷ ಸೈಫುದ್ದಿನ್ ಉಪಸ್ಥಿತರಿದ್ದರು.

ಸಿದ್ದಾಪುರದಲ್ಲಿ ಕೈಲ್ ಮುಹೂರ್ತ ಹಬ್ಬ ಆಚರಣೆ



ಕೈಲ್ ಮುಹೂರ್ತದಲ್ಲಿ ವಿಜೇತರನ್ನು ಅಭಿನಂದಿಸಲಾಯಿತು.

ಸಿದ್ದಾಪುರ, ಸೆ.10– ಕಾವೇರಿ ಸಂಘದ ವತಿಯಿಂದ ಕೈಲ್ ಮುಹೂರ್ತ ಹಬ್ಬದ ಅಂಗವಾಗಿ 45ನೇ ವರ್ಷದ ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆ ಚೆನ್ನಂಗಿ ಕಾವೇರಿ ಕ್ಲಬ್ ಆವರಣದಲ್ಲಿ ನಡೆಯಿತು. ಸುತ್ತಮುತ್ತಲ ಗ್ರಾಮಗಳಿಂದ ಹಲವು ಸ್ಪರ್ಧಿಗಳು ಗುಂಡು ಹೊಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದರು. ವಾಟೇರಿರ ಕರುಣ್ ಪ್ರಥಮ, ಕಲ್ಲಪ್ಪಂಡ ಶರಣು ದ್ವಿತೀಯ, ಕುಟ್ಟಂಡ ಮದನ್ ತೃತೀಯ ಬಹುಮಾನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮೂಕೊಂಡ ವಿಜು ಸುಬ್ರಮಣಿ ಮಾತನಾಡಿ, ಹಬ್ಬ ಆಚರಣೆಗಳ ಮೂಲಕ ಸಮಾಜ ಬಾಂಧವರು ಒಗ್ಗೂಡುವಿಕೆಯೊಂದಿಗೆ ಸಂಪ್ರದಾಯ ಕ್ರೀಡೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆ, ಸಾಧನೆ ತೋರುತ್ತಿದ್ದಾರೆ. ಕಾವೇರಿ ಕ್ಲಬ್ ಹಲವು ವರ್ಷಗಳಿಂದಲೂ ವಿವಿಧ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು ಮಾದರಿಯಾಗಿ ಮುನ್ನಡೆಯುತ್ತಿದೆ ಎಂದರು.

ಕಾವೇರಿ ಸಂಘದ ಸ್ಥಾಪಕ ಅಧ್ಯಕ್ಷ ಡಾ.ಎ.ಸಿ. ಗಣಪತಿ ಮಾತನಾಡಿ, ಕಳೆದ 45 ವರ್ಷಗಳಿಂದ ಕಾವೇರಿ ಸಂಘ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಪ್ರತಿಭೆಗಳಿಗೆ ಅವಕಾಶ ಕಲ್ಪಿಸುತ್ತಿದೆ. ತೆಂಗಿನಕಾಯಿಗೆ ಗುಂಡು ಹೊಡೆಯುವ ಸ್ಪರ್ಧೆಯಲ್ಲಿ 50ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗ ವಹಿಸಿ ಗುರಿಯೊಂದಿಗೆ ತಮ್ಮ ಸಾಧನೆ ತೋರಿದ್ದಾರೆ. ಸಮಾಜ ಬಾಂಧವರು ಸಂಘಟನೆಯೊಂದಿಗೆ ಸಂಪ್ರದಾಯ ಆಚರಣೆಗಳ ಮೂಲಕ ಪಾಲ್ಗೊಂಡು ಅಭಿವೃದ್ಧಿಯೊಂದಿಗೆ ಮುಂದೆ ಬರಬೇಕೆಂದರು.

ಕಾವೇರಿ ಸಂಘದ ಅಧ್ಯಕ್ಷ ತಕ್ಕಡೆ ಶ್ರೀನಿವಾಸ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಕ್ಯಾಡೆಮಾಡ ಮಿಲನ್ ಸುಬ್ಬಯ್ಯ, ಸಂಘದ ಕಾರ್ಯದರ್ಶಿ ಮಲ್ಲಂಗಡ ಕಿಶೋರ್, ವಕೀಲ ಕೆ.ಜಿ.ಉತ್ತಪ್ಪ, ಗಗನ್ ಕಾರ್ಯಪ್ಪ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಚೇರಂಬಾಣೆ ಆರೋಗ್ಯ ಕೇಂದ್ರಕ್ಕೆ ಡಾ.ಸತೀಶ್ ಕುಮಾರ್ ಭೇಟಿ



ಚೇರಂಬಾಣೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಾ.ಸತೀಶ್ ಕುಮಾರ್ ಅವರು ಭೇಟಿ ನೀಡಿದ್ದರು.

ನಾಪೋಕ್ಲು, ಸೆ.10– ಚೇರಂಬಾಣೆ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಸತೀಶ್ ಕುಮಾರ್ ಭೇಟಿ ನೀಡಿ ಆಡಳಿತಾತ್ಮಕ ಕುಂದುಕೊರತೆಗಳ ಕುರಿತು ಮಾಹಿತಿ ಪಡೆದು ಸಲಹೆ ನೀಡಿದರು.

ಇಲಾಖಾ ನಿಯಮಗಳನ್ನು ಅನುಸರಿಸುವ ಮೂಲಕ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಪ್ರಗತಿ ಸಾಧಿಸುವ ಬಗ್ಗೆ ಸೂಚನೆ ನೀಡಿದರು. ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡುವ ನಿಟ್ಟಿನಲ್ಲಿ ಪ್ರತಿ ತಿಂಗಳು ವೈದ್ಯರು ಮತ್ತು ಸಿಬ್ಬಂದಿಯವರ ಸಭೆ ನಡೆಸಿ ಉತ್ತಮ ಸೇವೆ ಕಲ್ಪಿಸುವಂತೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ.ಪಾರ್ವತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಕೃತಾಂಘ, ತಾಲೂಕು ಆರೋಗ್ಯಾಧಿಕಾರಿ ಕಚೇರಿಯ ಡಾ.ಜಿ. ವಿ.ಶ್ರೀನಾಥ್ ಹಾಗೂ ಡಾ.ರಾಜೀವ್, ಡಾ.ಕಿಶೋರ್, ಪಿಎಚ್ಸಿಓ, ಸಿಎಚ್‌ಓ ಶುಶ್ರೂಷಾಧಿಕಾರಿಗಳು ಮತ್ತು ಆಶಾ ಕಾರ್ಯ ಕರ್ತರು ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಇಂದಿನಿಂದ ಕೌನ್ಸೆಲಿಂಗ್

ಮಡಿಕೇರಿ, ಸೆ.10– ಪ್ರಸಕ್ತ(2025–26) ಸಾಲಿನ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ ಸಹ ಶಿಕ್ಷಕರು, ತತ್ಸಮಾನ ವೃಂದದ ಶಿಕ್ಷಕರು ಮತ್ತು ಪ್ರೌಢಶಾಲಾ ಸಹ ಶಿಕ್ಷಕರು, ದೈಹಿಕ ಶಿಕ್ಷಣ ಶಿಕ್ಷಕರು, ವಿಶೇಷ ಶಿಕ್ಷಕರುಗಳಿಗೆ ಸೆ.11 ಮತ್ತು 12 ರಂದು ಬೆಳಗ್ಗೆ 10 ಗಂಟೆಗೆ ಹೆಚ್ಚುವರಿ ಶಿಕ್ಷಕರ ಮರು ಹೊಂದಾಣಿಕೆ ಬ್ಲಾಕ್ ಮತ್ತು ಜಿಲ್ಲಾ ಹಂತದ ಗಣಕೀಕೃತ ಕೌನ್ಸೆಲಿಂಗ್ ನಗರದ ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು (ಆಡಳಿತ) ಇಲ್ಲಿ ನಡೆಯಲಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಬಸವರಾಜು ತಿಳಿಸಿದ್ದಾರೆ.

ಜಿಲ್ಲಾ ಮಟ್ಟಕ್ಕೆ ಆಯ್ಕೆ



ಪೊನ್ನಂಪೇಟೆ ಸಂತ ಅಂತೋಣಿ ಪ್ರೌಢಶಾಲೆಯ ಬಾಲಕ–ಬಾಲಕಿಯರ ಬ್ಯಾಡ್ಮಿಂಟನ್ ತಂಡವು ತಾಲೂಕು ಮಟ್ಟದ ಪಂದ್ಯಾಟದಲ್ಲಿ ವಿಜೇತರಾಗಿ ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದೆ. ಪವನ್ ಮತ್ತು ಪೌಶಿಕ ಉಸ್ತುವಾರಿಗಳಾಗಿ ತಂಡವನ್ನು ಮುನ್ನಡೆಸಿದರು.

ಬೆಳೆ ರಕ್ಷಣೆಗೆ ಹಾಕಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಗರ್ಭಿಣಿ ಆನೆ ಸಾವು



ಗುಂಡ್ಲುಪೇಟೆ ತಾಲೂಕಿನ ಮಂಗಲ ಗ್ರಾಮದಲ್ಲಿ ಅಕ್ರಮ ವಿದ್ಯುತ್ ತಂತಿ ಸ್ಪರ್ಶಿಸಿ ಸಾವಿಗೀಡಾದ ಗರ್ಭಿಣಿ ಆನೆ.


ಗುಂಡ್ಲುಪೇಟೆ, ಸೆ. 10–ತಾಲೂಕಿನ ಬಂಡೀ ಪುರ ಕಾಡಂಚಿನ ಜಮೀನಿನಲ್ಲಿ ಬೆಳೆಯ ರಕ್ಷಣೆಗೆ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಗರ್ಭಿಣಿ ಆನೆಯೊಂದು ಸಾವಿಗೀಡಾದ ಘಟನೆ ಬೆಳಕಿಗೆ ಬಂದಿದೆ.

ಹಿಮವದ್ ಗೋಪಾಲಸ್ವಾಮಿಬೆಟ್ಟ ವಲಯಕ್ಕೆ ಸೇರಿದ ಕಾಡಂಚಿನ ಮಂಗಲ ಗ್ರಾಮದ ಪುಟ್ಟಬಸಪ್ಪ ಎಂಬುವರು ತಮ್ಮ ಜಮೀನಿನಲ್ಲಿ ಬೆಳೆದಿದ್ದ ಅವರೆಬೆಳೆ ರಕ್ಷಣೆಗೆ ಅಕ್ರಮವಾಗಿ ಹಾಯಿಸಿದ್ದ ವಿದ್ಯುತ್ ತಂತಿ ಸ್ಪರ್ಶಿಸಿದ್ದರಿಂದ ಸುಮಾರು 35 ವರ್ಷ ವಯಸ್ಸಿನ ಹೆಣ್ಣಾನೆ ಸ್ಥಳದಲ್ಲಿಯೇ ಸಾವಿಗೀಡಾಗಿದೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಮಧ್ಯಾಹ್ನ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ಬಂಡೀಪುರ ಹುಲಿ ಯೋಜ ನೆಯ ಕ್ಷೇತ್ರ ನಿರ್ದೇಶಕ ಪ್ರಭಾಕರನ್, ಎಸಿಎಫ್ ಎನ್.ಪಿ.ನವೀನ್‌ಕುಮಾರ್, ಗೋಪಾಲಸ್ವಾಮಿ ಬೆಟ್ಟ ವಲಯದ ಆರ್‌ಎಫ್‌ಓ ಮಲ್ಲೇಶ್, ಅರಣ್ಯ ಇಲಾಖೆಯ ಪಶುವೈದ್ಯ ಡಾ.ಮಿರ್ಜಾ ವಾಸಿಂ ಹಾಗೂ ಸಿಬ್ಬಂದಿ ತೆರಳಿ ಪರಿಶೀಲಿಸಿದರು.

ಈ ಬಗ್ಗೆ ಪ್ರಕರಣ ದಾಖಲಿಸಿದ್ದು ಅಕ್ರಮವಾಗಿ ವಿದ್ಯುತ್ ಹಾಯಿಸಿ ಆನೆಯ ಸಾವಿಗೆ ಕಾರಣನಾದ ಜಮೀನಿನ ಮಾಲೀಕನನ್ನು ಬಂಧಿಸಲಾಗುವುದು. ಆನೆಯ ಮರಣೋತ್ತರ ಪರೀಕ್ಷೆ ನಂತರ ಅಂತ್ಯಸಂಸ್ಕಾರ ಮಾಡಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮಹದೇಶ್ವರ ಕ್ರೀಡಾಂಗಣದಲ್ಲಿ ಆಸನ ನಿರ್ಮಾಣಕ್ಕೆ ಸರ್ಕಾರಕ್ಕೆ 4 ಕೋಟಿ ರೂ. ಪ್ರಸ್ತಾವನೆ ಸಲ್ಲಿಕೆ



ಸಮಾರಂಭವನ್ನು ಉದ್ದೇಶಿಸಿ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡುತ್ತಿರುವುದು.

ಕೊಳ್ಳೇಗಾಲ, ಸೆ10– ಮಹದೇಶ್ವರ ಕ್ರೀಡಾಂ ಗಣದಲ್ಲಿ ಕ್ರೀಡಾಪಟುಗಳು, ಕ್ರೀಡಾಭಿಮಾನಿ ಗಳು ಕುಳಿತು ವೀಕ್ಷಿಸಲು ಅಗತ್ಯ ಆಸನ ನಿರ್ಮಾ ಣಕ್ಕೆ ಸರ್ಕಾರಕ್ಕೆ 4 ಕೋಟಿ ಪ್ರಸ್ತಾವನೆ ಸಲ್ಲಿ ಸಿದ್ದು ಶೀಘ್ರ ಬಿಡುಗಡೆಯಾಗುವ ಸಾಧ್ಯತೆ ಇದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವ ಣಿಗೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಕ್ರೀಡಾಕೂಟ ಸಹಕಾರಿಯಾಗಲಿದೆ ಎಂದು ಕೊಳ್ಳೇಗಾಲ ಮೀಸಲು ವಿಧಾನಸಭಾ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ತಿಳಿಸಿದ್ದಾರೆ.

ಮಹದೇಶ್ವರ ಕಾಲೇಜು ಕ್ರೀಡಾಂಗಣದಲ್ಲಿ ಮಂಗಳವಾರ ಶಿಕ್ಷಣ ಇಲಾಖೆ, ವಿಶ್ವಚೇತನ ಸ್ವತಂತ್ರ ಪದವಿಪೂರ್ವ ಕಾಲೇಜು ವತಿಯಿಂದ ಅಯೋಜಿಸಲಾಗಿದ್ದ ತಾಲೂಕು ಮಟ್ಟದ ಪದವಿಪೂರ್ವ ಕಾಲೇಜುಗಳ ಕ್ರೀಡಾ ಕೂಟಕ್ಕೆ ಚಾಲನೆ ನೀಡಿ ಮಾತನಾಡಿ, ಪಠ್ಯದ ಜೊತೆ ಕ್ರೀಡೆಯೂ ಅಗತ್ಯ. ವಿದ್ಯೆ ಜೊತೆ ಕ್ರೀಡೆಯಲ್ಲೂ ತೊಡಗಿಸಿಕೊಂಡರೆ ಉತ್ತಮ ಕ್ರೀಡಾಪಟುವಾಗಲು ಸಾಧ್ಯ ಎಂದರು.

ಮೂಗೂರಿನ ಕ್ರೀಡಾಧಿಕಾರಿ ಪರಿಶ್ರಮ ದಿಂದಾಗಿ ಚೈತ್ರ ಎಂಬ ವಿದ್ಯಾರ್ಥಿ ಖೋ ಖೋ ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯುತ್ತಮ ಸಾಧನೆಗೈದಿದ್ದಾರೆ. ರೀತಿಯಲ್ಲಿ ಸರ್ಕಾರಿ ಶಾಲೆಯ ಶಿಕ್ಷಕರ ಮಗ ರಾಜ್ಯ ಮಟ್ಟದಲ್ಲಿ ಡಿಸ್ಕಸ್ ಥ್ರೋನಲ್ಲಿ ಸಾಧನೆಗೈದಿರುವುದು ಹೆಮ್ಮೆಯ ವಿಚಾರ. ಕ್ರೀಡಾಕೂಟದಲ್ಲಿ ಯಾರು ಸಹ ಕಾಟಾ ಚಾರಕ್ಕೆ ಪಾಲ್ಗೊಳ್ಳಬಾರದು ಎಂದರು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷೆ ರೇಖಾ ರಮೇಶ್, ಉಪಾಧ್ಯಕ್ಷ ಎ.ಪಿ.ಶಂಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಂದ್ರು, ತಾಲೂಕು ಅಧ್ಯಕ್ಷ ರಾಜೇಂದ್ರ, ವಿಶ್ವಚೇತನ ಸಮೂಹ ವಿದ್ಯಾ ಸಂಸ್ಥೆಗಳ ಕಾರ್ಯದರ್ಶಿ ಪ್ರೇಮಲತಾ ಕೃಷ್ಣಸ್ವಾಮಿ, ಬಿಇಓ ಮಂಜುಳಾ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಜೋಸೆಫ್ ಅಲೆಕ್ಸಾಂಡರ್, ದೈಹಿಕ ಪರಿವೀಕ್ಷಕ ಸ್ಟೀವನ್, ನಟರಾಜು ಇನ್ನಿತರಿದ್ದರು.

ಡಿ.ದೇವರಾಜ ಅರಸು ಕಾಲದಲ್ಲಿ ಕ್ರಾಂತಿಕಾರಿ ಬದಲಾವಣೆ

ಡಿ.ದೇವರಾಜ ಅರಸು ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡ ಉದ್ಘಾಟನೆ



ವಿದ್ಯಾರ್ಥಿನಿಲಯವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು.

ಚಾಮರಾಜನಗರ, ಸೆ.10– ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಕಾಲದಲ್ಲಿ ಕ್ರಾಂತಿಕಾರಿ ಬದಲಾವಣೆ ಆಗಿದೆ ಎಂದು ಎಂಎಸ್‌ಐಎಲ್ ಅಧ್ಯಕ್ಷರು, ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ತಾಲೂಕಿನ ಬೇಡರಪುರ ಗ್ರಾಮದಲ್ಲಿ ನೂತ ನವಾಗಿ ನಿರ್ಮಿಸಿರುವ ಡಿ.ದೇವರಾಜ ಅರಸು ಸಾರ್ವಜನಿಕ ಮಾದರಿ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿನಿಲಯ ಕಟ್ಟಡವನ್ನು ಉದ್ಘಾಟಿಸಿ ಮಾತನಾಡಿದರು. 3.70 ಕೋಟಿ ವೆಚ್ಚದಲ್ಲಿ ಈ ಹಾಸ್ಟೆಲ್ ನಿರ್ಮಿ ಸಲಾಗಿದ್ದು, ಸದ್ಯದಲ್ಲೇ ಮೂಲಸೌಕರ್ಯ ಗಳನ್ನು ಕಲ್ಪಿಸಲಾಗುವುದು ಎಂದರು.

ಇಂದಿರಾಗಾಂಧಿ ಅವರು ದೇಶದ ಪ್ರಧಾನಿ ಯಾಗಿದ್ದಂತಹ ಸಂದರ್ಭದಲ್ಲಿ ಅವರು 20 ಅಂಶಗಳ ಕಾರ್ಯಕ್ರಮಗಳನ್ನು ಜಾರಿಗೆ ತರುವ ಮುಖಾಂತರ ದೇಶದಲ್ಲಿ ಕ್ರಾಂತಿಕಾರಿ ಬದಲಾವಣೆ ಮಾಡಿದರು. ಆ ಕಾರ್ಯ ಕ್ರಮಗಳನ್ನು ರಾಜ್ಯದಲ್ಲಿ ದೇವರಾಜ ಅರಸು ಅವರು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಿದವರ ಪೈಕಿಯಲ್ಲಿ ದೇಶದಲ್ಲಿ ಪ್ರಥಮರಾಗಿದ್ದಾರೆ ಎಂದರು.

ಡಿ.ದೇವರಾಜ ಅರಸು ಶಿಕ್ಷಣದಿಂದಲೇ ದೇಶದ ಅಭಿವೃದ್ಧಿ ಸಾಧ್ಯ ಎಂದು ಮನಗಂಡು ಶಿಕ್ಷಣಕ್ಕೆ ಒತ್ತು ನೀಡಿದರು. ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ರಚನೆ ಮಾಡುವ ಮೂಲಕ ಹಿಂದುಳಿದ ವರ್ಗಗಳ ಜನತೆಗೆ ವರದಾನವಾದರು. ಆ ಕಾಲದಲ್ಲಿ ಕಪ್ಪು ಹಲಗೆ ಯೋಜನೆ ಸೇರಿದಂತೆ ಬೇರೆ ಬೇರೆ ಯೋಜನೆಗಳನ್ನು ಕೊಟ್ಟರು. ಶಾಲಾ ಕೊಠಡಿಗಳೇ ಇರಲಿಲ್ಲ. ಎಲ್ಲವೂ ಮುನಿಸಿ ಪಾಲ್ ಹೈಸ್ಕೂಲ್, ಚಾವಡಿಗಳಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡಲಾಗುತ್ತಿತ್ತು. ನನ್ನ ಕ್ಷೇತ್ರ ದಲ್ಲಿ ಸಾಕಷ್ಟು ಹಾಸ್ಟೆಲ್ ಸೌಲಭ್ಯಗಳಿವೆ. ಎಲ್ಲ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಲಾಗಿದೆ ಎಂದರು.

ಡಿ.ದೇವರಾಜ ಅರಸು ಅವರು ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದಾರೆ. ಇಂತಹ ಅವಕಾಶ ವನ್ನು ವಿದ್ಯಾರ್ಥಿಗಳು ಸದುಪಯೋಗಪಡಿ ಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಪ್ರಾಧಿ ಕಾರ ಅಧ್ಯಕ್ಷ ಹೆಚ್.ವಿ.ಚಂದ್ರು, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿದರು.

ಕಾರ್ಯಕ್ರಮದಲ್ಲಿ ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ಗ್ರಾಪಂ ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷೆ ರಾಜಮ್ಮ, ಸದಸ್ಯ ರವಿ, ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಎಇಇ ಮಹೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಎನ್.ವಿಶ್ವನಾಥ್, ತಾಲೂಕು ಹಿಂದುಳಿದ ಕಲ್ಯಾಣಾಧಿಕಾರಿ ರೇಖಾ, ಗುತ್ತಿಗೆದಾರರ ನರಸಿಂಹಯ್ಯ, ವಾರ್ಡನ್ ಶಿಲ್ಪಶ್ರೀ ಇತರರು ಹಾಜರಿದ್ದರು.

ಚಾ.ನಗರ ನಗರಸಭೆಗೆ ಕೆಎಎಸ್ ಅಧಿಕಾರಿ ನೇಮಿಸಲು ಒತ್ತಾಯಿಸಿ ಪ್ರತಿಭಟನೆ



ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ಇಲ್ಲಿನ ನಗರಸಭೆಗೆ ಕೆಎಎಸ್ ದಕ್ಷ ಅಧಿಕಾರಿ ನೇಮಿಸುವಂತೆ ಒತ್ತಾಯಿಸಿ ವಿವಿಧ ಕನ್ನಡಪರ ಸಂಘಟನೆ ಗಳ ಮುಖಂಡರು ನಗರದ ಭುವನೇಶ್ವರಿ ವೃತ್ತದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಸುರೇಶ್ ವಾಜಪೇಯಿ ಮಾತನಾಡಿ, ಚಾಮರಾಜನಗರ ನಗರಸಭೆಗೆ ರಾಜ್ಯ ಸರ್ಕಾರ, ಜಿಲ್ಲೆಯ ಜನಪ್ರತಿನಿಧಿಗಳು ದಕ್ಷ ಪೌರಾಯು ಕ್ತರನ್ನು ನೇಮಿಸುವಲ್ಲಿ ವಿಫಲವಾಗಿದೆ. ರಾಜ್ಯ ಸರ್ಕಾರ ಕೂಡಲೇ ಚಾಮರಾಜನಗರ ಅಭಿ ವೃದ್ಧಿಯ ದೃಷ್ಟಿಯಿಂದ ಹಿರಿಯ ಶ್ರೇಣಿಯ ಕೆಎಎಸ್ ದಕ್ಷ ಅಧಿಕಾರಿಯನ್ನು ನೇಮಿಸ ಬೇಕು ಎಂದು ಆಗ್ರಹಿಸಿದರು.

ಕರ್ನಾಟಕ ಕರವೇ ಅಧ್ಯಕ್ಷ ಚಾ.ಗು.ನಾಗ ರಾಜ್ ಮಾತನಾಡಿ, ರಾಜ್ಯ ಸರ್ಕಾರ, ಪೌರ ನಿರ್ದೇಶನಾಲಯ ಅಧಿಕಾರಿಗಳು ಚಾಮರಾಜ ನಗರ ಪೌರಾಯುಕ್ತರಾಗಿ ಆಡಳಿತ ನಡೆಸಿ ರುವ ರಾಮದಾಸ್ ಅವರನ್ನು ಜಿಲ್ಲಾಧಿಕಾ ರಿಗಳು ಮಾತ್ರ ಇಲಾಖೆಗೆ ಬಿಡುಗಡೆ ಮಾಡಿ ದರು ಕೂಡ ಯಾವುದೇ ಕ್ರಮಕೈಗೊಂ ಡಿಲ್ಲ. ಶೀಘ್ರವಾಗಿ ನೂತನ ಪೌರಾಯುಕ್ತ ರನ್ನು ನೇಮಿಸಬೇಕು. ಇಲ್ಲದಿದ್ದರೆ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿ, ಪೌರಾ ನಿರ್ದೇಶನಾಲಯ ಕಚೇರಿ ಮುಂಭಾಗ ದಲ್ಲಿ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಯುವಸೇನೆ ಕರ್ನಾಟಕ ಸೇವಾ ಸಂಘದ ನಮ್ಮನೆ ಪ್ರಶಾಂತ ಮಾತನಾಡಿದರು.

ಪ್ರತಿಭಟನೆಯಲ್ಲಿ ಬಂಗಾರನಾಯಕ, ಶ್ರೀನಿವಾಸ, ಸುನೀಲ್, ಗೋಪಾಲ್, ನಾಗಣ್ಣ, ವಿಜಯಕುಮಾರ್, ಸಿದ್ದೇಶ್, ಮಹದೇವ, ಮಂಜು, ಕೃಷ್ಣ ಹಾಜರಿದ್ದರು.

ಹುಲಿ ಪತ್ತೆಗೆ ಕಾರ್ಯಾಚರಣೆ ಆರಂಭ

ಬೋನಿನಲ್ಲಿ ತಮ್ಮನ್ನು ಕೂಡಿ ಹಾಕಿದ್ದರಿಂದ ಎಚ್ಚೆತ್ತ ಅರಣ್ಯ ಇಲಾಖೆ



ಬೊಮ್ಮಲಾಪುರ ಗ್ರಾಮದ ಸಮೀಪ ಹುಲಿ ಪತ್ತೆಗಾಗಿ ಸಾಕಾನೆ ಪಾರ್ಥ ಸಾರಥಿಯ ನೆರವಿನಿಂದ ಕಾರ್ಯಾಚರಣೆ ನಡೆಸಲಾಯಿತು.

ಗುಂಡ್ಲುಪೇಟೆ, ಸೆ.10– ಹುಲಿ ಉಪಟಳ ತಡೆಯಲು ನಿರ್ಲಕ್ಷ್ಯ ತೋರಿದ್ದಾರೆ ಎಂದು ಆಪಾದಿಸಿ ತಮ್ಮನ್ನು ಕಬ್ಬಿಣದ ಬೋನಿನಲ್ಲಿ ಕೂಡಿ ಹಾಕಿದ್ದರಿಂದ ಎಚ್ಚೆತ್ತ ಅರಣ್ಯ ಇಲಾಖೆ ಸಿಬ್ಬಂದಿಗಳು ಬುಧವಾರ ಬೋನಿಟ್ಟಿದ್ದ ಬೊಮ್ಮಲಾಪುರ ಸಮೀಪದ ರೇವಣ್ಣ ಅವರ ಜಮೀನಿನ ಸುತ್ತಮುತ್ತ ಸಾಕಾನೆ ಪಾರ್ಥಸಾರಥಿಯ ಸಹಕಾರ ದೊಂದಿಗೆ ಹುಲಿ ಪತ್ತೆ ಕಾರ್ಯಾಚರಣೆ ಯನ್ನು ಆರಂಭಿಸಿದರು.

ತಾಲೂಕಿನ ಬೊಮ್ಮಲಾಪುರ–ವಡೆಯ ನಪುರ ಗ್ರಾಮದ ನಡುವೆ ಇರುವ ರೇವಣ್ಣ ಜಮೀನಿನ ಸುತ್ತಮುತ್ತ ಕಳೆದ 20ಕ್ಕೂ ಹೆಚ್ಚು ದಿನಗಳಿಂದ ಹುಲಿ ಉಪಟಳ ಹೆಚ್ಚಾಗಿತ್ತು, ಈ ಹಿನ್ನೆಲೆಯಲ್ಲಿ ಬೋನನ್ನು ಅರಣ್ಯ ಇಲಾಖೆ ಸಿಬ್ಬಂದಿ ಗಳು ಇಟ್ಟಿದ್ದರು. ಆದರೂ ಸಹ ಹುಲಿ ಬೋನಿ ನಲ್ಲಿ ಸೆರೆಯಾಗಿರಲಿಲ್ಲ. ಈ ದಿಸೆಯಲ್ಲಿ ಮಂಗಳವಾರ ಸ್ಥಳಕ್ಕೆ ಬಂದಿದ್ದ 13 ಅರಣ್ಯ ಸಿಬ್ಬಂದಿಗಳನ್ನು ಬೋನಿನಲ್ಲಿ ಕೂಡಿ ಹಾಕಿ ಹುಲಿ ಉಪಟಳ ತಪ್ಪಿಸಲು ವಿಫಲರಾಗಿ ದ್ದೀರಿ ಎಂದು ರೈತರು ಪ್ರತಿಭಟನೆ ನಡೆಸಿದ್ದರು.

ಈ ಹಿನ್ನೆಲೆಯಲ್ಲಿ ಎಚ್ಚೆತ್ತ ಅರಣ್ಯ ಇಲಾಖೆ ಸಿಬ್ಬಂದಿಗಳು ಬುಧವಾರ ಸಾಕಾನೆ ಪಾರ್ಥಸಾರಥಿಯ ನೆರವಿನಿಂದ ಜಮೀನಿನ ಸುತ್ತಮುತ್ತ ಹುಲಿ ಹುಡುಕಾಟ ನಡೆಸಿದರು. ಆದರೆ ಹುಲಿಯು ಪತ್ತೆಯಾ ಗಲಿಲ್ಲ ಹುಲಿ ಪತ್ತೆಗಾಗಿ ನಾಳೆಯೂ ಕಾರ್ಯಾ ಚರಣೆ ನಡೆಯಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲದ ಸಂಸ್ಥೆಗೆ ನಿಯಮ ಮೀರಿ ಅನುಮತಿ ಆರೋಪ

ಚಾಮರಾಜನಗರ ಡಿಡಿಪಿಐ ಎತ್ತಂಗಡಿ



ಕೊಳ್ಳೇಗಾಲ, ಸೆ.10– ಕೊಳ್ಳೇಗಾಲದ ಶ್ರೀನಿವಾಸ್ ಟಾಕೀಸ್ ರಸ್ತೆಯಲ್ಲಿ ಇಲ್ಲದ ಅಬ್ದುಲ್ ಕಲಾಂ ಸಂಸ್ಥೆಗೆ ನಿಯಮ ಮೀರಿ ಆದೇಶ ನೀಡಿದ ಹಾಗೂ ಹಲವು ಕರ್ತವ್ಯಲೋಪ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪದ ಹಿನ್ನೆಲೆಯಲ್ಲಿ ಚಾಮರಾಜನಗರ ಡಿಡಿಪಿಐ ರಾಮಚಂದ್ರರಾಜೇ ಅರಸ್ ಅವರನ್ನು ಸ್ಥಳ ನಿಯೋಜನೆ ಮಾಡದೆ ಎತ್ತಂಗಡಿ ಮಾಡಲಾಗಿದೆ.

ಸಾರ್ವಜನಿಕರಿಂದಲೂ ಸಾಕಷ್ಟು ದೂರಿನ ಹಿನ್ನೆಲೆಯಲ್ಲಿ ಸರ್ಕಾರ ಸ್ಥಳ ನಿಯುಕ್ತಿಗೊಳಿಸದೆ, ಅವರ ಸೇವೆ ಹಿಂಪಡೆದು ವರ್ಗಾವಣೆಗೊಳಿಸಿ ಸರ್ಕಾರದ ಅಧೀನ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ ರಾಮಚಂದ್ರಪ್ಪ ಬುಧವಾರ ಸಂಜೆ ಮಹತ್ವದ ಆದೇಶ ಹೊರಡಿಸಿದ್ದಾರೆ.

ಯಾವುದೆ ಅಧಿಕಾರಿ ಕ್ರಿಮಿನಲ್ ಹಾಗೂ ತನಿಖಾ ಹಂತದಲ್ಲಿನ ಅನೇಕ ಪ್ರಕರಣ ಗಳನ್ನು ಎದುರಿಸುತ್ತಿದ್ದರೆ ಅಂತಹ ಅಧಿಕಾರಿಗೆ ಕಾರ್ಯಕಾರಿ ಹುದ್ದೆಗೆ ನಿಯೋಜಿಸ ತಕ್ಕದ್ದಲ್ಲ ಎಂಬ ಸರ್ಕಾರಿ ನಿಯಮದ ಹಿನ್ನೆಲೆ ಹಾಗೂ ರಾಮಚಂದ್ರರಾಜ್ ಅರಸ್ ಅವರ ವಿರುದ್ಧ ಸಾಕಷ್ಟು ದೂರು ಕೇಳಿ ಬಂದಿದ್ದರಿಂದ, ಜೊತೆಗೆ ನಿಯಮಬಾಹಿರ ವಾಗಿ ಶಿಕ್ಷಕರ ವರ್ಗಾವಣೆ, ನಿಯಮಾನುಸಾರ ಶಿಕ್ಷಕರ ನಿಯೋಜನೆ, ಬಡ್ತಿ ಪ್ರಕರಣ ದಲ್ಲಿ ಸಾಕಷ್ಟು ದೂರುಗಳು, ಕರ್ತವ್ಯಲೋಪ ಇಲಾಖಾ ವಿಚಾರಣೆಗಳು ಸೇರಿದಂತೆ ಅನೇಕ ಪ್ರಕರಣಗಳಿರುವ ಹಿನ್ನೆಲೆ ತಕ್ಷಣದಿಂದಲೇ ಡಿಡಿಪಿಐ ಹುದ್ದೆಯ ಸೇವೆಯನ್ನು ಹಿಂಪಡೆದು ಸರ್ಕಾರಕ್ಕೆ ತಕ್ಷಣ ವರದಿ ಮಾಡಿಕೊಳ್ಳುವಂತೆ ಆದೇಶಿಸಲಾಗಿದೆ.

ರಾಷ್ಟ್ರೀಯ ಅರಣ್ಯ ಹುತಾತ್ಮರ ಸ್ಮರಣ ದಿನ

ಚಾಮರಾಜನಗರ: ಅರಣ್ಯ ಇಲಾಖೆಯ ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ವತಿಯಿಂದ ರಾಷ್ಟ್ರೀಯ ಅರಣ್ಯ ಹುತಾತ್ಮರ ಸ್ಮರಣ ದಿನ ಕಾರ್ಯಕ್ರಮವನ್ನು ಸೆ.11 ರಂದು ಬೆಳಿಗ್ಗೆ 9 ಗಂಟೆಗೆ ನಗರದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ಆವರಣದಲ್ಲಿರುವ ಅರಣ್ಯ ಹುತಾತ್ಮರ ಸ್ಮಾರಕದ ಬಳಿ ಹಮ್ಮಿಕೊಳ್ಳಲಾಗಿದೆ. ಚಾಮರಾಜನಗರ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್ ಅಧ್ಯಕ್ಷತೆ ವಹಿಸುವರು. ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಜೆ. ಪ್ರಭಾವತಿ ಇತರರು ಭಾಗವಹಿಸುವರು.

ಅಭಿನಂದನೆ...



ಎಂಸಿಡಿಸಿಸಿ ಬ್ಯಾಂಕಿನ ನಿರ್ದೇಶಕರಾಗಿ ಆಯ್ಕೆಯಾದ ಹೆಚ್.ಡಿ.ಕೋಟೆ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿಯಮಿತ ಅಧ್ಯಕ್ಷ ಎಸ್.ಚಂದ್ರಶೇಖರ್ ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಜನತಾ ಬಜಾರ್ ಅಧ್ಯಕ್ಷ ಯು.ಎಸ್.ರಮೇಶ್, ನಿರ್ದೇಶಕ ಎನ್.ಮಂಜುನಾಥ್, ಕಾಂಗ್ರೆಸ್ ಮುಖಂಡರು ಹಾಜರಿದ್ದರು.

ಇಂದು ಮೈಸೂರಲ್ಲಿ ಗೀತ ಸಂಭ್ರಮ

ಮೈಸೂರು, ಸೆ.10(ಜಿಎ)–ಮೈಸೂರಿನ ಹಳೇ ಬೇರು ಹೊಸ ಚಿಗುರು ಕಲ್ಚರಲ್ ಟ್ರಸ್ಟ್‌ನಿಂದ ಸೆ.11ರಂದು ಸಂಜೆ 5 ಗಂಟೆಗೆ ನಾದಬ್ರಹ್ಮ ಸಂಗೀತ ಸಭಾದಲ್ಲಿ ಗೀತ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್‌ನ ಗಾಯಕ ರೇವಣ್ಣ ಈ ವಿಷಯ ತಿಳಿಸಿ, ಕಾರ್ಯಕ್ರಮವನ್ನು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಉದ್ಘಾಟಿಸುವರು. ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ನಾಗರಾಜ ವಿ.ಭೈರಿ ಅಧ್ಯಕ್ಷತೆ ವಹಿಸುವರು. ಕನ್ನಡ, ಹಿಂದಿ ಚಿತ್ರಗೀತೆಗಳನ್ನು ಹಾಡಲಾಗುವುದು. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ನಿರ್ಮಲಧಾರೆ ಸಲ್ಯೂಷನ್ಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
Mob: 9740893554

PAINT & CEMENT SHOP FOR SALE
ಉತ್ತಮವಾಗಿ ವ್ಯಾಪಾರ ವಹಿವಾಟು ನಡೆಯುತ್ತಿರುವ ಬಣ್ಣದ & ಸಿಮೆಂಟ್ ಅಂಗಡಿ ಬಾಡಿಗೆಗೆ ಅಥವಾ ಮಾರಾಟಕ್ಕೆ ದೊರೆಯುತ್ತದೆ. ರಿಂಗ್ ರಸ್ತೆ ಯುನಿವರ್ಸಿಟಿ ಬಡಾವಣೆ.
Mob: 9900119004

ತಕ್ಷಣ ಬೇಕಾಗಿದ್ದಾರೆ
ಇವೆಂಟ್ ಮ್ಯಾನೇಜರ್ ಸೂಪರ್ ವೈಸರ್
(MBA, M.Com, ಡಿಗ್ರಿ ಯಾಗಿರಬೇಕು)
ಅರ್ಹತೆ ಮತ್ತು ಅನುಭವದ ಆಧಾರದ ಮೇಲೆ ವೇತನ ನೀಡಲಾಗುವುದು
9742301228

ಬೇಕಾಗಿದ್ದಾರೆ
ಶ್ರೀ ಬಸವೇಶ್ವರ ಫ್ಯಾನ್ಸಿ ಮತ್ತು ಸ್ಟೇಷನರಿ ಸೆಂಟರ್‌ನಲ್ಲಿ ಕೆಲಸ ಮಾಡಲು ಹುಡುಗ ಮತ್ತು ಹುಡುಗಿಯರು Part time and full time ಕೆಲಸಕ್ಕೆ ಬೇಕಾಗಿದ್ದಾರೆ. ಸ್ಥಳ: ಟಿ.ಕೆ. ಲೇಔಟ್.
9742421313, 9945779947

ಹೋಟೆಲ್ ಮ್ಯಾನೇಜ್‌ಮೆಂಟ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ
ಊಟ, ವಸತಿ ಲಭ್ಯ
ಆಸಕ್ತರು ಸಂಪರ್ಕಿಸಿ.
6363594339

SITE FOR SALE
30x50 South face Arpana Layout, Lingbudi. Adjacent ring road & SBM others Bank Layout. 67 Lakh.
Mob: 9035263697

Vow Holidays Since (1998)
Vinoba road Shivarampet mysuru 570001
Fixed departures Dubai 25th September 2025 4N/5 days all inclusive @ just 65000/- PP
Lakshadweep 3N/4days 35,000/- PP 17th November 2025 17th December 2025
9036419015

ಸೈಟ್ ಮಾರಾಟಕ್ಕಿದೆ
30x40 ಪೂರ್ವ ಗಾಯಿತ್ರಿ ಲೇಔಟ್
30x40 ದಕ್ಷಿಣ ಜ್ಞಾನಭಾರತಿ ಸೊಸೈಟಿ ಪಕ್ಕ,
30x40 ದಕ್ಷಿಣ MIT ಕಾಲೇಜು ಪಕ್ಕ
Ph: 9900372792

ತಕ್ಷಣ ಬೇಕಾಗಿದ್ದಾರೆ
* Senior PHARMA AIDE for Medical Shop (Exp : 10-20 years)
* Sales Person for Super Market
Location : Bogadi
Mob : 9880587586

ಸ್ಥಳಾವಕಾಶ ಲಭ್ಯವಿದೆ
40x50, 30x40, 22x32, 20x20 ಅಳತೆಯ ಕೊಠಡಿಗಳು ಲಭ್ಯವಿದ್ದು, ಇಲ್ಲಿ ಸ್ಮಾರ್ಟ್ ಕ್ಲಾಸ್‌ರೂಮ್ಸ್, ವೀಡಿಯೋ ಕಾನ್ಫರೆನ್ಸ್‌ರೂಮ್, ಕೋಚಿಂಗ್ ಸೆಂಟರ್, ಮಲ್ಟಿ ಲೆವೆಲ್ ಶಾರ್ಟ್‌ಟೈಮ್ ಟ್ರೈನಿಂಗ್ ಸೆಂಟರ್, ಡಿಜಿಟಲ್ ಆಫೀಸ್‌ಗಳಿಗೆ ಸೂಕ್ತವಾಗಿರುತ್ತದೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9902638753, 9663185115

WANTED
COMPUTER TYPIST (M/F) FOR ADVOCATE OFFICE
Qualification: Typing - English & Kannada (Kan - Nudi / Baraha) in M.S. Word & Excel / Page Maker
For evening: (Male / Female). 9.30 am to 2 pm.
Salary: Rs. 12,000/- per month.
7349337469, 9448525072

40x50 WEST FACING SITE FOR SALE
40x50 West facing site for sale at Teachers Layout, 2nd off Rajkumar Road.
Contact: MYSORE ESTATES Vishwanath Gowda
Mob: 9590911111

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣವನ್ನು ತಕ್ಷಣ ನಿಮ್ಮ ಸ್ಥಳದಲ್ಲೇ ನೀಡಲಾಗುತ್ತದೆ.
ಒಂದು ಗ್ರಾಂ 9800 (24 CT)
Mob: 9108146123

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8660486818

REQUIRED
SECURITY GUARDS
relevant experience in a Residential PU college
Accommodation provided
Remuneration as per Industry norms with PF and ESI facilities
CONTACT 9478184134

REQUIRED
HOSTEL WARDENS
MALE
Graduate with relevant experience in a Residential PU College.
Remuneration as per industry norms. Accommodation with PF & ESI facilities.
Contact: 9108481695

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

40x60 EAST FACING SITE FOR SALE
40x60 East facing site for sale at Kempegowda Layout, attached to ITC factory, Yelwala.
Contact: MYSORE ESTATES Vishwanath Gowda
Mob: 9590911111

20x30 HOUSE FOR SALE
20x30 West facing, North door, 10 years old house for sale at Vijayanagar 4th Stage.
Contact: MYSORE ESTATES Vishwanath Gowda
Mob: 9590911111

DTCP & RERA APPROVED SITE
30x40 WEST FACING @ JUST RS. 20 LAKHS.
BANK LOAN AVAILABLE.
Near JSS International University & adjacent to pheriperal ring road.
Mob: 7795609173

ಟೈಲರಿಂಗ್ ತರಬೇತಿ
Limited Offer. Girls & Boys
* Basic Tailoring * Advance Tailoring * Fashion Designing * Embroidery Works. ತಕ್ಷಣ ಸಂಪರ್ಕಿಸಿ:
ಗಾನವಿ ಇಂಟರ್‌ನ್ಯಾಷನಲ್, ಮೈಸೂರು
9620636665, 9620476665, 9620436665, 6360737581

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್, ಸೆಕ್ಯೂರಿಟಿ ಸೂಪರ್‌ವೈಸರ್, ಫೀಲ್ಡ್ ಆಫೀಸರ್, ಮಾರ್ಕೆಟಿಂಗ್ ಆಫೀಸರ್, ರಾಜೀವ್‌ನಗರ, ಹೂಟಗಳ್ಳಿ, ಬೆಳವಾಡಿ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ ಹಾಗೂ ನಗರದ ಸುತ್ತಲಿನ ಪ್ರದೇಶಗಳಿಗೆ ಬೇಕಾಗಿದ್ದಾರೆ. ಮೊದಲು ಬಂದವರಿಗೆ ಆದ್ಯತೆ. ESI & PF, W/Off. ಊಟ, ವಸತಿ ಇರುತ್ತದೆ. ಸಂಪರ್ಕಿಸಿ:
9632049421, 6364850322

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

SITE FOR SALE
East facing corner site, Jnanbharathi Layout 30x40, Highway Road, behind Airport, MUDA khata & E-khata, 42 Lakhs. Slightly negotiable. Clear titles, direct owner.
Mob: 9342123373

ಕೇರ್‌ಟೇಕರ್ ಕೆಲಸ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಪುರುಷರು ಹಾಗೂ ಮಹಿಳೆಯರು ಬೇಕಾಗಿದ್ದಾರೆ. ಮತ್ತು ಮನೆ ಹಾಗೂ ಅಡುಗೆ ಕೆಲಸ ಮಾಡುವವರು. ಕೆಲಸದ ಸಮಯ ಬೆಳಗ್ಗೆ ಮತ್ತು ರಾತ್ರಿ ಅಥವಾ 24 ಗಂಟೆ. ಸಂಪರ್ಕಿಸಿ:
8951717070

WANTED
Telecallers
Kannada, Tamil, Telugu
Male no. 8, Female no. 10
Salary 12k, Suma HR
9164524766, 7829803426

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್
ಸಂಬಳ: 11,000 ರಿಂದ 13,000 (12 ಗಂಟೆಗೆ). ವಯಸ್ಸು 25 ರಿಂದ 60 ರವರೆಗೆ. ಸ್ಥಳ: ಹೆಬ್ಬಾಳ್, ಪಡುವಾರಹಳ್ಳಿ ಸಿಗ್ನಲ್, ಬಂಬೂ ಬಜಾರ್, ಸಿದ್ಧಾರ್ಥ ಲೇಔಟ್.
Mob: 7483638113

2 SITES FOR SALE
(30x50) 'Surya Layout' (Near Thalur Circle) Kadakola TVS Factory Road, 7 km from Mys-Ring Road. DTCP Approved. 18 Lakhs.
Mob: 95388-39926

ಶ್ರೀ ಗಜಾನನ ಸರ್ವೀಸ್
ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7483296927

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (25 ರಿಂದ 35 ವರ್ಷ)
ಹೌಸ್‌ಕೀಪಿಂಗ್ (25 ರಿಂದ 35 ವರ್ಷ)
ಬೋಗಾದಿ, ರಾಜರಾಜೇಶ್ವರಿನಗರ, ಹೆಬ್ಬಾಳ್, ಮೇಟಗಳ್ಳಿ, ಕುಂಬಾರಕೊಪ್ಪಲ್, ಸಿಟಿ ಸುತ್ತಾಮುತ್ತ. ಸಂಪರ್ಕಿಸಿ
(10AM TO 6PM)
9036745292

SITE FOR SALE
Teacher's Layout- 30x40, Sapthamathruka Layout- 30x40 Devegowda Circle- 30x40
9448447035

SITES WANTED
@ Brahmins Layout, Mandakalli, Ananda-sagara, Nityanandasagara & Mys-surroundings.
Quick Regn.
Mob: 93421-25252

PRAKRUTHI PROPERTIES
FOR SALE
30x40@ 22 lakhs Near RT Nagar
BSNL Lyt Sites Also Avl.
Apartments @ Ramakrishna Nagar
Residential & Commercial Plots in & around Mysore
20x30 New 2BHK House, As Per your Plan With Interiors @ Just 42 Lakh in Bogadi
95386 90359, 90359 90359

ಕೂಡಲೇ ಬೇಕಾಗಿದ್ದಾರೆ
ಕೊಡಿಶೆಟ್ಟಿಪುರ ಶ್ರೀರಂಗಪಟ್ಟಣ ರೋಡ್ ಟೋಲ್ ಹತ್ತಿರ ಸ್ಟೋನ್ ಕಂ ಇಟ್ಟಿಗೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ವಿದ್ಯಾವಂತ ಸೆಕ್ಯೂರಿಟಿ ಗಾರ್ಡ್ಸ್‌ಗಳು ತಕ್ಷಣ ಬೇಕಾಗಿದ್ದಾರೆ. ಆಸಕ್ತರು ಆಫೀಸ್ ಭೇಟಿ ಮಾಡಿ
ESI, PF, Weekly Off ಸೌಲಭ್ಯವಿದೆ
93536 46312, 76765 00669

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು
ಸಂಬಳ : 18,000+W/o (8hrs)
ಊಟ ತಿಂಡಿ ಸೌಲಭ್ಯವಿರುತ್ತದೆ.
9620777819, 9620667819

ಬೇಕಾಗಿದ್ದಾರೆ
ಶ್ರೀ ಗುರು ರಾಘವೇಂದ್ರ ಹೋಮ್ ನೀಡ್ಸ್ ಪ್ರಾವಿಷನ್ ಸ್ಟೋರ್‌ನಲ್ಲಿ BILLING (ಕ್ಯಾಷಿಯರ್) ಕೆಲಸ ಮಾಡಲು ಮಹಿಳೆಯರು PART TIME OR FULL TIME ಕೆಲಸಕ್ಕೆ ಬೇಕಾಗಿದ್ದಾರೆ. ಆಸಕ್ತಿ ಉಳ್ಳವರು ಕರೆಮಾಡಿ
9972356444
ಸ್ಥಳ: ಶಾರದಾದೇವಿ ನಗರ, ಮೈಸೂರು

MYSURU RETINA CARE
STAFF REQUIRED
(FRESHER OR EXPERIENCE)
1. O.T. TECHNICIAN
2. SUPERVISOR,
3. MANEGER,
4. HOUSE KEEPING
7338369364, 0821-2543244
No. 22A, Sri Guru Krupam, I Floor, Nivedita Nagar, Mysore-22

Gaganachukki Jalapatotsava visit
Laser-light Show, Cultural Events, Music, & Folk Art Performances and more..
FROM MYSORE TO MYSORE
13-14 September, 3PM Departure
+91 90361 54302 | 90361 54301
goMysore

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಸರಸ್ವತಿಪುರಂ
7411216781

ಜಮೀನು ಮಾರಾಟಕ್ಕಿದೆ
ಹುಣಸೂರು ಮುಖ್ಯ ರಸ್ತೆಗೆ ಹೊಂದಿಕೊಂಡಂತೆ 30 ಗುಂಟೆ ಜಮೀನು ಮಾರಾಟಕ್ಕಿದೆ ಆಸಕ್ತರು ಸಂಪರ್ಕಿಸಿ
63606033036

ಸದ್ಗುರು ಜ್ಯೋತಿಷ್ಯಂ
ಮದುವೆ ವಿಳಂಬ, ಹಣಕಾಸಿನ ತೊಂದರೆ, ವ್ಯಾಪಾರದಲ್ಲಿ ನಷ್ಟ, ಸಾಲಬಾಧೆ, ಆರೋಗ್ಯ ಸಮಸ್ಯೆ ಇನ್ನು ಎಲ್ಲಾ ಸಮಸ್ಯೆಗಳಿಗೆ ಸಲಹೆ ಮತ್ತು ಪರಿಹಾರ ಶತಃಸಿದ್ಧ ಫೋನಿನ ಮೂಲಕ ಸಂಪರ್ಕಿಸಿ.
9448229184, 7899625268

ಮನೆ ಮಾರಾಟಕ್ಕಿದೆ
ಹುಣಸೂರಿನಲ್ಲಿ 30x50ರಲ್ಲಿ ನಿರ್ಮಿಸಿರುವ
1) 2 BHK G/R 1st, ಮೊದಲ ಅಂತಸ್ತು
2) 2 BHK G/R BHK ಕಾಲೋನಿಯಲ್ಲಿ
9449680548, 6363027089

ಮನೆ ಮಾರಾಟಕ್ಕಿದೆ
30/40 ಮನೆ ಮಾರಾಟಕ್ಕಿದೆ 3 BHK ಡುಪ್ಲೆಕ್ಸ್ ಹೋಂ ಥಿಯೇಟರ್, ನಿಯರ್ ತ್ರಿವೇಣಿ ಸೂಪರ್ ಮಾರ್ಕೆಟ್, ದಟ್ಟಗಳ್ಳಿ
9738884777, 9900251194

HOUSE FOR SALE
30x40 duplex New house
Dattagalli 3rd Stage
Mob: 9740088990, 9886691475

ಯುವಕ ಯುವತಿಯರು ಬೇಕಾಗಿದ್ದಾರೆ
7Th, SSLC, PUC, DIPLOMA IN NURSING & Any EDUCATIONAL QUALIFICATION
ಮೈಸೂರು ಹಾಗೂ ಮಂಗಳೂರಿನಲ್ಲಿ ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. ತರಬೇತಿಯೊಂದಿಗೆ ಉದ್ಯೋಗವನ್ನು ಒದಗಿಸಲಾಗುವುದು. ಊಟ ಮತ್ತು ವಸತಿಯೊಂದಿಗೆ ಉತ್ತಮ ಸಂಬಳವನ್ನು ನೀಡಲಾಗುವುದು.
ಸಂಬಳ 16,000 ರಿಂದ 18,000
ಸಂಪರ್ಕಿಸಿ: 9035324777
9686161378, 7259306665

ಕಾಫಿ ತೋಟ ಮಾರಾಟಕ್ಕಿದೆ
ಕೊಡಗಿನ ವಿರಾಜಪೇಟೆಯಿಂದ 13 K.M. ಪಾಲಂಗಾಲ ಗ್ರಾಮದ ಕ್ಲಬ್ ಮಹೇಂದ್ರ ಹತ್ತಿರ, 5 ಎಕರೆ, 55 ಸೆಂಟು ಕಾಫಿ ತೋಟ ಕೆರೆ ಇರುವ ಜಾಗ ಮಾರಾಟಕ್ಕಿದೆ.
ಸಂಪರ್ಕಿಸಿ
9900532051, 9353010994

WANTED
ಫರ್ನಿಷಿಂಗ್ ಅಂಗಡಿಯಲ್ಲಿ TELECALLER WORK ಕನ್ನಡ ಹಿಂದಿ ಇಂಗ್ಲಿಷ್ ಭಾಷೆ ಮಾತಾಡಬೇಕು
1 Year Experience ಇರುವವರು ಬೇಕಾಗಿದ್ದಾರೆ.
Near Ashoka Road
Phone Number 9916514950

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

WANTED
SALES BOYS AND GIRLS TO WORK IN A SPORTS STORE FOR FULL TIME AND PART TIME IN MYSORE
FULL TIME : 10 AM TO 7 PM
PART TIME - 5 PM TO 9.30 PM
7760109047, 8105368325

ಬೇಕಾಗಿದ್ದಾರೆ
ಸೌತ್ ಭಟ್ಟರು ಚೈನೀಸ್ ಭಟ್ಟರು ಹೆಲ್ಪರ್ ಹುಡುಗರು ಚಾಟ್ಸ್ ಮಾಡುವವರು
9686200111



ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ 8 ಘಂಟೆ ಪಾಳಿಗೆ, ಬನ್ನಿಮಂಟಪ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯ
9035367083, 6361548626

ಬೇಕಾಗಿದ್ದಾರೆ
ಮೈಸೂರಿನಲ್ಲಿರುವ ಹೆಸರಾಂತ ಬಜಾಜ್‌ನ ದ್ವಿಚಕ್ರ ವಾಹನದ ಶೋರೂಂಗೆ ಕೂಡಲೇ ಬೇಕಾಗಿದ್ದಾರೆ.
* Marketing Sales Executive (Qualification- Any Degree- Fresher or Experienced)
ನಿಮ್ಮ ಅರ್ಜಿಗಳನ್ನು ಶೀಘ್ರವೇ ಕಳಿಸಿ. ಮೇಲ್ ಐಡಿ:- starmysoreresume@gmail.com
ಕರೆಮಾಡಿ 9980751999

ಡ್ರೈವರ್ ಬೇಕಾಗಿದ್ದಾರೆ
ಮೈಸೂರಿನಲ್ಲಿ ಕಾಲೇಜು ಬಸ್ಸು ಚಲಾಯಿಸಲು ನುರಿತ ಚಾಲಕರು ಬೇಕಾಗಿದ್ದಾರೆ. ವಸತಿ ಸೌಲಭ್ಯ ನೀಡಲಾಗುವುದು. ಕೂಡಲೇ ಸಂಪರ್ಕಿಸಿ
6362933519, 8310481554

WANTED FOR CORRUGATED BOX MAKING INDUSTRY AT HEBBAL, MYSORE
● MARKETING EXECUTIVE - With Good experience, Preferably in the same kind of industry
● LAB ASSISTANT - With Good experience, Preferably in the same kind of industry
Contact : 9448285757/754/759
CVs may be forwarded to E-mail ID - spurthipackaging2025@gmail.com

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ MNC ಕಂಪನಿ ಮತ್ತು ಆಫೀಸ್, ಶೋರೂಂಗಳಿಗೆ 7th, 8th, 9th, 10th, PUC, ITI, Diploma, Any Degree Pass and Fail ಆದವರಿಗೆ Helper Packing, Driving, Data Entry, Admin, HR ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಯುವಕ, ಯುವತಿಯರು (ESI + PF+ OT ಸೇರಿ) ಸಂಬಳ 18,500/- - 58,000/-
8296833225, 9035143190

ಮೈಸೂರಿನಲ್ಲಿರುವ ಒಂದು ಕಂಪನಿಗೆ 24 ಅಡಿ ಮುಚ್ಚಿದ ಕಂಟೇನರ್ ಹೊಂದಿರುವ ಟ್ರಾನ್ಸ್‌ಪೋರ್ಟರ್ ತುರ್ತಾಗಿ ಬೇಕಾಗಿದೆ. ತಿಂಗಳಿಗೆ ಕನಿಷ್ಠ 6000 ಕಿ.ಮೀ ಓಡುವ ಸಾಮರ್ಥ್ಯ, ಮಾಲೀಕರಿಗೆ ಮತ್ತು ಚಾಲಕರಿಗೆ ಸ್ವಾಗತ. ಸಂಪರ್ಕಿಸಿ
8050549720

ಬೇಕಾಗಿದ್ದಾರೆ
(Consultancy ಅಲ್ಲ) ಮೈಸೂರಿನಲ್ಲಿರುವ AW Group Pvt Limited ಕಂಪನಿಗೆ ಕನ್ನಡ ಬಲ್ಲ 194 ಅಭ್ಯರ್ಥಿಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC, PUC, ITI, Diploma Any Degree, ವಯೋಮಿತಿ 18-30 years
ತಿಂಗಳಿಗೆ : 20,500 - 27,500 (ಉಚಿತ ಊಟ + ವಸತಿ + Promotion)
Freshers ಗಳಿಗೆ ಹೆಚ್ಚಿನ ಆದ್ಯತೆ. ನಯನ:
7406821955, 7349699460

ತಕ್ಷಣ ಬೇಕಾಗಿದ್ದಾರೆ
ಮೈಸೂರು ಹೆಬ್ಬಾಳಿನ ಕಂಪನಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಅನುಭವವುಳ್ಳ ಅಕೌಂಟೆಂಟ್ ಮತ್ತು ಡ್ರೈವರ್ ಕಂ ಮಾರ್ಕೆಟಿಂಗ್ ಹಾಗೂ ಟೈಲರುಗಳು, ಹೆಲ್ಪರುಗಳು ಬೇಕಾಗಿದ್ದಾರೆ. ಸಂಪರ್ಕಿಸಿ
8105249880, 7795285485

SHILPA MAKEUP STUDIO & ACADEMY
Special Offer : ~~40,000~~/- 25,000/-
1. HD Makeup, 2. Waterproof Makeup 3. Glassy Makeup, 4. Self Makeup 5. 15+ Hairstyles, 6. Saree Dropping 7. Mehendi, 8. Nailart, 9. Portfolio Shoot 10. Social Media Handling
9148979194
Ramakrishna Nagar, E&F Block, Dakshineshwara Road, Near Ruby Bakery, No-#1489, Mysore.

ಸೈಟ್‌ಗಳು ಮಾರಾಟಕ್ಕಿದೆ
"ಕೇವಲ ಮೂರು ದಿನಗಳು ಮಾತ್ರ" ರಿಯಾಯಿತಿ ದರದಲ್ಲಿ ಸೈಟುಗಳು ಲಭ್ಯ H.D. ಕೋಟೆ ರಸ್ತೆಗೆ ಹೊಂದಿಕೊಂಡಂತೆ ಮುಳ್ಳೂರು ಗ್ರಾಮದ ಸರ್ವೆ ನಂಬರ್‌ನಲ್ಲಿ ಬರುವ DTCPಯಿಂದ ಅನುಮೋದನೆಗೊಂಡ ಸೈಟುಗಳು ಮಾರಾಟಕ್ಕಿದೆ. ಸಂಪರ್ಕಿಸಿ
9148436347

SITE FOR SALE
30x40 West Face Brahmanandasagar Phase 2, Opp st Joseph Central School, Ilwala
9972399939
Direct Owner

EAST FACE
MUDA APPROVED 40X60 SITE FOR SALE
NITYANANDASAGARA HUILALU MYSORE
8217851695

SITE FOR SALE
40x60 North Site OPP Park Suvarna Nagar
Call: 9880273834

ನಮ್ಮಲ್ಲಿ ಬಾದಾಮಿ, ಗೋಡಂಬಿ ಪಿಸ್ತಾ, ದ್ರಾಕ್ಷಿ, ಅಂಜೂರ, ಖರ್ಜೂರ ಡ್ರೈಫ್ರೂಟ್ಸ್ ಗಿಫ್ಟ್ ಬಾಕ್ಸ್‌ಗಳು ದೊರೆಯುತ್ತದೆ. ಸಂಪರ್ಕಿಸಿ
ರಾಜ್‌ಗುರು ಡ್ರೈಫ್ರೂಟ್ಸ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
9845460211, 7022293342

ಮಾರಾಟಕ್ಕಿದೆ
ಪ್ರಾವಿಷನ್/ಕಿರಾಣಿ ಅಂಗಡಿ ಮತ್ತು ಅಂಗಡಿಗೆ ಉತ್ತಮವಾದ ವುಡನ್ ಮತ್ತು ಕಬ್ಬಿಣದ ರ್‍ಯಾಕ್‌ಗಳು, ಕ್ಯಾಶ್ ಟೇಬಲ್ ಮಾರಾಟಕ್ಕಿದೆ. ಜಯನಗರ 2ನೇ ಮುಖ್ಯ ರಸ್ತೆ, ಮೈಸೂರು
Mob: 7022135656

SITE FOR SALE
40x60 North Judicial Layout
Call: 9880273834

ದಾಖಲಾತಿ ಕಳೆದಿದೆ
ಖಮರುಜ್ಜಮಾನ್(ಮಾಲೀಕರು)ರವರಿಗೆ ಸಂಬಂಧಿಸಿದ ಎನ್.ಆರ್. ಮೊಹಲ್ಲಾದ 41x60 ಅಡಿ ಅಳತೆಯ ಸೈಟ್ ಸಂಖ್ಯೆ 133ರ ಮಂಜೂರಾತಿ ಪತ್ರ ಕಳೆದುಹೋಗಿದೆ. ಸಿಕ್ಕವರು ಸಂಪರ್ಕಿಸಿ
9900251110

ಹೊಸ ಮನೆ ಮಾರಾಟಕ್ಕಿದೆ
20x30- E/F, 3-BHK, Furnished, ಇಂಜಿನಿಯರ್ಸ್ ನಿರ್ಮಿತ ಮನೆ ಲಲಿತಾದ್ರಿನಗರ(ಬಾಲಾಜಿ ಲೇಔಟ್)ನಲ್ಲಿ
Best Price - ಒಮ್ಮೆ ಭೇಟಿ ಕೊಟ್ಟುನೋಡಿ ಮಾರಾಟಕ್ಕಿದೆ.
(Good -Area & Location)
9480222708, 7760065890

ಮಾರಾಟಕ್ಕಿದೆ
ಹುಣಸೂರು ನಗರಸಭಾ ವ್ಯಾಪ್ತಿಗೆ ಒಳಪಡುವ "ರತ್ನಪುರಿ"ರಸ್ತೆ ಗೆ ಸೇರಿದ ಎಸ್ ಗೋವಿಂದ ರಾಜು ಬಡಾವಣೆಯ ಸಂಖ್ಯೆ 10ರ ಅಳತೆ 30x40. ಉತ್ತರ ದಕ್ಷಿಣಕ್ಕೆ ಖಾಲಿ ನಿವೇಶನ ಮಾರಾಟಕ್ಕಿರುತ್ತದೆ.
ಮೊ:9449364222

ಮೈಸೂರು ಮಿತ್ರ 46 — ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ತಿ.ನರಸೀಪುರ ಪುರಸಭೆ ಸಾಮಾನ್ಯ ಸಭೆ

ಪ್ರಮುಖ ರಸ್ತೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ತೀರ್ಮಾನ

ಪ್ರವೇಶ ದ್ವಾರಗಳಲ್ಲಿ ಸ್ವಾಗತ ಕಮಾನು, ಬೀದಿ ನಾಯಿ ಹಾವಳಿ, ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚೆ

ತಿ.ನರಸೀಪುರ, ಸೆ.10– ಪಟ್ಟಣ ಅಭಿವೃದ್ಧಿಗೊಂಡತೆ ರಸ್ತೆಗಳಲ್ಲಿ ವಾಹನ ದಟ್ಟಣೆ, ಜನಸಂದಣಿ, ಅಪಘಾತಗಳು ಹಾಗೂ ಸಂಚಾರಿ ನಿಯಮ ಉಲ್ಲಂಘನೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪುರಸಭಾ ವ್ಯಾಪ್ತಿಯ ಪ್ರಮುಖ ರಸ್ತೆಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲು ತೀರ್ಮಾನಿಸಲಾಯಿತು.

ಪಟ್ಟಣದ ಪುರಸಭೆ ಸಭಾಂಗಣದಲ್ಲಿ ಅಧ್ಯಕ್ಷೆ ಬಿ.ವಸಂತ ಶ್ರೀಕಂಠ ಅವರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಪುರಸಭಾ ವ್ಯಾಪ್ತಿಯ ಪಟ್ಟಣದ ಲಿಂಕ್ ರಸ್ತೆ ಮಾರ್ಕೆಟ್ ರಸ್ತೆ ಸಾರ್ವಜನಿಕ ಆಸ್ಪತ್ರೆ ರಸ್ತೆ ಹೊಸ ತಿರುಮಕೂಡಲು ಕಾಲೇಜು ಜೋಡಿ ರಸ್ತೆ, ತಾಲೂಕು ಕಚೇರಿ ರಸ್ತೆ ಸೇರಿದಂತೆ ಇನ್ನಿತರ ಪ್ರಮುಖ ರಸ್ತೆಗಳಲ್ಲಿ ಸಾರ್ವಜನಿಕರ ಹಿತದೃಷ್ಟಿಯಿಂದ ಸಿಸಿ ಕ್ಯಾಮರಾ ಅಳವಡಿಸಲು, ಅಲ್ಲದೇ 2025–26ನೇ ಸಾಲಿನ ಎಸ್‌ಎಫ್‌ಸಿ ಯೋಜನೆಯಡಿ ಎಬಿಬಿಎಸ್ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪುರಸಭಾ ಸದಸ್ಯ ಎನ್.ಸೋಮಣ್ಣ ಮಾತನಾಡಿ, ಪುರಸಭೆಯಿಂದ ಪಟ್ಟಣದ ಪ್ರವೇಶ ದ್ವಾರಗಳಲ್ಲಿ ಸ್ವಾಗತ ಕಮಾನುಗಳನ್ನು ನಿರ್ಮಿಸಬೇಕು. ಕಳೆದ ಸಭೆಗಳಲ್ಲಿ ಚರ್ಚಿಸಿ ತೀರ್ಮಾನಿಸಿದರೂ, ಇಲ್ಲಿವರೆಗೂ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಂಡಿಲ್ಲವೆಂದು ಆರೋಪಿಸಿದರು.

ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಮಕ್ಕಳು ಹಾಗೂ ಸಾರ್ವಜನಿಕರ ಮೇಲೆ ದಾಳಿ ನಡೆಸುತ್ತಿವೆ. ಈ ಬಗ್ಗೆಯೂ ದೂರುಗಳಿರುವ ಹಿನ್ನೆಲೆಯಲ್ಲಿ ಬೀದಿನಾಯಿಗಳ ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಕ್ರಮ ಕೈಗೊಳ್ಳಬೇಕು ಎಂದರು.

ತ್ಯಾಜ್ಯ ವಿಲೇವಾರಿ ವಾಹನಗಳ ಪೆಟ್ರೋಲ್ ಬಿಲ್ ವರ್ಷಕ್ಕೆ 4 ಲಕ್ಷ ರೂ. ಮಾಡಿದ್ದೀರಾ. ನಗರೋತ್ಥಾನ ಯೋಜನೆಯಲ್ಲಿ ಬಳಕೆಯಾಗಬೇಕಿದ್ದ 2 ಕೋಟಿ ರೂಪಾಯಿ ಬದಲು 1 ಕೋಟಿ ರೂ ಖರ್ಚು ಮಾಡಿದ್ದೀರಿ. ಉಳಿದ ಹಣ ಯಾವ ಅಭಿವೃದ್ಧಿ ಕೆಲಸಕ್ಕೆ ಖರ್ಚು ಮಾಡಿದ್ದೀರಿ ಎಂದು ಸದಸ್ಯ ಎಸ್.ಕೆ.ಕಿರಣ್ ಪ್ರಶ್ನಿಸಿದರು.

ಇಂಜಿನಿಯರ್ ಚಂದ್ರಶೇಖರ್ ಮಾತನಾಡಿ, ಕೆಲವು ದಿನಗಳ ಹಿಂದಷ್ಟೇ ತಿ.ನರಸೀಪುರ ಪುರಸಭೆ ಇಂಜಿನಿಯರ್ ಆಗಿ ಅಧಿಕಾರ ವಹಿಸಿಕೊಂಡಿದ್ದೇನೆ. ಸದಸ್ಯರು ಕಾಲವಕಾಶ ನೀಡಿದರೆ ಮಾಹಿತಿ ನೀಡುತ್ತೇನೆ ಎಂದರು. ಸದಸ್ಯ ಎಲ್.ಮಂಜುನಾಥ್ ಮಾತನಾಡಿ, ಗೋಪಾಲಪುರ ಸರ್ವೆ ನಂ.7ರ ವಿಷಯಕ್ಕೆ ಸಂಬಂಧಿಸಿದಂತೆ ಅಂದು ಕೊಟ್ಟಿರುವ ನಡಾವಳಿಯೇ ಬೇರೆ ಇದ್ದು, ಇಂದು ಸಾಮಾನ್ಯ ಸಭೆಯಲ್ಲಿ ಅನುಮೋದಿಸುವ ವಿಚಾರವಾಗಿ ಕೊಟ್ಟಿರುವ ನಡಾವಳಿಯೇ ಬೇರೆ ಇದೆ ಎಂದು ಅಧ್ಯಕ್ಷರ ಗಮನ ಸೆಳೆದು ಈ ನಡಾವಳಿಯನ್ನು ಬೇಕು ಅಂತಲೇ ಮಾಡಿದ್ದಾರೆ. ಹೀಗಾಗಿ ನಡಾವಳಿ ಮಾಡಿರುವ ಅಧಿಕಾರಿ ವಿರುದ್ಧ ಅಧ್ಯಕ್ಷರು ಮತ್ತು ಮುಖ್ಯಾಧಿಕಾರಿಗಳು ಕ್ರಮ ಕೈಗೊಳ್ಳಬೇಕು ಹಾಗೂ ನಡಾವಳಿ ತಿದ್ದುಪಡಿ ಮಾಡಬೇಕು. ಇಲ್ಲದಿದ್ದರೆ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಪುರಸಭೆ ಮಾಜಿ ಅಧ್ಯಕ್ಷ ಎಸ್.ಮದನ್ ರಾಜ್ ಮಾತನಾಡಿ, ಪಟ್ಟಣದಲ್ಲಿ ಕಾಂಗ್ರೆಸ್ ಭವನ ನಿರ್ಮಾಣಕ್ಕೆ ನಿವೇಶನ ಕೊಡುವಂತೆ ಪತ್ರ ಬಂದಿದೆ. ಅದನ್ನು ಪರಿಶೀಲಿಸಿ ನಿವೇಶನ ನೀಡಬೇಕು ಎಂದರು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸದಸ್ಯ ಅರ್ಜುನ್ ಕಾಂಗ್ರೆಸ್‌ನಂತೆ ಬೇರೆ ಬೇರೆ ಪಕ್ಷಗಳಿದ್ದು, ಅವುಗಳಿಗೂ ನಿವೇಶನ ನೀಡಬೇಕು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಸ್ಥಾಯಿ ಸಮಿತಿ ಅಧ್ಯಕ್ಷ ಪ್ರಕಾಶ್ ಮುಂದಿನ ಬಾರಿ ಈ ಸಂಬಂಧ ಚರ್ಚೆ ನಡೆಸೋಣ ಎಂದರು.

ಸಭೆಯಲ್ಲಿ ಉಪಾಧ್ಯಕ್ಷೆ ರಾಜೇಶ್ವರಿ ರಾಘವೇಂದ್ರ, ಸದಸ್ಯರಾದ ಮಂಜು (ಬಾದಾಮಿ), ಮೆಡಿಕಲ್ ಆರ್.ನಾಗರಾಜು, ಆರ್.ಅರ್ಜುನ್, ಎಸ್.ಮದನ್‌ರಾಜ್, ರೂಪಶ್ರೀ ಪರಮೇಶ್, ರೂಪಕರಿಯಪ್ಪ, ನಾಗರತ್ನ ಮಾದೇಶ್, ಮಹದೇವಮ್ಮ, ಬೇಬಿ ಹೇಮಂತ್ ಕುಮಾರ್, ತೇಜಸ್ವಿನಿ ರಾಜು, ನಾಮ ನಿರ್ದೇಶಿತ ಸದಸ್ಯರಾದ ಗುರುಸ್ವಾಮಿ, ಕಿರಣೇಶ್, ಆರ್. ಚೇತನ್, ಸಬೀಲ್ ಖಾನ್, ಪುರಸಭಾ ಪ್ರಭಾರ ಮುಖ್ಯಾಧಿಕಾರಿ ಕೆ.ಸಿ. ತ್ರಿವೇಣಿ, ವ್ಯವಸ್ಥಾಪಕ ಮಹೇಂದ್ರ ಅಕೌಂಟೆಂಟ್ ವಿನಯಕುಮಾರ್ ಹಾಗೂ ಇತರೆ ಸಿಬ್ಬಂದಿಗಳು ಇದ್ದರು.



ತಿ.ನರಸೀಪುರ ಪುರಸಭಾ ಕಚೇರಿಯಲ್ಲಿ ಸಾಮಾನ್ಯ ಸಭೆ ನಡೆಯಿತು.



> ತಿ.ನರಸೀಪುರ ಪುರಸಭೆ ವ್ಯಾಪ್ತಿಯ ರಸ್ತೆ, ಚರಂಡಿ ಅಭಿವೃದ್ಧಿಗೆ ರಾಜ್ಯ ಸರ್ಕಾರದಿಂದ ಕೋಟ್ಯಾಂತರ ರೂ. ಅನುದಾನ ಬಂದಿದ್ದು, ಹಂತ ಹಂತವಾಗಿ ಅಭಿವೃದ್ಧಿ ಕೈಗೊಳ್ಳುತ್ತೇವೆ. ಈಗಾಗಲೇ ನಂಜನಗೂಡು ಆಯಿಲ್ ಮಿಲ್ ರಸ್ತೆ ಪ್ರೈಮರಿ ಸ್ಕೂಲ್ ರಸ್ತೆ ಕುರುಬರ ಬೀದಿಯಲ್ಲಿ ಡಾಂಬರೀಕರಣಕ್ಕಾಗಿ ಮೆಟ್ಲಿಂಗ್ ಮಾಡುತ್ತಿದ್ದು ಶೀಘ್ರ ಡಾಂಬರಿಕರಣ ಮಾಡುತ್ತೇವೆ. - ಸಿ.ಪ್ರಕಾಶ್, ಸ್ಥಾಯಿ ಸಮಿತಿ ಅಧ್ಯಕ್ಷ.

ಬೈಕ್‌ಗಳ ಮುಖಾಮುಖಿ ಡಿಕ್ಕಿ: 6 ಮಂದಿಗೆ ತೀವ್ರ ಗಾಯ

ನಂಜನಗೂಡು, ಸೆ.10– ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ ಮಗು ಸೇರಿದಂತೆ 6 ಮಂದಿ ತೀವ್ರ ಗಾಯಗೊಂಡಿರುವ ಘಟನೆ ತಾಲೂಕಿನ ಬದನವಾಳು ಗ್ರಾಮದ ಬಳಿ ನಡೆದಿದೆ.

ತಾಲೂಕಿನ ಹೆಡತಲೆ ಗ್ರಾಮದ ನಿವಾಸಿ ಮಹೇಶ (30), ಪತ್ನಿ ರಾಣಿ (27), ಪುತ್ರಿ ಆದ್ಯ(4), ಹೆಮ್ಮರಗಾಲ ಗ್ರಾಮದ ನಿವಾಸಿಗಳಾದ ಅರವಿಂದ (21), ಮಹದೇವಶೆಟ್ಟಿ (25), ಅರುಣ (21) ತೀವ್ರ ಗಾಯಗೊಂಡು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ತಾಲೂಕಿನ ದೊಡ್ಡ ಕವಲಂದೆ ಕಡೆಯಿಂದ ಮಹೇಶ್ ಅವರು ತಮ್ಮ ಪತ್ನಿ, ಪುತ್ರಿಯೊಂದಿಗೆ ಬೈಕ್‌ನಲ್ಲಿ ನಂಜನಗೂಡು ಕಡೆಗೆ ಬರುತ್ತಿದ್ದರು. ಹೆಮ್ಮರಗಾಲ ಗ್ರಾಮದ ಯುವಕರಾದ ಅರವಿಂದ, ಮಹದೇವ ಶೆಟ್ಟಿ, ಅರುಣ ಬೈಕ್‌ನಲ್ಲಿ ಹೆಡತಲೆ ಗ್ರಾಮದ ಕಡೆಗೆ ತೆರಳುತ್ತಿದ್ದರು. ಈ ವೇಳೆ ತಾಲೂಕಿನ ಬದನವಾಳು ಗ್ರಾಮದ ವೃತ್ತದ ಬಳಿ ತಿರುವು ಪಡೆಯುವಾಗ ವೇಗವಾಗಿ ಬಂದ ಯುವಕರ ಬೈಕ್ ಮಹೇಶ್ ಅವರ ಬೈಕ್‌ಗೆ ಮುಖಾಮುಖಿ ಡಿಕ್ಕಿ ಹೊಡೆದಿದೆ ಪರಿಣಾಮ 6 ಮಂದಿ ತೀವ್ರ ಗಾಯಗೊಂಡಿದ್ದಾರೆ ಎನ್ನಲಾಗಿದೆ. ಈ ಸಂಬಂಧ ದೊಡ್ಡ ಕವಲಂದೆ ಠಾಣೆಯಲ್ಲಿ ದೂರು ದಾಖಲಾಗಿದೆ.

ವೈಯಕ್ತಿಕ ಕಾರಣಕ್ಕೆ ಕೆಲವರಿಂದ ಇನ್‌ಸ್ಪೆಕ್ಟರ್ ತೇಜೋವಧೆ

ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ



ಸುದ್ದಿಗೋಷ್ಠಿಯಲ್ಲಿ ಕರೋಹಟ್ಟಿ ಮಹದೇವಯ್ಯ ಮಾತನಾಡಿದರು.

ತಿ.ನರಸೀಪುರ, ಸೆ.10– ತಾಲೂಕಿನ ತುಂಬಲ ಗ್ರಾಮದಲ್ಲಿ ನಡೆದ ದಾಯಾದಿಗಳ ಕಲಹ 2 ಗ್ರಾಮಗಳ ಯುವಕರ ನಡುವೆ ಸಂಘರ್ಷಕ್ಕೆ ಎಡೆ ಮಾಡಿಕೊಟ್ಟಿತ್ತು. ಆದರೆ ಪಟ್ಟಣದ ಪೊಲೀಸರ ಕ್ರಮದಿಂದಾಗಿ ಯುವಕರ ನಡುವಿನ ಮಾರಾಮಾರಿ ತಪ್ಪಿದ್ದು, ವೈಯುಕ್ತಿಕ ದ್ವೇಷದಿಂದ ಕೆಲವು ಸಂಘಟನೆಗಳ ಮುಖಂಡರು ಇನ್ಸ್‌ಪೆಕ್ಟರ್ ಧನಂಜಯ ಅವರನ್ನು ತೇಜೋವಧೆ ಮಾಡುತ್ತಿದ್ದಾರೆ ಎಂದು ತಾಲೂಕು ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ತಿಳಿಸಿದರು.

ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪೊಲೀಸರು ಹಲ್ಲೆ ಮಾಡಿದ್ದಾರೆ ಎಂದು ಆರೋಪಿಸುತ್ತಿರುವ ಯುವಕರು ಕ್ಷುಲ್ಲಕ ಕಾರಣಕ್ಕೆ ಅವರದ್ದೇ ಕುಟುಂಬದವರೊಡನೆ ಆ.28 ರಂದು ಕಾಳಗ ನಡೆಸಲು ಸಜ್ಜಾಗಿದ್ದರು. ರಾಮನ ಬೆಟ್ಟದಲ್ಲಿ ಕರ್ತವ್ಯ ನಿರತರಾಗಿದ್ದ ಪೊಲೀಸರು ದೊಡ್ಡ ಗಲಾಟೆ ಆಗುವುದನ್ನು ತಪ್ಪಿಸಿ ಕಾನೂನು ಸುವ್ಯವಸ್ಥೆ ಕಾಪಾಡಿದ್ದಾರೆ ಎಂದರು.

ಜೆಡಿಎಸ್ ಯುವ ಮುಖಂಡ ಸೋಸಲೆ ಎ.ಶಿವಕುಮಾರ್ ಮಾತನಾಡಿ, ತುಂಬಲ ಗ್ರಾಮದಲ್ಲಿ ಯುವಕರ ಗುಂಪು ಪರಸ್ಪರ ಹೊಡೆದಾಡಿಕೊಳ್ಳುವುದು ಪೊಲೀಸರಿಂದ ತಪ್ಪಿದೆ. ಯುವಕರು ಮತ್ತು ಪೊಲೀಸ್ ಇನ್ಸ್‌ಪೆಕ್ಟರ್ ಒಂದೇ ಸಮುದಾಯ ಆಗಿರುವುದರಿಂದ ಸಮುದಾಯದ ಚೌಕಟ್ಟಿನೊಳಗೆ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳುತ್ತೇವೆ. ಆದರೆ ಅನ್ಯ ಸಮುದಾಯದ ಮುಖಂಡ ದಲಿತ ಸಂಘಟನೆ ಜೊತೆಗೂಡಿ ಸಮುದಾಯ ವಿರೋಧಿ ಕೃತ್ಯಕ್ಕೆ ಕೈ ಹಾಕಿರುವುದು ಸರಿಯಲ್ಲ. ಕ್ಷುಲ್ಲಕ ಕಾರಣಕ್ಕೆ ಆಗಿರುವ ಘಟನೆ ಮುಂದಿಟ್ಟುಕೊಂಡು ಸಾರ್ವಜನಿಕ ಸೇವೆಯಲ್ಲಿರುವ ಪೊಲೀಸ್ ಅಧಿಕಾರಿ ತೇಜೋವಧೆಗೆ ಸಂಘಟನೆ ದುರ್ಬಳಕೆ ಮಾಡಿಕೊಳ್ಳುತ್ತಿರುವುದು ಸರಿಯಲ್ಲ ಎಂದರು.

ರಾಜ್ಯ ಬಿಎಸ್ಪಿ ಕಾರ್ಯದರ್ಶಿ ಬಿ.ಆರ್.ಪುಟ್ಟಸ್ವಾಮಿ, ಜಿಪಂ ಮಾಜಿ ಅಧ್ಯಕ್ಷ ಎಸ್.ಎನ್.ಸಿದ್ಧಾರ್ಥ ಹಾಗೂ ಕಲ್ಲುಣಿ ಗ್ರಾಮದ ಸಿದ್ದರಾಜು, ಚಂದ್ರು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ದಸಂಸ ರಾಜ್ಯ ವಿಭಾಗೀಯ ಸಂಚಾಲಕ ಆಲಗೂಡು ಎಸ್.ಚಂದ್ರಶೇಖರ್, ಜನಜಾಗೃತಿ ಸಮಿತಿ ಜಿಲ್ಲಾಧ್ಯಕ್ಷ ಕೆ.ಎನ್. ಪ್ರಭುಸ್ವಾಮಿ, ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಎನ್.ಲಿಂಗಪ್ಪಾಜಿ, ಡಿಜೆಎಸ್ ಜಿಲ್ಲಾಧ್ಯಕ್ಷ ತುಂಬಲ ಮಂಜುನಾಥ್, ಛಾಯಾಗ್ರಾಹಕರ ಸಂಘದ ಅಧ್ಯಕ್ಷ ಎಸ್.ಕೆ.ಶಿವಕುಮಾರ್, ದಸಂಸ ಸಂಚಾಲಕ ನಿಲಸೋಗೆ ಕುಮಾರ್, ಮುಖಂಡರಾದ ಗಣೇಶಸ್ವಾಮಿ, ತೊಟ್ಟವಾಡಿ ಅನಿಲ್ ಕುಮಾರ್, ಸಂಭ್ರಮ್, ಎಸ್.ವಿ.ಮಹೇಶ ಕುಮಾರ್, ರಾಜಣ್ಣ, ಕೆಂಪರಾಜು, ಎಂ.ಎಸ್.ಬಸವರಾಜು, ಮಹದೇವಮ್ಮ ಇತರರಿದ್ದರು.

3.53 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ



ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ದರ್ಶನ್ ಗುದ್ದಲಿ ಪೂಜೆ ನೆರವೇರಿಸಿದರು.

ನಂಜನಗೂಡು, ಸೆ.10– ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಪದವಿಪೂರ್ವ ಕಾಲೇಜು ಕಟ್ಟಡ, ಎಸ್‌ಇಪಿ, ಟಿಎಸ್‌ಪಿ ಯೋಜನೆಯಡಿ ರಸ್ತೆ ಅಭಿವೃದ್ಧಿ ಸೇರಿದಂತೆ 3.53 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ತಾಲೂಕಿನ ಹುಲ್ಲಹಳ್ಳಿ, ಬೆಳಲೆ, ಮೊಬ್ಬಹಳ್ಳಿ, ಗೀಕಹಳ್ಳಿ, ಕೋಡಿನರಸೀಪುರ, ದೇವನೂರು, ನಂಜನಹಳ್ಳಿ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಹುಲ್ಲಹಳ್ಳಿಯಲ್ಲಿ 1.36 ಕೋಟಿ ರೂ. ವೆಚ್ಚದಲ್ಲಿ ಪದವಿಪೂರ್ವ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದ್ದು, ಮುಂದಿನ 6 ತಿಂಗಳಲ್ಲಿ ಮುಕ್ತಾಯಗೊಂಡು ಬರುವ ಶೈಕ್ಷಣಿಕ ವರ್ಷದಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಈಗಾಗಲೇ 20 ಕೋಟಿ ರೂ. ವೆಚ್ಚದಲ್ಲಿ ಹುರ ಮತ್ತು ಹುಲ್ಲಹಳ್ಳಿ ಮುಖ್ಯರಸ್ತೆ ಅಭಿವೃದ್ಧಿಪಡಿಸಲಾಗಿದೆ. ಸಣ್ಣ ನೀರಾವರಿ ಇಲಾಖೆಯಿಂದ ಕೋಟಿ ರೂ. ವೆಚ್ಚದಲ್ಲಿ ಸೋಪಾನಕಟ್ಟೆ ನಿರ್ಮಿಸಲಾಗಿದೆ. ಅಲ್ಲದೇ ಎಸ್‌ಇಪಿ ಮತ್ತು ಟಿಎಸ್‌ಪಿ ಯೋಜನೆಯಡಿ ರಸ್ತೆಗಳನ್ನು ನಿರ್ಮಿಸಿ ಕೊಡಲಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ ಖರ್ಗೆ ಅವರು ಟಿಎಸ್‌ಪಿ ಯೋಜನೆಯಡಿ 50 ಲಕ್ಷ ರೂ. ಅನುದಾನ ಬಿಡುಗಡೆಗೊಳಿಸಿದ್ದು, ಈ ಅನುದಾನದಲ್ಲಿ ಹುಲ್ಲಹಳ್ಳಿ ಗ್ರಾಮದ ಪ.ಪಂಗಡದವರ ಬೀದಿಗಳ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಅಲ್ಲದೇ ಟ್ಯಾಕ್ಸಿ ಶೆಲ್ಟರ್ ನಿರ್ಮಾಣಕ್ಕೆ 5 ಲಕ್ಷ, ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಆಸ್ಪತ್ರೆಗೆ ಬರುವ ಜನರಿಗೆ ಅನುಕೂಲವಾಗುವಂತೆ ಹುಲ್ಲಹಳ್ಳಿ ಗ್ರಾಮದಿಂದ ಕುರಿಹುಂಡಿಗೆ ಹೋಗುವ ರಸ್ತೆಯಲ್ಲಿ 13 ಲಕ್ಷ ವೆಚ್ಚದಲ್ಲಿ ಬಸ್ ಶೆಲ್ಟರ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಜೊತೆಗೆ ಇಲ್ಲಿನ ಸಂಪರ್ಕ ರಸ್ತೆ ಸಂಪೂರ್ಣ ಹದಗೆಟ್ಟಿದ್ದು, ಆ ರಸ್ತೆ ಅಭಿವೃದ್ಧಿ ಕಾರ್ಯವನ್ನು ಎಸ್‌ಇಪಿ ಅನುದಾನದಲ್ಲಿ ಮುಕ್ತಾಯಗೊಳಿಸುವ ಜೊತೆಗೆ ಹುಲ್ಲಹಳ್ಳಿ ಗ್ರಾಮದ ಸಂಪೂರ್ಣ ಅಭಿವೃದ್ಧಿಗೆ ಒತ್ತು ನೀಡಲಾಗಿದೆ ಎಂದರು.

ಈ ವೇಳೆ ಶಾಸಕ ದರ್ಶನ್ ದೇವನೂರು ಗ್ರಾಮದಲ್ಲಿ ತಲಾ 15 ಲಕ್ಷ ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಅಂಗನವಾಡಿ ಕಟ್ಟಡ ಹಾಗೂ ನೂತನ ಶಾಲಾ ಕೊಠಡಿಯನ್ನು ಉದ್ಘಾಟಿಸಿದರು. ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಶ್ರೀಕಂಠ ನಾಯಕ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಕಾಂಗ್ರೆಸ್ ಪ್ರಚಾರ ಸಮಿತಿ ತಾಲೂಕು ಅಧ್ಯಕ್ಷ ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಚಾಮರಾಜು, ಗ್ರಾಪಂ ಅಧ್ಯಕ್ಷೆ ದೇವಮ್ಮ, ಉಪಾಧ್ಯಕ್ಷ ಲೋಕೇಶ್, ಗ್ರಾಪಂ ಸದಸ್ಯ ಜಗದೀಶ್, ಮುಖಂಡರಾದ ದೊರೆಸ್ವಾಮಿ ನಾಯಕ, ಶಿವಣ್ಣ, ಎನ್.ಎಸ್.ಮಾದಪ್ಪ, ರಾಜೇಶ್, ಮಲ್ಲೇಶ್, ಸೂರ್ಯಕುಮಾರ್, ಅಭಿನಂದನ್ ಪಟೇಲ್, ರಾಜು, ಶಿವಪ್ಪದೇವರು, ಮಹದೇವು, ಸ್ವಾಮಿನಾಯಕ, ಅಣ್ಣಬಸವಣ್ಣ, ಸಾಮಾಜಿಕ ಜಾಲತಾಣ ಅಧ್ಯಕ್ಷ ಎಸ್.ಮಹೇಶ್, ಸತೀಶ್, ಪುಟ್ಟಸ್ವಾಮಿ, ಹಲ್ಲರೆ ಮಹದೇವು, ಹಳೇಪುರ ನಾಗರಾಜ್, ಕೆಆರ್‌ಐಡಿಎಲ್‌ನ ಅಧಿಕಾರಿಗಳಾದ ಶರಣ್, ಪುರುಷೋತ್ತಮ್, ನಿರ್ಮಿತಿ ಕೇಂದ್ರದ ಯಶವಂತ, ಎಸ್‌ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿವಣ್ಣ ಸೇರಿದಂತೆ ಹಲವರಿದ್ದರು.

ನೂತನ ಅಧ್ಯಕ್ಷರಿಗೆ ಸನ್ಮಾನ



ಸರಗೂರು ತಾಲೂಕಿನ ಸುನೀಲ್ ಬೋಸ್ ಅಭಿಮಾನಿ ಬಳಗದ ನೂತನ ಅಧ್ಯಕ್ಷ ಸಿದ್ದರಾಜು ಅವರನ್ನು ಮುಖಂಡರು ಸನ್ಮಾನಿಸಿದರು. ಈ ವೇಳೆ ಗ್ಯಾರಂಟಿ ಸಮಿತಿ ತಾಲೂಕು ಅಧ್ಯಕ್ಷ ಚಲುವರಾಜು, ಮುಖಂಡರಾದ ಡಾ.ಮರಿದೇವಯ್ಯ ತಿಮ್ಮಯ್ಯ, ನಾಗರಾಜು, ಸೋಮು, ಅಂಬೇಡ್ಕರ್ ಭವನ ಟ್ರಸ್ಟ್ ಅಧ್ಯಕ್ಷ ಸಣ್ಣಸ್ವಾಮಿ, ನಾಗರಾಜು, ಮಲ್ಲಿಕಾರ್ಜುನ, ಬಸವರಾಜು, ಕಲ್ಲೇಶ್, ಸೋಮೇಶ್ ಸೇರಿದಂತೆ ಇತರರಿದ್ದರು.


ಕಂಪಲಾಪುರಕೊಪ್ಪಲಲ್ಲಿ ಗಣಪತಿ ವಿಸರ್ಜನೆ



ಕಂಪಲಾಪುರಕೊಪ್ಪಲು ಗ್ರಾಮದಲ್ಲಿ ಏಕದಂತ ಗೆಳೆಯರ ಬಳಗದಿಂದ ಪ್ರತಿಷ್ಠಾಪಿಸಿದ್ದ ಗಣಪತಿಯನ್ನು ಬುಧವಾರ ಅದ್ದೂರಿ ಮೆರವಣಿಗೆಯೊಂದಿಗೆ ಕೆಂಪಿ ಕೆರೆಯಲ್ಲಿ ವಿಸರ್ಜಿಸಲಾಯಿತು.

ಯುವಕ ಆತ್ಮಹತ್ಯೆ

ಹುಣಸೂರು, ಸೆ.10– ಯುವಕನೋರ್ವ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದಲ್ಲಿ ಬುಧವಾರ ನಡೆದಿದೆ.



ಹೆಚ್.ಡಿ.ಕೋಟೆ ತಾಲೂಕು ಮಾದಾಪುರ ಗ್ರಾಮದ ನಿವಾಸಿ ದಿನೇಶ್ ಅವರ ಪುತ್ರ ಪ್ರವೀಣ್ (27) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 3 ದಿನಗಳ ಹಿಂದೆ ನಗರದ ಎಪಿಎಂಸಿ ಎದುರಿನ ಬಿ.ಎಸ್.ಲಾಡ್ಜ್‌ನಲ್ಲಿ ರೂಂ ಪಡೆದು ತಂಗಿದ್ದ ಈತ ಬುಧವಾರ ಬೆಳಗ್ಗೆ ಎಷ್ಟು ಹೊತ್ತಾದರೂ ಕೊಠಡಿಯಿಂದ ಹೊರ ಬಾರದ ಹಿನ್ನೆಲೆಯಲ್ಲಿ ಸಿಬ್ಬಂದಿ ಕಿಟಕಿ ಮೂಲಕ ನೋಡಲಾಗಿ ಪ್ರವೀಣ್ ರೂಂನ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್, ಎಸ್‌ಐ ಮಹಾಲಿಂಗಪ್ಪ ಪರಿಶೀಲಿಸಿ ಶವವನ್ನು ಮೈಸೂರಿನ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದರು. ಮೃತನ ತಂದೆ ದಿನೇಶ್ ತಮ್ಮ ಮಗನ ಸಾವು ಅನುಮಾನಾಸ್ಪದವಾಗಿದೆ. ಹೀಗಾಗಿ ಈ ಬಗ್ಗೆ ತನಿಖೆ ಕೈಗೊಳ್ಳುವಂತೆ ಪಟ್ಟಣದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಶ್ರೀರಂಗಪಟ್ಟಣದ ಗಂಧದಗುಡಿ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದ ಪ್ರವೀಣ್‌ಗೆ ಅಕ್ಕನ ಮಗಳೊಂದಿಗೆ ವಿವಾಹ ನಿಶ್ಚಯವಾಗಿತ್ತು ಎನ್ನಲಾಗಿದೆ.

ಬಾನು ಮುಷ್ತಾಕ್‌ರಿಂದ ದಸರಾ ಉದ್ಘಾಟನೆ

ರಾಜ್ಯ ಸರ್ಕಾರದ ನಿಲುವು ಸಮಯೋಚಿತವಾಗಿದೆ



ಸೋಷಿಯಲ್ ಜಸ್ಟೀಸ್ ಫೋರಂನ ಜಿಲ್ಲಾಧ್ಯಕ್ಷ ಜೆ.ಮಹದೇವ ಮಾತನಾಡಿದರು.

ಹುಣಸೂರು, ಸೆ.10– ಬೂಕರ್ ಪ್ರಶಸ್ತಿ ಪುರಸ್ಕೃತರು, ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರನ್ನು ಮೈಸೂರು ದಸರಾ ಮಹೋತ್ಸವದ ಉದ್ಘಾಟಕರಾಗಿ ಆಹ್ವಾನಿಸಿರುವ ರಾಜ್ಯ ಸರ್ಕಾರದ ನಿಲುವು ಸಮಯೋಚಿತವಾಗಿದೆ. ಆದರೆ ಲೇಖಕಿ ಬಾನು ಮುಷ್ತಾಕ್ ದಸರಾ ಉದ್ಘಾಟಿಸಬಾರದು ಎನ್ನುತ್ತಿರುವ ಮಾಜಿ ಸಂಸದ ಪ್ರತಾಪ್ ಸಿಂಹ ಹಾಗೂ ಬಿಜೆಪಿ ನಾಯಕರ ಹೇಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇವೆ ಎಂದು ಸೋಷಿಯಲ್ ಜಸ್ಟೀಸ್ ಫೋರಂನ ಜಿಲ್ಲಾಧ್ಯಕ್ಷ ಜೆ.ಮಹದೇವ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಸರಾ ಯಾವುದೇ ಧಾರ್ಮಿಕ ಆಚರಣೆಯಲ್ಲ. ರಾಜ ಪರಂಪರೆಯ ನಂತರ ಪ್ರಜಾಪ್ರಭುತ್ವದಲ್ಲಿ ನಾಡಿನ ಎಲ್ಲಾ ಧರ್ಮಿಯರನ್ನೊಳಗೊಂಡು ನಾಡಹಬ್ಬವನ್ನು ಆಚರಿಸಲಾಗುತ್ತಿದೆ. ಇಂತಹ ಪಾರಂಪರಿಕ ಸಾಂಸ್ಕೃತಿಕ ಉತ್ಸವವನ್ನು ಲೇಖಕಿ ಬಾನು ಮುಷ್ತಾಕ್ ಉದ್ಘಾಟಿಸುತ್ತಿರುವುದು ಸರಿಯಾಗಿದೆ. ನಾವು ಅವರ ಜೊತೆಗಿದ್ದೇವೆ. ಮಹಿಳೆ, ಅಲ್ಪಸಂಖ್ಯಾತ, ದಲಿತರ ವಿಚಾರ ಮುನ್ನೆಲೆಗೆ ಬಂದಾಗಲೆಲ್ಲಾ ಕೋಮುವಾದಿ ಶಕ್ತಿಗಳು ವಿರೋಧಿಸುತ್ತಲೇ ಬಂದಿವೆ ಎಂದು ಆರೋಪಿಸಿದರು. ಬಾನು ಮುಷ್ತಾಕ್ ಅವರು ಕೋಮುವಾದವನ್ನು ನೇರವಾಗಿ ವಿರೋಧಿಸಿದ್ದಾರೆ. ಧರ್ಮಾಂಧತೆ ಮೂರ್ತಿ ಪೂಜೆಯ ಕಲ್ಪನೆಗಳನ್ನು ವಿಮರ್ಶೆಗೆ ಒಡ್ಡಿದ್ದಾರೆ. ಬಸವಣ್ಣನವರು ಇಂತಹದ್ದೇ ಚಿಂತನೆ ಹೊಂದಿದ್ದರು. ಅಂಬೇಡ್ಕರ್, ಕುವೆಂಪು ಅವರು ಹಿಂದೂ ಧರ್ಮವನ್ನು ವಿಮರ್ಶಿಸಿದ್ದಾರೆ. ಅಷ್ಟಕ್ಕೇ ಅವರನ್ನು ವಿರೋಧಿಸುವುದು ಸರಿಯಲ್ಲ. ಇಂದು ಎಲ್ಲಾ ಸಾಂಸ್ಕೃತಿಕ ಆಚರಣೆಗಳನ್ನು ಧರ್ಮಕ್ಕೆ ತಳುಕು ಹಾಕುವ ಧರ್ಮ ರಾಜಕೀಯ ಮಾಡಲಾಗುತ್ತಿದೆ. ಸರ್ಕಾರ ಇದಕ್ಕೆಲ್ಲಾ ಮಣಿಯಬಾರದು. ಕುವೆಂಪು ಆಶಯದ ಸರ್ವ ಜನಾಂಗದ ಶಾಂತಿಯ ತೋಟವಾದ ನಮ್ಮ ಕರ್ನಾಟಕದ ಸೌಹಾರ್ದ ಪರಂಪರೆ ಮುಂದುವರೆಸುವ ನಿಟ್ಟಿನಲ್ಲಿ ನಾಡಿನ ದಸರಾ ಉತ್ಸವ ಜರುಗಲಿ ಎಂದರು.

ಸುದ್ದಿಗೋಷ್ಠಿಯಲ್ಲಿ ಸಾಲಿಡಾರಿಟಿ ಯೂತ್ ಮೂವ್‌ಮೆಂಟ್ ಜಿಲ್ಲಾಧ್ಯಕ್ಷ ಮುದಾಸೀರ್, ಅಹಿಂದಾ ಜನಜಾಗೃತಿ ಸಮಿತಿ ಅಧ್ಯಕ್ಷ ಡೇವಿಡ್, ದಸಂಸ ತಾಲೂಕು ಅಧ್ಯಕ್ಷ ಶಿವರಾಜು, ಮುಸ್ಲಿಂ ಮುಖಂಡ ಖಾಲಿದ್ ಉಪಸ್ಥಿತರಿದ್ದರು.

ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಶಾಸಕ ಅನಿಲ್ ಆಯ್ಕೆ





ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಶಾಸಕ ಅನಿಲ್ ಅವರನ್ನು ಕಾಂಗ್ರೆಸ್ ಮುಖಂಡರು ಅಭಿನಂದಿಸಿದರು. ಮತ್ತೊಂದು ಚಿತ್ರದಲ್ಲಿ ಶಾಸಕರ ತಾಯಿ ನಾಗಮ್ಮ, ಪತ್ನಿ ಸೌಮ್ಯ ಶಾಸಕ ಅನಿಲ್ ಅವರಿಗೆ ಆರತಿ ಎತ್ತಿ ಮನೆಗೆ ಬರಮಾಡಿಕೊಂಡರು.

> ಸತತ 2ನೇ ಬಾರಿಗೆ ಶಾಸಕರಾಗಿ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕ ಅನಿಲ್ ಅವರು ಎಂಸಿಡಿಸಿಸಿ ಬ್ಯಾಂಕ್ ಚುನಾವಣೆಯಲ್ಲಿ ಕೋಟೆ ಕ್ಷೇತ್ರದ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸಿ ಜಯ ಗಳಿಸಿದ್ದಾರೆ. ಮುಂದಿನ ದಿನಗಳಲ್ಲಿ ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಮಾಜಿ ಸಂಸದ ದಿ.ಆರ್.ಧ್ರುವ ನಾರಾಯಣ್ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುವ ಮೂಲಕ ಶಾಸಕ ಅನಿಲ್ ಅವರು ತಾಲೂಕಿನಲ್ಲಿ ಮತ್ತಷ್ಟು ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಜೊತೆಗೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೂ ಶ್ರಮಿಸಲಿ.
> - ಸತೀಶ್‌ಗೌಡ,
> ಎಂಸಿಡಿಸಿಸಿ ಪ್ರತಿನಿಧಿ.

ಹೆಚ್.ಡಿ.ಕೋಟೆ, ಸೆ.10– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್(ಎಂಸಿಡಿಸಿಸಿ) ನಿರ್ದೇಶಕರಾಗಿ ಶಾಸಕ ಅನಿಲ್ ಆಯ್ಕೆಯಾಗಿದ್ದಾರೆ.

ಕಳೆದ 2 ತಿಂಗಳ ಹಿಂದೆ ನಡೆದ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಹೆಚ್.ಡಿ. ಕೋಟೆ ಕ್ಷೇತ್ರದ ನಿರ್ದೇಶಕರ ಸ್ಥಾನಕ್ಕೆ ಶಾಸಕ ಅನಿಲ್ ಮತ್ತು ಗುಂಡತ್ತೂರು ಪ್ರಕಾಶ್ ಸ್ಪರ್ಧಿಸಿದ್ದರು. ಚುನಾವಣೆಯಲ್ಲಿ 17 ಮಂದಿ ಮತ ಚಲಾಯಿಸಿದ್ದರು. ಈ ಪೈಕಿ ಶಾಸಕ ಅನಿಲ್ ಹಾಗೂ ಪ್ರಕಾಶ್ ತಲಾ 8 ಮತಗಳನ್ನು ಪಡೆದಿದ್ದರಿಂದ ಸಮಬಲ ಉಂಟಾಗಿತ್ತು. ಆದರೆ ಕೆಲ ಕಾರಣಗಳಿಂದಾಗಿ ಕೋಟೆ ಕಸಬಾ ಪ್ರಾಥಮಿಕ ಕೃಷಿ ಸಹಕಾರ ಸಂಘದ ಪ್ರತಿನಿಧಿ ದಶರಥ ಅವರು ಚಲಾಯಿಸಿದ್ದ ಮತದ ವಿಚಾರವಾಗಿ ಎರಡೂ ಕಡೆಯವರು ಕೋರ್ಟ್ ಮೆಟ್ಟಿಲೇರಿದ್ದರಿಂದ ಮತ ಎಣಿಕೆಯನ್ನು ತಡೆ ಹಿಡಿಯಲಾಗಿತ್ತು. ನ್ಯಾಯಾಲಯದಲ್ಲಿ ಎರಡೂ ಕಡೆಯವರ ವಾದ ಆಲಿಸಿದ ನ್ಯಾಯಾಧೀಶರು ಸೆ.8ರಂದು ಮತ ಎಣಿಕೆ ಮಾಡುವಂತೆ ತೀರ್ಪು ನೀಡಿ ಆದೇಶಿಸಿದ್ದರು.

ನ್ಯಾಯಾಲಯದ ಆದೇಶದಂತೆ ಮಂಗಳವಾರ (ಸೆ.9) ಚುನಾವಣಾಧಿಕಾರಿ ಆಶಪ್ಪ ಅವರು ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣದ ಉಪ ವಿಭಾಗಾಧಿಕಾರಿಗಳ ಕಚೇರಿಯಲ್ಲಿ ಮತ ಎಣಿಕೆ ಮಾಡಿದ್ದು, ಚುನಾವಣೆಯಲ್ಲಿ ಪಿಎಸಿಎಸ್ ಅಧ್ಯಕ್ಷ ದಶರಥ ಶಾಸಕರ ಪರ ಮತ ಚಲಾಯಿಸಿದ್ದರಿಂದ ಶಾಸಕ ಅನಿಲ್ 9 ಮತಗಳನ್ನು ಪಡೆದು ಜಯಶೀಲರಾಗಿ ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದರು. ಪ್ರತಿಸ್ಪರ್ಧಿ ಗುಂಡತ್ತೂರು ಪ್ರಕಾಶ್ 8 ಮತಗಳನ್ನು ಪರಾಭವಗೊಂಡರು. ಈ ವೇಳೆ ಚುನಾವಣಾಧಿಕಾರಿ ಆಶಪ್ಪ ಅವರು ಶಾಸಕ ಅನಿಲ್ ಅವರಿಗೆ ಪ್ರಮಾಣ ಪತ್ರ ವಿತರಿಸಿದರು.

ತಮ್ಮ ಗೆಲುವಿಗೆ ಕಾರಣರಾದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ದಶರಥ ಅವರನ್ನು ಶಾಸಕ ಅನಿಲ್ ಸನ್ಮಾನಿಸಿದರು. ಈ ಸಂದರ್ಭ ಎಂಸಿಡಿಸಿಸಿ ಬ್ಯಾಂಕ್ ನೂತನ ನಿರ್ದೇಶಕರೂ ಆದ ಶಾಸಕ ಅನಿಲ್ ಅವರನ್ನು ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಅಭಿನಂದಿಸಿದರು. ಅಲ್ಲದೇ ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಈ ವೇಳೆ ಎಂಸಿಡಿಸಿಸಿ ಬ್ಯಾಂಕ್ ಪ್ರತಿನಿಧಿಗಳಾದ ದಶರಥ, ಭಾಸ್ಕರ, ಮನುಗನಹಳ್ಳಿ ಮಾದಪ್ಪ, ಮಹೇಶ್, ಆನಂದ, ಗೋವಿಂದರಾಜು, ಮುಖಂಡರಾದ ರಮೇಶ, ಪ್ರದೀಪ್, ಹೆಚ್.ಸಿ.ನರಸಿಂಹಮೂರ್ತಿ, ರಾಜು ವಿಶ್ವಕರ್ಮ, ಹೋಂಡಾ ನಯಾಜ್, ರವಿ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಸರಗೂರು ಪಪಂ ಸದಸ್ಯ ಶ್ರೀನಿವಾಸ್, ಸ್ವಾನ್ಲಿ, ಗುರುಸ್ವಾಮಿ, ಉಮೇಶ್, ವೆಂಕಿ, ಅಶೋಕ್, ಸೋಮಣ್ಣ, ಮಲ್ಲಿಕಾರ್ಜುನ, ಸೇರಿದಂತೆ ಇನ್ನಿತರರಿದ್ದರು.

ಕೆಲ್ಲಹಳ್ಳಿಯಲ್ಲಿ ಗಣೇಶ ಮೂರ್ತಿ ವಿಸರ್ಜನೆ



ಮೈಸೂರು ತಾಲೂಕು ಜಯಪುರ ಹೋಬಳಿ ಕೆಲ್ಲಹಳ್ಳಿಯಲ್ಲಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿಯನ್ನು ವಿಸರ್ಜನೆ ಮಾಡಲಾಯಿತು. ಇದೇ ವೇಳೆ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗ್ರಾಮಸ್ಥರು ಸನ್ಮಾನಿಸಿದರು. ಗ್ರಾಪಂ ಸದಸ್ಯ ಭೈರೇಶ್, ಮಾಜಿ ಸದಸ್ಯ ವೆಂಕಟೇಶ್, ವಿಜಯ್ ಕುಮಾರ್, ಟಿ.ಪಿ.ನಾಗರಾಜು, ಕಾರ್ತಿಕ್, ನಿಂಗರಾಜು, ಕೆ.ರಾಮಣ್ಣ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಸಮಾಜ ಸೇವಕ ಎಸ್.ಶ್ರೀಕಾಂತ್‌ಗೆ ಸನ್ಮಾನ



ಮೈಸೂರಿನ ವಿದ್ಯಾರಣ್ಯಪುರಂ ಭೂತಾಳೆ ಪಿಚ್ ಬಳಿ ಪ್ರತಿಷ್ಠಾಪಿಸಿದ್ದ ಗಣೇಶ ಮೂರ್ತಿ ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅನ್ನಸಂತರ್ಪಣೆಗೆ ವೈಯುಕ್ತಿಕ ದೇಣಿಗೆ ನೀಡಿದ ಸಮಾಜ ಸೇವಕ ಎಸ್.ಶ್ರೀಕಾಂತ್ ಅವರನ್ನು ಗಣೇಶೋತ್ಸವ ಸಮಿತಿ ಸದಸ್ಯರು ಸನ್ಮಾನಿಸಿದರು. ತಾಪಂ ಮಾಜಿ ಅಧ್ಯಕ್ಷರಾದ ಸಿದ್ದರಾಮೇಗೌಡ, ಹರೀಶ್, ಶೇಖರ್, ರಾಜು ಇತರರಿದ್ದರು.

ಸರ್ಕಾರದ 'ಶಕ್ತಿ ಯೋಜನೆ' ಯಶಸ್ಸಿನಲ್ಲಿ ಸರ್ಕಾರ ಮಾತ್ರವಲ್ಲ ಚಾಲಕ, ನಿರ್ವಾಹಕರ ಪಾತ್ರವೂ ಇದೆ

• ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರ ವಾದ • ಕೆಎಸ್‌ಆರ್‌ಟಿಸಿ ಒಕ್ಕಲಿಗರ ನೌಕರರ ಕ್ಷೇಮಾಭಿವೃದ್ಧಿ ಸಂಘದ 'ತ್ರಿರತ್ನ ಜಯಂತ್ಯುತ್ಸವ' • ನಾಡಪ್ರಭು ಕೆಂಪೇಗೌಡರು, ಡಾ.ಬಾಲಗಂಗಾಧರನಾಥ ಶ್ರೀಗಳು, ಕುವೆಂಪು ಮಹಾಪುರುಷರು

ಮೈಸೂರು, ಸೆ.10(ಎಸ್‌ಪಿಎನ್)– ಕೆಎಸ್‌ಆರ್‌ಟಿಸಿ ಚಾಲಕ ಮತ್ತು ನಿರ್ವಾಹಕರು ನಿತ್ಯ ಕಾಯಕಯೋಗಿಗಳು. ಇವರ ಶ್ರಮದಿಂದ ಸಾರಿಗೆ ಸಂಸ್ಥೆಗೆ ದೇಶಮಟ್ಟದಲ್ಲೇ ಉತ್ತಮ ಹೆಸರು ಬರುತ್ತಿದೆ. ಈ ಕಾಯಕದಲ್ಲಿ ಒಕ್ಕಲಿಗ ಸಮುದಾಯದ ಕೊಡುಗೆಯೂ ಸೇರಿಕೊಂಡಿರುವುದು ಹೆಮ್ಮೆಯ ವಿಷಯ ಎಂದು ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರು ಅಭಿಪ್ರಾಯಪಟ್ಟರು.

ಮೈಸೂರು ಜಗನ್ಮೋಹನ ಅರಮನೆಯಲ್ಲಿ ಕೆಎಸ್‌ಆರ್‌ಟಿಸಿ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ತ್ರಿರತ್ನ ಜಯಂತ್ಯುತ್ಸವ' (ನಾಡಪ್ರಭು ಕೆಂಪೇಗೌಡ, ಡಾ.ಬಾಲಗಂಗಾಧರನಾಥ ಸ್ವಾಮೀಜಿ ಹಾಗೂ ರಾಷ್ಟ್ರಕವಿ ಕುವೆಂಪು)ದಲ್ಲಿ ಭಾಗವಹಿಸಿ ತ್ರಿರತ್ನರಿಗೆ ನುಡಿನಮನ ಸಲ್ಲಿಸಿದರು.

ಇತ್ತೀಚೆಗೆ ರಾಜ್ಯ ಸರ್ಕಾರದಿಂದ ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣಕ್ಕಾಗಿ ಜಾರಿಗೆ ತಂದಿರುವ 'ಶಕ್ತಿ ಯೋಜನೆ' ವರ್ಲ್ಡ್ ರೆಕಾರ್ಡ್ ಆಗಿದ್ದು, ಈ ಸಾಧನೆಯ ಯಶಸ್ಸು ಕೆಎಸ್‌ಆರ್‌ಟಿಸಿ ಚಾಲಕರು ಮತ್ತು ನಿರ್ವಾಹಕರಿಗೆ ಸಲ್ಲಬೇಕು. ಶಕ್ತಿ ಯೋಜನೆ ಜಾರಿಗೆ ತರುವಲ್ಲಿ ರಾಜ್ಯ ಸರ್ಕಾರದ ನಿರ್ಧಾರವಾದರೂ ಅದನ್ನು ಅನುಷ್ಠಾನಗೊಳಿಸಿ, ಯಶಸ್ವಿಗೊಳಿಸಿದವರು ಚಾಲಕರು ಮತ್ತು ನಿರ್ವಾಹಕರು. ಹಾಗಾಗಿ ಇದರ ಸಂಪೂರ್ಣ ಶ್ರೇಯಸ್ಸು ಶ್ರಮಿಕ ವರ್ಗಕ್ಕೆ ಸೇರಬೇಕು ಎಂದರು.

ಚಾಲಕರು ಮತ್ತು ನಿರ್ವಾಹಕರ ಶ್ರಮದಿಂದ ಕೆಎಸ್‌ಆರ್‌ಟಿಸಿ ಸಂಸ್ಥೆಗೆ ದೇಶದಲ್ಲೇ ಉತ್ತಮ ಹೆಸರು ತಂದುಕೊಟ್ಟಿದೆ. ಆದರೆ, ಇದರ ಪ್ರತಿಫಲ ದುಡಿವ ವರ್ಗಕ್ಕೆ ವರ್ಗಾವಣೆ ಆಗುವುದರತ್ತ ಸರ್ಕಾರ ಗಮನ ನೀಡುತ್ತಿಲ್ಲ. ಅದಕ್ಕಾಗಿಯೇ ಚಾಲಕರು ಮತ್ತು ನಿರ್ವಾಹಕರು ಹಾಗಾಗ ಬೀದಿಗಿಳಿದು ನಮ್ಮ ಕಷ್ಟ ಸ್ವಲ್ಪ ಕೇಳಿ ಎಂದು ಅಲವತ್ತುಕೊಳ್ಳುತ್ತಿದ್ದಾರೆ. ಆದರೆ, ಈ ನೋವನ್ನು ಚಾಲಕರು ಮತ್ತು ನಿರ್ವಾಹಕರ ಸ್ಥಾನದಲ್ಲಿ ನಿಂತು ಯಾರೊಬ್ಬರು ಆಲಿಸುತ್ತಿಲ್ಲ ಎಂದು ತೀವ್ರ ಬೇಸರ ಹೊರಹಾಕಿದರು.

ನಾಡಪ್ರಭು ಕೆಂಪೇಗೌಡರು ಸಣ್ಣ ಸಂಸ್ಥಾನದ ರಾಜರಾಗಿದ್ದರು. ವಿಜಯನಗರ ಸಾಮ್ರಾಜ್ಯದ ಸಾಮಂತ ರಾಜರಾಗಿದ್ದುಕೊಂಡೇ ಉತ್ತಮ ಆಡಳಿತ ನೀಡಿದ್ದಾರೆ. ಒಂದು ನಗರವನ್ನು ಕಟ್ಟಲು 500 ವರ್ಷಗಳ ಹಿಂದೆಯೇ ಐದು ಮಾನದಂಡಗಳನ್ನು ಪ್ರಯೋಗಿಸಿದ್ದಾರೆ. ಅದರಲ್ಲಿ ಕೋಟೆ, ದೇವಸ್ಥಾನ, ಕೆರೆ, ಉದ್ಯಾನವನ, ನಗರಾಭಿವೃದ್ಧಿಗೆ ಉತ್ತಮ ಮೂಲಸೌಕರ್ಯ ಒದಗಿಸಿ ಒಂದು ಸುಂದರ ನಗರ ನಿರ್ಮಾಣ ಮಾಡಲು ಸಾಧ್ಯ ಎಂಬುದನ್ನು ಕೆಂಪೇಗೌಡರು ತೋರಿಸಿಕೊಟ್ಟಿದ್ದಾರೆ ಎಂದರು.



ಕೆಎಸ್‌ಆರ್‌ಟಿಸಿ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ 'ತ್ರಿರತ್ನ ಜಯಂತ್ಯೋತ್ಸವ'ದಲ್ಲಿ ಭಾಗವಹಿಸಿ ತ್ರಿರತ್ನರ ಭಾವಚಿತ್ರಕ್ಕೆ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಮೈಸೂರು ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್, ಶಾಸಕ ತನ್ವೀರ್‌ಸೇಠ್, ಹಿರಿಯ ಸಾಹಿತಿ ಪ್ರೊ.ಎಂ.ಕೃಷ್ಣೇಗೌಡರು ಪುಷ್ಪನಮನ ಸಲ್ಲಿಸಿದರು.

ಆದಿಚುಂಚನಗಿರಿ ಮಠದ ಭೈರವೈಕ್ಯ ಡಾ.ಬಾಲಗಂಗಾಧರ ಸ್ವಾಮೀಜಿ ಅವರ ಸಾಧನೆ ಅಜರಾಮರ, ಒಂದು ಜೀವಿತಾವಧಿಯಲ್ಲಿ ಯಾರಿಗೂ ಊಹಿಸದ ರೀತಿಯಲ್ಲಿ ಆದಿಚುಂಚನಗಿರಿ ಮಠವನ್ನು ದೇಶದ ಭೂಪಟದಲ್ಲಿ ಛಾಪು ಮೂಡಿಸಿದ್ದರು. 500ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳಲ್ಲಿ ಕಟ್ಟಿಸಿ, ಲಕ್ಷಾಂತರ ಮಕ್ಕಳಿಗೆ ವಿದ್ಯಾದಾನ ಮಾಡಿದ್ದಾರೆ. 20ನೇ ಶತಮಾನದಲ್ಲಿ ಡಾ.ಬಾಲಗಂಗಾಧರ ಸ್ವಾಮೀಜಿ ಒಕ್ಕಲಿಗರ ಅಸ್ಮಿತೆಯನ್ನು ಮರುಸ್ಥಾಪಿಸಿದರು. ನಿಜಕ್ಕೂ ಅವರ ಸಾಧನೆ ಆಶ್ಚರ್ಯ. ಒಂದು ಜೀವಿತಾವಧಿಯಲ್ಲಿ ಇಷ್ಟೆಲ್ಲಾ ಸಾಧನೆ ಮಾಡಲು ಸಾಧ್ಯವೇ ಎಂದು ನಮ್ಮನ್ನು ನಾವೇ ಪ್ರಶ್ನೆ ಮಾಡಿಕೊಳ್ಳಬೇಕು ಎಂದರು.

ಸಾಹಿತ್ಯ ಕ್ಷೇತ್ರದಲ್ಲಿ ಕುವೆಂಪು ಅವರ ಹೆಸರು 'ಶ್ರೀ ರಾಮಾಯಣ ದರ್ಶನಂ' ಕೃತಿ ಇರುವತನಕ ಇರಲಿದೆ. 'ಕಾನೂರು ಸುಬ್ಬಮ್ಮ ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು' ಸೇರಿದಂತೆ ಹಲವು ಕೃತಿಗಳನ್ನು ನೀಡಿದ್ದಾರೆ. ಇದರ ಜೊತೆಗೆ ಉತ್ತಮ ಕವಿತೆಗಳನ್ನು ಬರೆದು ಲೋಕ ಖ್ಯಾತಿ ಗಳಿಸಿದ್ದಾರೆ. ಈ ಮೂರು ರತ್ನ ನಮ್ಮ ಸಮಾಜದಲ್ಲಿ ಹುಟ್ಟಿದರೂ, ಅವರ ಸಾಧನೆ ಲೋಕಕಲ್ಯಾಣಕ್ಕಾಗಿ ಎಂಬುದನ್ನು ಯಾರೂ ಮರೆಯಬಾರದು ಎಂದರು.

ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಡಾ.ಬಾಲಗಂಗಾಧರನಾಥ ಸ್ವಾಮೀಜಿಯೊಂದಿಗೆ ನನಗೆ ನಿಕಟ ಸಂಪರ್ಕವಿತ್ತು. 1978ರಲ್ಲಿ ಒಮ್ಮೆ ಬಾಲಗಂಗಾಧರ ಸ್ವಾಮೀಜಿ ಏಕಾಏಕಿ ದೂರವಾಣಿ ಕರೆ ಮಾಡಿ, ಮಠಕ್ಕೆ ಬರುವಂತೆ ಸೂಚಿಸಿದರು. ನಾನು, ಏಕೆ ಸ್ವಾಮೀಜಿ ಎಂದು ಮರು ಪ್ರಶ್ನೆ ಹಾಕಿದೆ. ಅದಕ್ಕವರು ಮಾತಾಡುವುದಿದೆ, ಮಠಕ್ಕೆ ಬನ್ನಿ ಎಂದು ಆಹ್ವಾನ ನೀಡಿದರು. ಆಗ ತಾನೇ ಚುನಾವಣೆಯಲ್ಲಿ ಸೋತು ವ್ಯವಸಾಯ ಮಾಡಿಕೊಂಡು ಪಿರಿಯಾಪಟ್ಟಣದಲ್ಲಿದ್ದೆ. ಸ್ವಾಮೀಜಿ ಕರೆಯಂತೆ ಮಠಕ್ಕೆ ಹೋಗಿ ಭೇಟಿಯಾದೆ, ಪಿರಿಯಾಪಟ್ಟಣದಲ್ಲಿ ಒಕ್ಕಲಿಗ ಸಮಾಜವನ್ನು ಸಂಘಟಿಸಬೇಕಾಗಿದೆ. ನಿಮ್ಮ ಸಹಾಯಬೇಕು ಎಂದು ಕೇಳಿದರು.

ಪಿರಿಯಾಪಟ್ಟಣದಲ್ಲಿ ಸಮುದಾಯದ ಯುವಕರಿಗೆ ವಿದ್ಯಾಭ್ಯಾಸ ನೀಡಲು ಸಂಸ್ಥೆ ಕಟ್ಟಲು ಯೋಜನೆ ರೂಪಿಸಿದರು. ಆದರೆ, ಆ ವೇಳೆಗೆ ಹಣ ಕೊರತೆ ಎದುರಾಯಿತು. ಆಗ ಸ್ವಾಮೀಜಿ ಧೈರ್ಯಮಾಡಿ ಒಂದು ಸಂಸ್ಥೆಯನ್ನು ಸ್ಥಾಪಿಸಿದರು. ಪ್ರಸ್ತುತ ಅದು ಬೃಹತ್ ಮಟ್ಟದಲ್ಲಿ ಬೆಳೆದಿದೆ. ಕುವೆಂಪು ಅವರು ಸಾಹಿತ್ಯ ಕ್ಷೇತ್ರದಲ್ಲಿ, ಕೆಂಪೇಗೌಡರು ಉತ್ತಮ ಆಳ್ವಿಕೆಗೆ ಹೆಸರಾದ ಪ್ರಸಂಗಗಳನ್ನು ಉದಾಹರಣೆ ಸಮೇತ ವಿವರಿಸಿದರು.

> ಒಕ್ಕಲಿಗ ಸಮುದಾಯ ಕೃಷಿಯನ್ನು ನಂಬಿ ಜೀವನ ಕಟ್ಟಿಕೊಂಡಿರುವ ಸಮಾಜ. ಭೂಮಿಯನ್ನು ನಂಬಿದವರು ಎಂದಿಗೂ ಸ್ವಾರ್ಥಿಗಳಾಗಿ ಬದುಕಲು ಸಾಧ್ಯವೇ ಇಲ್ಲ. ಹಾಗಾಗಿ ಇತರೆ ಸಮುದಾಯದೊಂದಿಗೆ ಸಹಬಾಳ್ವೆ ಜೀವನ ನಡೆಸುತ್ತಿದ್ದಾರೆ. ಇದರ ನಡುವೆ ವಿಶ್ವಮಾನ್ಯ ಸಾಧಕರಾದ ನಾಡಪ್ರಭು ಕೆಂಪೇಗೌಡ, ರಾಷ್ಟ್ರಕವಿ ಕುವೆಂಪು, ಡಾ.ಬಾಲಗಂಗಾಧರ ಸ್ವಾಮೀಜಿ ಅವರನ್ನು ಈ ಲೋಕಕ್ಕೆ ನೀಡಿದ ಕೀರ್ತಿ ಒಕ್ಕಲಿಗ ಸಮುದಾಯಕ್ಕೆ ಸಲ್ಲುತ್ತದೆ.
>
> - ಎಂ.ಕೃಷ್ಣೇಗೌಡರು, ಹಿರಿಯ ಸಾಹಿತಿ

ಮಾಜಿ ಸಚಿವ ತನ್ವೀರ್‌ಸೇಠ್ ಮಾತನಾಡಿ, ನಮ್ಮ ಕುಟುಂಬಕ್ಕೂ ಆದಿಚುಂಚನಗಿರಿ ಮಠಕ್ಕೂ 40 ವರ್ಷಗಳ ಅವಿನಾಭಾವ ಸಂಬಂಧವಿದೆ. ನಮ್ಮ ತಂದೆ ಸಾರಿಗೆ ಸಚಿವರಾಗಿದ್ದಾಗ, ಈ ಸಂಸ್ಥೆ ಲಾಭದಾಯಕವಾಗಿತ್ತು. ಈಗಿನ ಪರಿಸ್ಥಿತಿ ಬೇರೆಯೇ ಇದೆ. ನಮ್ಮ ತಂದೆ ಸಚಿವರಾಗಿದ್ದಾಗ ಎಂದಿಗೂ ನಾನು, ಆ ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿಲ್ಲ. ಪ್ರಸ್ತುತ ನಾನು ಶಾಸಕನಾಗಿ, ಸಚಿವನಾಗಿಯೂ ಕೆಲಸ ಮಾಡಿದ್ದೇನೆ. ಎಲ್ಲಿಯೂ ನಮ್ಮ ಕುಟುಂಬ ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಹಸ್ತಕ್ಷೇಪ ಮಾಡಿಲ್ಲ. ಮಾಡುವುದೂ ಇಲ್ಲ. ನಮ್ಮ ತಂದೆ ನನಗೆ ಅಧಿಕಾರ ವ್ಯಾಮೋಹದಿಂದ ದೂರ ಇಟ್ಟಿದ್ದರು. ಮುಂದೆ ಇದೇ ಸಂಗತಿ ಕಾರ್ಯಕರ್ತರ ಒತ್ತಾಸೆ ಮೇರೆಗೆ ನನ್ನನ್ನು ಶಾಸಕನಾಗಿ ಆಯ್ಕೆ ಮಾಡುವ ಪ್ರಸಂಗ ಒದಗಿಬಂತು ಎಂದರು.

ಈ ವೇಳೆ ಕೆಎಸ್‌ಆರ್‌ಟಿಸಿಯಲ್ಲಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಆದಿಚುಂಚನಗಿರಿ ಮೈಸೂರು ಶಾಖಾಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮೈಸೂರು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್, ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ರವಿಕುಮಾರ್, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾಶಂಕರೇಗೌಡ, ಕೆ.ವಿ.ಶ್ರೀಧರ್, ಪ್ರಶಾಂತ್‌ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ.ಮಂಜೇಗೌಡ, ಪ್ರಧಾನ ಕಾರ್ಯದರ್ಶಿ ಚೇತನ್, ಕರ್ನಾಟಕ ರಾಜ್ಯ ಕೆಎಸ್‌ಆರ್‌ಟಿಸಿ ನೌಕರರ ಕೂಟ ಮೈಸೂರು ಜಿಲ್ಲಾಧ್ಯಕ್ಷ ವಿಶ್ವನಾಥ್ ಸೇರಿದಂತೆ ಇತರರಿದ್ದರು.

ಏಷ್ಯಾಕಪ್ ಟಿ20: ಭಾರತ ಶುಭಾರಂಭ

ಯುಎಇ ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವು



ಸಹ ಆಟಗಾರರೊಂದಿಗೆ ಕುಲ್ದೀಪ್ ಯಾದವ್ ಸಂಭ್ರಮ.

ದುಬೈ, ಸೆ.10(ವಿವಿಹೆಚ್)– ಕುಲ್ದೀಪ್ ಯಾದವ್ ಮತ್ತು ಶಿವಂ ದುಬೆ ಅವರುಗಳ ಮಾರಕ ಬೌಲಿಂಗ್‌ನಿಂದ ಭಾರತ ಬುಧವಾರ ನಡೆದ ಏಷ್ಯಾಕಪ್ ಟಿ20 ಕ್ರಿಕೆಟ್ ಟೂರ್ನಿಯ ಪ್ರಥಮ ಪಂದ್ಯದಲ್ಲಿ ಕ್ರಿಕೆಟ್ ಜಗತ್ತಿನ ಶಿಶು ಯುನೈಟೆಡ್ ಅರಬ್ ಎಮಿರೇಟ್ಸ್ (ಯುಎಇ) ವಿರುದ್ಧ 9 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸುವ ಮೂಲಕ ಶುಭಾರಂಭ ಮಾಡಿದೆ.

ದುಬೈ ಅಂತರಾಷ್ಟ್ರೀಯ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಭಾರತ ಮತ್ತು ಯುಎಇ ನಡುವಣ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಯುಎಇ ಕುಲ್ದೀಪ್ ಯಾದವ್ ಮತ್ತು ಶಿವಂ ದುಬೆ ಅವರ ಕರಾರುವಕ್ಕಾದ ಬೌಲಿಂಗ್ ದಾಳಿಗೆ ಮಣಿದು 13.1 ಓವರ್‌ಗಳಲ್ಲಿ ತನ್ನೆಲ್ಲಾ ವಿಕೆಟ್ ಕಳೆದುಕೊಂಡು ಕೇವಲ 57 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಭಾರತ 4.3 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 60 ರನ್ ಗಳಿಸಿ 9 ವಿಕೆಟ್‌ಗಳ ಅಂತರದಿಂದ ಗೆದ್ದುಬೀಗಿತು.

ಮೊದಲು ಬ್ಯಾಟ್ ಮಾಡಿದ ಯುಎಇ ಪರ ಅಲಿಶಾನ್ ಶರಾಫು 22, ನಾಯಕ ಮುಹಮ್ಮದ್ ವಾಸೀಮ್ 19 ರನ್ ಗಳಿಸಿದರು. ಈ ಜೋಡಿ 3.4 ಓವರ್‌ಗಳಲ್ಲಿ 26 ರನ್ ಪೇರಿಸಿತು. ಉಳಿದವರ್‍ಯಾರು ಒಂದಕ್ಕಿ ಮೊತ್ತ ದಾಟಲು ಆಗದೆ ವಿಕೆಟ್ ಒಪ್ಪಿಸಿ ಪೆವಿಲಿಯನ್‌ಗೆ ಹಿಂತಿರುಗಿದರು. ಭಾರತ ಪರವಾಗಿ ಕುಲ್ದೀಪ್ 2.1 ಓವರ್ ಬೌಲಿಂಗ್ ಮಾಡಿ 7 ನೀಡಿ ಪ್ರಮುಖ 4 ವಿಕೆಟ್ ಪಡೆದು ಮಿಂಚಿದರು. ಶಿವಂ ದುಬೆ ಸಹಾ 2 ಓವರ್ ಮಾಡಿ 4 ರನ್ ನೀಡಿ 3 ವಿಕೆಟ್ ಕಬಳಿಸಿದರು. ಉಳಿದಂತೆ ಬುಮ್ರಾ, ಅಕ್ಷರ್ ಪಟೇಲ್ ಮತ್ತು ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಹಂಚಿಕೊಂಡರು.

ಈ ಅಲ್ಪಮೊತ್ತ ಬೆನ್ನತ್ತಿದ ಭಾರತ ತಂಡ ಆರಂಭಿಕ ಜೋಡಿ 3.5 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 48 ರನ್ ಗಳಿಸಿತು. ಅಭಿಷೇಕ್ ಶರ್ಮಾ 30(16) ರನ್ ಗಳಿಸಿ ಔಟಾದರೇ, ಶುಭ್‌ಮನ್ ಗಿಲ್ ಅಜೇಯರಾಗಿ ಉಳಿದು 20(9) ರನ್ ಬಾರಿಸಿದರು.

ಬಳಿಕ ಬಂದ ನಾಯಕ ಸೂರ್ಯಕುಮಾರ್ ಯಾದವ್ ಕೇವಲ 2 ಎಸೆತಗಳಲ್ಲಿ 7 ರನ್ ಗಳಿಸಿ ತಂಡಕ್ಕೆ ಗೆಲುವು ತಂದುಕೊಟ್ಟರು. ಉತ್ತಮ ಬೌಲಿಂಗ್ ಪ್ರದರ್ಶನ ನೀಡಿದ ಕುಲ್ದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸೆ.14ರಂದು ಚಿತ್ರಕಲಾ ಸ್ಪರ್ಧೆ

ಮೈಸೂರು: ಬಸವ ಬಳಗ ಪೂರ್ವ ವಲಯ ಟ್ರಸ್ಟ್ ವತಿಯಿಂದ ಸೆ. 14ರ ಭಾನುವಾರ ಬೆಳಿಗ್ಗೆ 9.30 ಕ್ಕೆ ಡಾ. ಶ್ರೀ ಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿಯ ಅಂಗವಾಗಿ 1 ರಿಂದ 10ನೇ ತರಗತಿಯ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು # 599 ಮಳಿಗೆ ಕೆ ಆರ್ ಶ್ರೀನಿವಾಸ್ ಐ ಪಿ ಎಸ್ ನಗರ ಮೆಡಿ ಪ್ಲೇಸ್ ಮುಖ್ಯ ರಸ್ತೆ ಮೈಸೂರು ಇಲ್ಲಿ ಆಯೋಜಿಸಲಾಗಿದೆ. ನೊಂದಾಯಿಸಿಕೊಳ್ಳಲು ಸಂಪರ್ಕಿಸಿ: 7483505771, 8884942102

ಅಕ್ರಮ ಗಣಿಗಾರಿಕೆ ತಡೆ, ಆಸ್ತಿ ಜಪ್ತಿ ಕಾನೂನಿಗೆ ಅಧಿಕೃತ ಮುದ್ರೆ

ರಾಜ್ಯ ಗೆಜೆಟ್‌ನಲ್ಲಿ ಪ್ರಕಟ

ಬೆಂಗಳೂರು, ಸೆ.10– ಅಕ್ರಮ ಗಣಿಗಾರಿಕೆ ವಿರುದ್ಧದ ಕ್ರಮಗಳನ್ನು ಬಲಪಡಿಸುವ ಮತ್ತು ಕಾನೂನುಬಾಹಿರ ವಿಧಾನಗಳ ಮೂಲಕ ಸಂಗ್ರಹಿಸಲಾದ ಆಸ್ತಿಗಳನ್ನು ವಶಪಡಿಸಿಕೊಳ್ಳಲು ರಾಜ್ಯ ಸರ್ಕಾರ ಹೊಸ ಕಾನೂನು ಜಾರಿಗೊಳಿಸಿದೆ.

ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರು ಸೆ.9 ರಂದು ಕರ್ನಾಟಕ ಅಕ್ರಮ ಗಣಿಗಾರಿಕೆ ಮತ್ತು ಕಾನೂನುಬಾಹಿರ ಸ್ವತ್ತನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮತ್ತು ಜಪ್ತಿಗಾಗಿ ವಸೂಲಾತಿ ಆಯುಕ್ತರ ನೇಮಕಾತಿ ಅಧಿನಿಯಮ–2025ಕ್ಕೆ ಸಹಿ ಹಾಕಿದ್ದು, ಬುಧವಾರ ಅದನ್ನು ರಾಜ್ಯ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ರಾಜ್ಯದಾದ್ಯಂತ ಜಪ್ತಿ ಮತ್ತು ಮುಟ್ಟುಗೋಲು ಪ್ರಕ್ರಿಯೆಗಳನ್ನು ಮೇಲ್ವಿಚಾರಣೆ ಮಾಡಲು ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಗಿಂತ ಕಡಿಮೆಯಿಲ್ಲದ ಹಿರಿಯ ಅಧಿಕಾರಿಯನ್ನು ವಸೂಲಾತಿ ಆಯುಕ್ತರಾಗಿ ನೇಮಕ ಮಾಡುವುದಕ್ಕೆ ಈ ಕಾಯ್ದೆ ಅವಕಾಶ ನೀಡುತ್ತದೆ. ಕಾಯ್ದೆಯಡಿ ವಸೂಲಾತಿ ಆಯುಕ್ತರು ಅಕ್ರಮ ಗಣಿಗಾರಿಕೆಯಿಂದ ಸಂಪಾದಿಸಿದ ಚರ ಮತ್ತು ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವ, ಅಧೀನ ಅಧಿಕಾರಿಗಳನ್ನು ಮೇಲ್ವಿಚಾರಣೆ ಮಾಡುವ ಮತ್ತು ಸಿವಿಲ್ ನ್ಯಾಯಾಲಯಕ್ಕೆ ಸಮಾನವಾದ ಅಧಿಕಾರವನ್ನು ಚಲಾಯಿಸುವ ಅಧಿಕಾರ ಹೊಂದಿರುತ್ತಾರೆ.

ರಾಜ್ಯದಲ್ಲಿ ಲೆಕ್ಕವಿಲ್ಲದಷ್ಟು ಸಂಖ್ಯೆಯ ಗುತ್ತಿಗೆದಾರರು, ಸಾಗಾಣಿಕೆದಾರರು, ರಫ್ತುದಾರರು, ದಾಸ್ತಾನುದಾರರು, ಖರೀದಿದಾರರು ಮತ್ತು ಇತರ ಮಧ್ಯವರ್ತಿಗಳು ಸೇರಿದಂತೆ ಬಹುವಹಿವಾಟುಗಳನ್ನು ಒಳಗೊಂಡ ಅಕ್ರಮ ಗಣಿಗಾರಿಕೆ ಚಟುವಟಿಕೆಗಳಿಂದ ಸಂಘಟಿತ ಅಪರಾಧ, ವ್ಯವಸ್ಥಿತ ಒಳಸಂಚು ಮತ್ತು ಅಪರಾಧ ಉತ್ಪತ್ತಿಗಳಿಂದಾದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲು, ಜಪ್ತಿ ಮಾಡಲು, ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ವಸೂಲಿ ಆಯುಕ್ತರೊಬ್ಬರ ನೇಮಕಾತಿಯ ಅವಶ್ಯಕತೆಯನ್ನು ಸರ್ಕಾರ ಮನಗಂಡು ಈ ಅಧಿನಿಯಮ ವನ್ನು ವಿಧಾನ ಮಂಡಲದ ಉಭಯ ಸದನಗಳಲ್ಲಿ ಮಂಡಿಸಿ, ಒಪ್ಪಿಗೆ ಪಡೆದು ಇಂದು ಅಧಿಸೂಚಿಸಿದೆ.

ದೀಪಾಲಂಕಾರಕ್ಕಾಗಿ ಅವೈಜ್ಞಾನಿಕವಾಗಿ ಕಬ್ಬಿಣದ ಕಂಬ ಅಳವಡಿಕೆ; ವಾಹನ ಸವಾರರಿಗೆ ಕಂಟಕ



ಮೈಸೂರು,ಸೆ.10(ಪಿಎಂ)– ದಸರಾಗೆ ದಿನ ಗಣನೆ ಆರಂಭವಾಗಿದ್ದು, ನಗರದ ವಿವಿಧ ರಸ್ತೆಗಳಲ್ಲಿ ವಿದ್ಯುತ್ ದೀಪಾಲಂಕಾರ ಕಾರ್ಯ ಭರದಿಂದ ಸಾಗಿದೆ. ಈ ನಡುವೆ ದೀಪಾಲಂಕಾರ ಮಾಡುವ ಸಲುವಾಗಿ ಬೋಗಾದಿ ರಸ್ತೆಯಲ್ಲಿ ಅಳವಡಿಸಿರುವ ಕಬ್ಬಿಣದ ಕಂಬಗಳು ವಾಹನ ಸವಾರರ ಪಾಲಿಗೆ ಕಿರಿಕಿರಿಯಾಗಿ ಪರಿಣಮಿಸಿವೆ. ಅವುಗಳನ್ನು ರಸ್ತೆಬದಿಗೆ ಬದಲಾಗಿ ರಸ್ತೆಯಲ್ಲೇ ಅಳವಡಿಸಿರುವುದು ಇದಕ್ಕೆ ಕಾರಣ.

ಈ ರೀತಿ ಅವೈಜ್ಞಾನಿಕವಾಗಿ ಕಂಬಗಳನ್ನು ನೆಟ್ಟಿರುವುದು ಏಕೆಂದು ಗೊತ್ತಿಲ್ಲ. ಆದರೆ ಸವಾರರು ಇವುಗಳಿಂದಾಗಿ ಸಣ್ಣಪುಟ್ಟ ಅಪಘಾತಕ್ಕೀಡಾಗುತ್ತಿದ್ದಾರೆ. ಅವರ ವಾಹನಗಳಿಗೂ ಹಾನಿ ಯಾಗುತ್ತಿದೆ. ಮೈಸೂರಿನ ಬೋಗಾದಿ ರಸ್ತೆಯಲ್ಲಿ (ಕ್ರಾಫರ್ಡ್ ಭವನ ಪಕ್ಕದ ರಸ್ತೆ) ಈ ರೀತಿಯಲ್ಲಿ 3 ಕಂಬಗಳಿದ್ದು, ಅವುಗಳನ್ನು ಶೀಘ್ರವೇ ರಸ್ತೆಬದಿಗೆ ಅಳವಡಿಸಬೇಕೆಂದು ಸಾರ್ವಜನಿಕರು ಆಗ್ರಹಿಸಿದ್ದಾರೆ. ಇಂತಹ ಅವೈಜ್ಞಾನಿಕ ಕ್ರಮದಿಂದ ಈಗ ಗಲೇ ಅನೇಕ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೀಡಾಗಿದ್ದಾರೆ. ಸದ್ಯ ಸಣ್ಣಪುಟ್ಟ ಗಾಯಗಳಿಂದ ಅವರು ಪಾರಾಗಿದ್ದು, ದೊಡ್ಡ ಮಟ್ಟದ ಅನಾಹುತಕ್ಕೆ ಆಸ್ಪದವಾಗದಂತೆ ಎಚ್ಚೆತ್ತುಕೊಳ್ಳುವುದು ತುರ್ತು ಅಗತ್ಯವಾಗಿದೆ. ಇಲ್ಲವಾದರೆ ಭಾರಿ ಅನಾಹುತ ಸಂಭವಿಸಿದರೂ ಅಚ್ಚರಿ ಇಲ್ಲ. ಅಂತಹ ದುರ್ಘಟನೆಗೆ ಆಸ್ಪದವಾಗದಂತೆ ಸಂಬಂಧಿಸಿದವರು ಶೀಘ್ರವೇ ಕ್ರಮ ವಹಿಸಬೇಕಿದೆ.

ಪದವಿ ಕಾಲೇಜುಗಳಿಗೆ ತುರ್ತಾಗಿ ಅತಿಥಿ ಉಪನ್ಯಾಸಕರ ನೇಮಕಕ್ಕೆ ಆಗ್ರಹ

ಮೈಸೂರು, ಸೆ.10–ಪದವಿ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಿಲ್ಲದೆ ತರಗತಿಗಳು ನಡೆಯದ ಕಾರಣ ವಿದ್ಯಾರ್ಥಿಗಳು ಆತಂಕದ ಪರಿಸ್ಥಿತಿ ಎದುರಿಸುತ್ತಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸುಧಾಕರ್, ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರಿಗೆ ಪತ್ರ ಬರೆದಿರುವ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಶೀಘ್ರವೇ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು ಎಂದು ಒತ್ತಾಯಿಸಿದ್ದಾರೆ.



ಕೆ.ವಿವೇಕಾನಂದ

ಅತಿಥಿ ಉಪನ್ಯಾಸಕರ ನೇಮಕಾತಿ ವಿಳಂಬವಾಗಿರುವುದರಿಂದ ಪ್ರಸಕ್ತ ಶೈಕ್ಷಣಿಕ ವರ್ಷದ ಎಲ್ಲಾ ಆರಂಭಿಕ ಸೆಮಿಸ್ಟರ್‌ಗಳ ಪರೀಕ್ಷೆಯನ್ನು ವಿದ್ಯಾರ್ಥಿಗಳು ಪಾಠವಿಲ್ಲದೆಯೇ ಎದುರಿಸಬೇಕಾದ ಪರಿಸ್ಥಿತಿ ಒದಗಿ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳ ಭವಿಷ್ಯದಲ್ಲಿ ಚೆಲ್ಲಾಟವಾಡದೇ ಆದಷ್ಟು ಬೇಗ ಹೊಸದಾಗಿ ಕೌನ್ಸೆಲಿಂಗ್ ನಡೆಸಿ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಬೇಕು. ಯುಜಿಸಿ, ಯುಜಿಸಿ ಯೇತರರು ಎಂಬ ತಾರತಮ್ಯ ಮಾಡದೇ ಹಲವು ವರ್ಷಗಳಿಂದ ಅತಿಥಿ ಉಪನ್ಯಾಸಕರನ್ನಾಗಿ ಸೇವೆ ಸಲ್ಲಿಸುವವರನ್ನು ನೇಮಕಾತಿಗೆ ಪ್ರಥಮ ಆದ್ಯತೆ ಮೇರೆಗೆ ಪರಿಗಣಿಸಿ, ನ್ಯಾಯಾಲಯದಲ್ಲಿರುವ ವ್ಯಾಜ್ಯವನ್ನು ಶೀಘ್ರದಲ್ಲೇ ಪರಿಹರಿಸಲು ಇಲಾಖೆಯು ಕಾರ್ಯೋನ್ಮುಖವಾಗಿ ಗೊಂದಲಕ್ಕೆ ತೆರೆ ಎಳೆಯಬೇಕು ಎಂದು ವಿವೇಕಾನಂದ ಒತ್ತಾಯಿಸಿದ್ದಾರೆ.

ಮದ್ದೂರಲ್ಲಿ 500 ಹಿಂದೂಗಳ ವಿರುದ್ಧವೂ ಪ್ರಕರಣ ದಾಖಲು

ಮದ್ದೂರು: ಮದ್ದೂರಿನಲ್ಲಿ ಭಾನುವಾರ ಸಂಜೆ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ನಡೆದ ಕಲ್ಲು ತೂರಾಟ ಖಂಡಿಸಿ ಸೋಮವಾರ ಹಿಂದೂಪರ ಸಂಘಟನೆಗಳು ನಡೆಸಿದ ಪ್ರತಿಭಟನೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿ ಮಹಿಳೆಯರು ಸೇರಿ 500 ಹಿಂದೂಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ಪ್ರತಿಭಟನಾ ಮೆರವಣಿಗೆ ವೇಳೆ ನಗರದ ಕೆಮ್ಮಣ್ಣು ನಾಲಾ ಸಮೀಪದ ಮುಖ್ಯ ಮಸೀದಿ ಬಳಿ ಕರ್ಪೂರ ಮತ್ತು ಟೈರ್‌ಗೆ ಬೆಂಕಿ ಹಚ್ಚಿ, ಭಗವಾಧ್ವಜ ಹಾರಿಸಿ, ಆಕ್ರೋಶ ವ್ಯಕ್ತಪಡಿಸಲಾಗಿತ್ತು. ಈ ವೇಳೆ, ಪ್ರತಿಭಟನಾಕಾರರ ಮೇಲೆ ಒಂದು ಗುಂಪು ಕಲ್ಲು ತೂರಾಟ ನಡೆಸಿ, ಮಾರಕಾಸ್ತ್ರಗಳನ್ನು ಝಳಪಿಸಿತು. ಇದರಿಂದ ರೊಚ್ಚಿಗೆದ್ದ ಹಿಂದೂ ಕಾರ್ಯಕರ್ತರು ಕಲ್ಲು ತೂರಾಟ ನಡೆಸಿದಾಗ, ಪೊಲೀಸರು ಲಾಠಿ ಪ್ರಹಾರ ನಡೆಸಿ ಉದ್ರಿಕ್ತ ಗುಂಪನ್ನು ಚದುರಿಸಿದ್ದರು. ಈ ವೇಳೆ, ಕಲ್ಲು ತೂರಾಟಕ್ಕೆ ಸಂಬಂಧಿಸಿದಂತೆ ಗಿರೀಶ್, ಸೌಮ್ಯ, ರಮ್ಯ, ಪಲ್ಲವಿ ಎಂಬುವರು ಸೇರಿ 500 ಹಿಂದೂಗಳ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಈ ಮಧ್ಯೆ, ಪ್ರತಿಭಟನಾ ಮೆರವಣಿಗೆ ನಡೆದ ವೇಳೆ ನಡೆದ ಕಲ್ಲು ತೂರಾಟ ಪ್ರಕರಣ, ಮುಸ್ಲಿಂ ಬಾವುಟಕ್ಕೆ ಬೆಂಕಿ ಹಚ್ಚಿ, ಬಂಟಿಂಗ್ಸ್ ಕಿತ್ತೆಸೆದವರು ಹಾಗೂ ಪ್ರತಿಭಟನಾ ಮೆರವಣಿಗೆ ವೇಳೆ ಮಸೀದಿಗೆ ನುಗ್ಗಲು ಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಒಟ್ಟೂ 5 ಎಫ್‌ಐಆರ್‌ಗಳು ದಾಖಲಾಗಿವೆ.

ಮದ್ದೂರು ಬಂದ್ ಶಾಂತಿಯುತ: ಈ ಮಧ್ಯೆ, ಪಟ್ಟಣದಲ್ಲಿ ಭಾನುವಾರ ರಾತ್ರಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ಮೇಲೆ ಅನ್ಯಕೋಮಿನ ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿರುವುದನ್ನು ಖಂಡಿಸಿ ಹಿಂದೂಪರ ಸಂಘಟನೆಗಳು ಕರೆ ನೀಡಿದ್ದ ಮಂಡ್ಯ ಜಿಲ್ಲೆ ಮದ್ದೂರು ಬಂದ್‌ಗೆ ಮಂಗಳವಾರ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಪಟ್ಟಣದ ರಾಮ್ ರಹೀಮ್ ನಗರ ಹಾಗೂ ಚನ್ನೇಗೌಡ ಬಡಾವಣೆಯಲ್ಲಿ ಮಹಿಳೆಯರ ಎರಡು ಗುಂಪುಗಳ ನಡುವೆ ನಡೆದ ಘರ್ಷಣೆ ಸೇರಿ ಕೆಲವೊಂದು ಸಣ್ಣಪುಟ್ಟ ಘಟನೆಗಳನ್ನು ಹೊರತುಪಡಿಸಿದರೆ ಬಂದ್ ಬಹುತೇಕ ಶಾಂತಿಯುತವಾಗಿತ್ತು ವರ್ತಕರು, ಹೋಟೆಲ್ ಮಾಲೀಕರುಗಳು ತಮ್ಮ ವ್ಯಾಪಾರ ವಹಿವಾಟುಗಳನ್ನು ಸ್ಥಗಿತಗೊಳಿಸಿ ಬಂದ್‌ಗೆ ಸ್ವಯಂಪ್ರೇರಿತವಾಗಿ ಬೆಂಬಲ ನೀಡಿದರು.

ಸಿದ್ದಲಿಂಗಪುರ ಗ್ರಾಪಂ ಬಿಲ್ ಕಲೆಕ್ಟರ್‌ಗೆ ಹಿಂಬಡ್ತಿ

ಮೈಸೂರು, ಸೆ 10– ಮೈಸೂರಿನ ಸಿದ್ದಲಿಂಗಪುರ ಗ್ರಾಪಂ ಬಿಲ್ ಕಲೆಕ್ಟರ್ ಎನ್.ಕೆ. ರಮೇಶ್ ಅವರಿಗೆ ಹಿಂಬಡ್ತಿ ನೀಡಿ, ನೀರು ಗಂಟಿಯಾಗಿ ಮುಂದುವರೆಸಲು ಗ್ರಾಪಂನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ರಮೇಶ್ ಅವರಿಗೆ ಬಿಲ್ ಕಲೆಕ್ಟರ್ ಆಗಿ ಜೂನ್ 27 ರಂದು ಮುಂಬಡ್ತಿ ನೀಡಲಾಗಿತ್ತು. ಆದರೆ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ವಿಚಾರಣೆ ಎದುರಿಸಿದ್ದಲ್ಲದೆ ಗ್ರಾಪಂಗೆ ಪತ್ರ ಬರೆದಿದ್ದ ದಸಂಸ ಭೀಮ ಬಲದ ರಾಜ್ಯ ಉಪಾಧ್ಯಕ್ಷ ಬೀಮಪುತ್ರ ಪ್ರಸನ್ನ ಅವರು, ರಮೇಶ್ ಅವರ ಮುಂಬಡ್ತಿಯನ್ನು ಪ್ರಶ್ನಿಸಿದ್ದರು.

ಈ ಹಿನ್ನೆಲೆಯಲ್ಲಿ ಸೆ. 9 ರಂದು ನಡೆದ ಗ್ರಾಪಂ ಸಾಮಾನ್ಯ ಸಭೆಯಲ್ಲಿ ರಮೇಶ್ ಅವರು ಯಾವುದೇ ಕ್ರಿಮಿನಲ್ ಪ್ರಕರಣ ಇಲ್ಲವೆಂದು ಪೊಲೀಸ್ ವೆರಿಫಿಕೇಷನ್ ಸರ್ಟಿಫಿಕೇಟ್ ಸಲ್ಲಿಸುವವರೆಗೂ ಅವರಿಗೆ ಬಿಲ್ ಕಲೆಕ್ಟರ್ ಆಗಿ ನೀಡಿದ್ದ ಮುಂಬಡ್ತಿಯನ್ನು ಅಮಾನತುಪಡಿಸಿ, ನೀರು ಗಂಟಿಯಾಗಿ ಮುಂದುವರೆಯುವಂತೆ ನಿರ್ಣಯ ಕೈಗೊಂಡು ಆ ಸಂಬಂಧ ಆದೇಶ ಹೊರಡಿಸಲಾಗಿದೆ.

ನಿಧನ



ಶ್ರೀ ಉದಯರವಿ ಪ್ರಕಾಶ್. ಕೆ ಆರ್

ವಾಣಿಜ್ಯ ಶಾಸ್ತ್ರದ ಉಪನ್ಯಾಸಕರು, ಸರ್ಕಾರಿ ಪದವಿ ಪೂರ್ವ ಕಾಲೇಜು ಹೊಮ್ಮರಗಳ್ಳಿ

ಇವರು ದಿ.10–09–2025ರಂದು ದೈವಾಧೀನರಾಗಿದ್ದು ಇವರ ಅಂತ್ಯಕ್ರಿಯೆ ದಿನಾಂಕ 11.09.2025 ಗುರುವಾರ ಹರಿಶ್ಚಂದ್ರ ಘಾಟ್, ಜೆಎಸ್‌ಎಸ್ ಕಾಲೇಜು ಪಕ್ಕ ಚಾಮುಂಡಿಬೆಟ್ಟದ ತಪ್ಪಲು ಮೈಸೂರು ಇಲ್ಲಿ ನೆರವೇರುವುದು.

ದುಃಖತಪ್ತರು : ಧರ್ಮಪತ್ನಿ ಶ್ರೀಮತಿ ಇಂದ್ರರಾಣಿ, ದುರ್ಗ ದರ್ಶನ್ ಹಾಗೂ ಕುಟುಂಬವರ್ಗದವರು

MONEY MITHRA CHIT FUND
mmchits.com

We are hiring!

POSITIONS
- **BUSINESS DEVELOPMENT MANAGER** Min 5 yrs experience in Chit Fund industry.
- **BUSINESS DEVELOPMENT EXECUTIVE** 2 years experience in Chit Fund industry.
- **COLLECTION EXECUTIVE** Experience in Chit Fund industry.
- **OPERATION EXECUTIVE** (FEMALE) Experience in Chit Fund industry.
- **TELECALLER** (FEMALE) Experience in Chit Fund industry.

SALARY AS PER MARKET STANDARDS INCLUSIVE ESI & PF (+INCENTIVE)

SUBMIT YOUR CV : hr@moneymithra.com

Contact for more details :
9663153537 | 9611586776

MONEYMITHRA CHITS Pvt. Ltd.
#2899/3, 1st Flr, 1st crs, Pampapati Rd, Saraswathipuram, Mysuru

---

Premium Residential CONSTRUCTION
One Package. One Price.
- 300+ Completed Projects
- 15+ Years of Expertise
- Quality, Transparency & On-Time Delivery

Price: ₹2,349/-* All-Inclusive per sq. ft.

90199-23183

ಮೂಡಾ ಅನುಮೋದಿತ ಸೈಟುಗಳು ಮಾರಾಟಕ್ಕಿವೆ

ಪ್ರಧಾನ ಸ್ಥಳದಲ್ಲಿ,ಸಬರ್ಬನ್ ಬಸ್ ಸ್ಟಾಂಡಿನಿಂದ ಕೇವಲ 5 ಕಿಲೋಮೀಟರ್ ದೂರದಲ್ಲಿರುವ ರಿಂಗ್ ರೋಡ್, ಟಿ. ನರಸೀಪುರ ಹೈವೇ ಜಂಕ್ಷನ್ ಬಳಿ 30x40 ಉತ್ತರ ಹಾಗೂ ದಕ್ಷಿಣ ದಿಕ್ಕಿನ ನಿವೇಶನಗಳು ತಕ್ಷಣ ನೋಂದಣಿಗೆ ರೆಡಿಯಾಗಿವೆ. ರೂ.5250/Sq.ft

ಸೈಟ್ ಬಗ್ಗೆ ಹೆಚ್ಚಿನ ವಿವರ/ವೀಕ್ಷಿಸಲು ಸಂಪರ್ಕಿಸಿ:
9964906588/9901602702

HEALTH TO WEALTH SEMINAR
FREE DENTAL CHECKUP CAMP
By Dr. Vijay Kumar C.N., MDS
Endodontist + Esthetic Dentist
and
OPPORTUNITY SEMINAR for Retired Officials, Senior Citizens, Housewives and Businessmen.
Date: 13th September 2025 followed by Lunch
Call for Free Registration 9343550070 / 9880808561

WANTED
- General Manager
- HR
- Intensivist
- Duty Doctors
- Nursing Staff: Male/Female
- Receptionist
- X Ray Technician

Contact: 7259355002

WANTED IMMEDIATELY
For a reputed resort in Mysuru
* CHEF(Chinese)
* HOUSE KEEPING STAFFS
* SECURITY GUARD

Contact:- 99455 46713

ಶ್ರೀ ಶಾಶ್ವತಿ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ.,
ನಂ.540/1, 15ನೇ ಮೈನ್, ಕುವೆಂಪು ಸ್ಕೂಲ್ ಎದುರು, ಸರಸ್ವತಿಪುರಂ, ಮೈಸೂರು–570009

2024–25ನೇ ಸಾಲಿನ ಸಂಘದ 10ನೇ ವಾರ್ಷಿಕ ಮಹಾಸಭೆಯ ಆಹ್ವಾನ ಪತ್ರಿಕೆ

ನಮ್ಮ ಸೊಸೈಟಿಯ 10ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ: 13–09–2025ನೇ ಶನಿವಾರ ಬೆಳಿಗ್ಗೆ11.30 ಘಂಟೆಗೆ ಸರಿಯಾಗಿ ಕುವೆಂಪು ಪ್ರೌಢಶಾಲೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿ ಪುರಂ, ಮೈಸೂರು. ಇಲ್ಲಿ ನಮ್ಮ ಸಂಘದ ಅಧ್ಯಕ್ಷರಾದ ಡಾ॥ ವಿ. ಭಾನುಪ್ರಕಾಶ್ ಶರ್ಮರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಗಿದೆ.ಸನ್ಮಾನ್ಯ ಸದಸ್ಯರು ಸಕಾಲದಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಯಾಗಿ ನಡಿಸಿಕೊಡಬೇಕೆಂದು ವಿನಂತಿಸಿದೆ

ಆಡಳಿತ ಮಂಡಳಿಯ ಪರವಾಗಿ
ಸಹಿ/– ಡಿ.ಟಿ, ಪ್ರಕಾಶ್, ಉಪಾಧ್ಯಕ್ಷರು

ಬೇಕಾಗಿದ್ದಾರೆ
ಸೇಲ್ಸ್‌ಗರ್ಲ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ ಕಂಪ್ಯೂಟರ್ ಗೊತ್ತಿರಬೇಕು
ಸಂಬಳ 15000-20000/-
Ph.7406 369 369

J.K Constructions
We Undertake all Types of Civil Works, Residential, Commercial and Industrial Constructions
Repair and Renovation Works.
8296698852

HOUSE FOR RENT
Furnished two Bedrooms, 1st Floor House for Rent at Vijayanagar 2nd Stage, near Vidyavardhaka Engineering College, Mysore
9901212352

PROPERTIES FOR SALE
Ready for Registration
Prime Locations

30x40
Near Vivekananda Circle

43X93
East Facing Ashokapuram Railway Station 100Mtr Near Bedarakanappa Temple.

40x90
South Facing
Kote Hundi Main Road
(Brokers Excuse)
9008111454

PUBLIC NOTICE

My client by name Sadashiva, s/o Gurumallappa. Aged about 54 years residing at 3rd cross, KHB colony Nanjangud. Intend to purchase the below mention schedule property, the schedule property belongs to one K.N. Swamy, S/o Nagappa and family of Kebbepura Village. Harave Hobli, Chamarajanagar taluk. The said K.N. Swamy, S/o Nagappa and family executed an agreement to sell the below schedule property for Rs. 10,00,000/- and obtained Rs. 5,00,000/- as advance from my client. If anyone, or any body, or any objector, right to over the schedule property issue notice or objection to our party or to Advocate within 15 days from the date of publishing the notice. If fail to comply this notice, my client will move as per law and considered no objection from any one.

SCHEDULE

1) The Agriculture Land bearing Sy. No.73/1 measuring total extent of 32 Guntas situated at Kebbepura Village, Harave Hobali, Chamarajanagar Taluk, bounded on: East By: Land belongs to Kyatappana Ningappa ; West By: Land of Nagappa ; North By: Land of Gundappa ; South By: Land of Kashi Aradhya.

Sd/- A.C. PRAKASHA, B.A., LL.B.,
ADVOCATE
1st Floor, Ramamurthy Layout, Nanjangud-Ooty Main Road, Opp. Rural Police Station, Nanjangud.
Mob: 9945459009

Date: 08-09-2025
Place: Nanjangud

PUBLIC NOTICE

My client by name Sadashiva, s/o Gurumallappa. Aged about 54 years residing at 3rd Cross, KHB colony Nanjangud. Intend to purchase the below mention schedule property, the schedule property belongs to one Basappa, S/o Nagappa and family of Kebbepura Village, Harave Hobli, Chamarajanagar Taluk. The said Basappa, S/o Nagappa and family executed an agreement to sell the below schedule property for Rs. 15,00,000/- and obtained Rs. 5,00,000/- as advance from my client. If anyone, or any body, or any objector, right to over the schedule property issue notice or objection to our party or to Advocate within 15 days from the date of publishing the notice. If fail to comply this notice, my client will move as per law and considered no objection from any one.

SCHEDULE

1). The Agriculture Land bearing Sy. No. 73/2 measuring total extent of 1 acres, 26 Guntas situated at Kebbepura Village, Harave Hobali, Chamarajanagar Taluk, bounded on:- East By: Land of Nagappa : West By : Road ; North By: Land of Gundappa ; South By: Land of Bellappa.

Sd/- A.C. PRAKASHA, B.A., LL.B.,
ADVOCATE
1st Floor, Ramamurthy Layout, Nanjangud-Ooty Main Road, Opp. Rural Police Station, Nanjangud.
Mob: 9945459009

Date: 08-09-2025
Place: Nanjangud

FOR SALE
PRIME RESIDENTIAL PLOTS

SADHANA LAYOUT
40 x 60 East Facing
Near Chamundeshwari Railway Layout, Opp to Kusuma Chandrasekhar Convention Hall, KRS Road, Mysuru

ANURADHA AVENUE
30 x 40
Opp Wipro, Off KRS Road, Mysore

Call : 70198 25495

G9 projects
Designing your Dreams
Vee2 Developers

MUDA APPROVED
e - Khata Ready
VAISHNAVI LAYOUT
RT NAGAR ENTRANCE
30×40 30×50 Sites
8088-707-707

VANITHA SADANA
SMT, SUSHEELA BAI SRI NAGESHA RAO EDUCATIONAL AND CHARITABLE TRUST,
4, 7th Cross, Krishnamurthy Puram, Mysuru-570004,
TEL NO. 0821-2332124

ವನಿತಾ ಸದನ–80ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮಾನ್ಯ ಸದಸ್ಯರೇ ಸಂಘದ 2024–25ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ: 12–09–2025ನೇ ಶುಕ್ರವಾರದಂದು ಸಂಜೆ 4–00 ಗಂಟೆಗೆ ವನಿತಾ ಸದನ, ಶ್ರೀಮತಿ ಸುಶೀಲಾ ಬಾಯಿ ಶ್ರೀ ನಾಗೇಶ ರಾವ್ ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು, ಇಲ್ಲಿ ನಡೆಸಲಾಗುವುದು. ದಯಮಾಡಿ ಎಲ್ಲಾ ಸದಸ್ಯರು ತಪ್ಪದೇ ವಾರ್ಷಿಕ ಮಹಾಸಭೆಗೆ ಆಗಮಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ.

ಈ ಸಂಬಂಧ ಆಹ್ವಾನ ಪತ್ರಿಕೆ ತಲುಪದಿದ್ದವರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಹಾಜರಾಗಲು ಕೋರುತ್ತೇವೆ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/- ಯಶಸ್ವಿನಿ ಜಗದೀಶ್, ಗೌರವ ಕಾರ್ಯದರ್ಶಿನಿ

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

WANTED
ACCOUNTS ASSISTANT: (Female)
B.Com graduate with knowledge of Tally. Candidate with two-wheeler and driving license preferred.
Please send your resume addressed to:
The Manager, **Raghulal & Co.,**
Sayyaji Rao Road, Mysore-570001

